ಗದ ಕೈಯವನೂ, ಗೋಪಾಲ ಬಾಲಪರಿವೃತನೂ ಆದ ಶ್ರೀಕೃಷ್ಣನನ್ನು ಕರೆದುಕೊಂಡು ಬಂದು, ಯಶೋದೆ ದೇವಕಿಯ ಪಾದಗಳಿಗೆ ಪ್ರಣಾಮಮಾಡಿಸಿದಳು. ಗೊಲ್ಲವೇಷದ ಆ ಪುತ್ರನು ಅವಳಿಗೆ ಮಣಿದು ಬಳಿಯಲ್ಲೇ ಕುಳಿತಳು. ದೇವಕಿ ಅವನ ಸ್ಪರ್ಶದಿಂದ ಸುಖಿಸಿ ಬಲುಹೊತ್ತು ಅವನನ್ನೇ ನೋಡುತ್ತಿದ್ದಳು. ಆಮೇಲೆ ಯಶೋದೆಯೊಂದಿಗೆ "ನೀನು ಇಂಥ ಪುತ್ರನನ್ನು ಯಾವಾಗಲೂ ನೋಡುತ್ತಿರುತ್ತೀಯೆ. ಅದರಿಂದ ಹೀಗೆ ವನದಲ್ಲಿರುವುದೂ ಸಂತೋಷವೇ. ಆದರೆ ಸಂತಾನವೊಂದಿಲ್ಲದೆ ಸಮಸ್ತಪೃಥ್ವಿಯ ಒಡೆತನ ದೊರೆತರೂ ಅದು ಸುಖವಲ್ಲ"—ಎಂದಳು. ಅದಕ್ಕೆ ಯಶೋದೆ "ಸ್ವಾಮಿನಿ, ನೀನು ಹೇಳಿದ್ದು ದಿಟವೇ. ನನ್ನ ಮನಸ್ಸಂತೋಷವನ್ನು ಅಧಿಕವಾಗಿಸುವ ಈ ನಿತ್ಯಭೃತ್ಯನು ನಿಮ್ಮ ಆಶೀರ್ವಾದದಿಂದ ಚಿರಂಜೀವಿಯಾಗಿರಲಿ ಎಂಬುದೇ ನನ್ನ ಪ್ರಾರ್ಥನೆ." ಎಂದಳು. ಇಷ್ಟರಲ್ಲಿ ಪುತ್ರನನ್ನು ವಾತ್ಸಲ್ಯದಿಂದ ನೋಡುತ್ತಿದ್ದ ದೇವಕಿಗೆ ಸ್ತನ್ಯವುಕ್ಕಿತು. ಆಗ ಅವಳು "ಮಗೂ, ಶತ್ರುಭಯದಿಂದಾಗಿ ನಿನ್ನನ್ನು ಬಿಟ್ಟುಕೊಟ್ಟೆನಲ್ಲದೆ ಕೆಟ್ಟಮನಸ್ಸಿನಿಂದಲ್ಲ"—ಎಂಬ ತನ್ನೊಳಗಿನ ನಿರ್ಮಲಚಿತ್ತವನ್ನು ಪ್ರಕಟಿಸುವ ಹಾಗೆ ತೋರಿದಳು. ಆ ಕೂಡಲೇ "ಎಲ್ಲಿಯಾದರೂ ರಹಸ್ಯವು ಬಯಲಾದೀತು" ಎಂದು ಗಾಬರಿಗೊಂಡು ಬುದ್ಧಿಶಾಲಿಯಾದ ಬಲದೇವನು ಕ್ಷೀರಘಟದಿಂದ ಆ ವಾತ್ಸಲ್ಯಮಯಿ ತಾಯಿಯನ್ನು ಅಭಿಷೇಕಮಾಡಿಬಿಟ್ಟನು. ಆಮೇಲೆ ಬಲದೇವನು ಆ ದೇವಕಿಯನ್ನು ಒಡಗೊಂಡು ಮಥುರೆಗೆ ಮರಳಿಬಂದನು. ಈ ಸುದ್ದಿಯನ್ನು ವಸುದೇವನಿಗೂ ತಿಳಿಸಿದನು.

ಕೃಷ್ಣನು ಅತಿ ಚತುರನಾಗಿದ್ದನು. ಆದ್ದರಿಂದ ಬಲದೇವನು ಪ್ರತಿದಿನವೂ ಅವನಿದ್ದೆಡೆಗೆ ಹೋಗಿ ಅವನಿಗೆ ಅಲ್ಪಾವಧಿಯಲ್ಲೇ ಕಲಾಗುಣಶಿಕ್ಷೆಯನ್ನಿತ್ತನು. ನಿರ್ವಿಕಾರನೂ ಸುಕುಮಾರಚಿತ್ತನೂ ಆದ ಕುಮಾರ ಕೃಷ್ಣನು ಕ್ರೀಡಾಸಮಯದಲ್ಲಿ ಯೌವನವತಿಯರಾದ ಗೋಪಿಕೆಯರೊಂದಿಗೆ ರಾಸಕ್ರೀಡೆಯಾಡುತ್ತಿದ್ದನು. ತನ್ನ ಕರಾಂಗುಲಿಸ್ಪರ್ಶದಿಂದ ಅವರಿಗೆ ಸುಖವುಂಟುಮಾಡುತ್ತಿದ್ದರೂ ತಾನು ಮಟ್ಟಿಗೆ ನಿರ್ವಿಕಾರನಾಗಿರುತ್ತಿದ್ದನು. ಹಾಗೆಯೇ ತನಗೆ ಅವರ ಹಸ್ತಾಂಗುಲಿಸ್ಪರ್ಶವಾದರೂ ನಿರ್ವಿಕಾರನಾಗಿರುತ್ತಿದ್ದನು. ಕ್ರೀಡಾಕಾಲದಲ್ಲಿ ಕೃಷ್ಣನೊಡನಿರುವಾಗ ಗೋಪಿಕೆಯರಿಗೆ ಸ್ನೇಹಾನುರಾಗವೂ ಒಡನಿಲ್ಲದಾಗ ವಿರಹಾನುರಾಗವೂ ಅಧಿಕವಾಗುತ್ತಿತ್ತು.

ಕೃಷ್ಣನ ಅತಿಮಾನುಷವರ್ತನೆಗಳನ್ನು ಕೇಳಿ ಒಂದು ದಿನ ಕಂಸನಿಗೆ ಇವನ ಮೇಲೆ ಸಂದೇಹವುಂಟಾಗಿ ಇವನೇ ತನ್ನ ವೈರಿಯೆಂದರಿತು ಅವನನ್ನು ಹುಡುಕಲೆಂದು ಗೋಕುಲಕ್ಕೆ ಬಂದನು. ಕೃಷ್ಣನು ತನ್ನ ಸಖರೊಂದಿಗೆ ಅವನ ಬಳಿಗೆ ಬರುತ್ತಿದ್ದುದು ಕಂಡು ಅವನ ತಾಯಿ ಯಾವುದೋ ಉಪಾಯವನ್ನು ಯೋಚಿಸಿ ಅವನನ್ನು ತನ್ನ ಆತ್ಮೀಯ ಜನರ ಮೂಲಕವಾಗಿ ಊರಿನ ಹೊರಗೆ ಕಳಿಸಿಬಿಟ್ಟಳು. ಅಲ್ಲಿ ಅವನು, ಭಯಂಕರ ನೇತ್ರಾಸ್ಯಗಳ, ಮಹಾಶರೀರದ, ವಿಕೃತಕಾಯದ ತಾಡವಿಯೆಂಬ ಕುರಾಕ್ಷಸಿ ಗಟ್ಟಿಯಾಗಿ ಅಟ್ಟಹಾಸಮಾಡುತ್ತ ಬರಲು, ಅವಳನ್ನು ನೋಡುತ್ತಲೇ ಹೊಡೆದೋಡಿಸಿಬಿಟ್ಟನು. ಆ ಗೋಕುಲದಲ್ಲಿ ಶಾಲ್ಮಲಿವೃಕ್ಷದ ಕಟ್ಟಿಗೆಯ ಮಂಟಪವೊಂದು ಸಿದ್ಧವಾಗುತ್ತಿತ್ತು, ಅಲ್ಲಿ



ಅದರ ದೊಡ್ಡದೊಡ್ಡ ಸ್ತಂಭಗಳು ಬಿದ್ದಿದ್ದುವು. ಅವುಗಳನ್ನು ಬೇರಾರೂ ಎತ್ತುವುದು ಸಾಧ್ಯವಿರಲಿಲ್ಲ. ಆದರೆ ಕೃಷ್ಣನು ಅವುಗಳನ್ನು ಒಬ್ಬನೇ ಮೇಲೆತ್ತಿ ನಿಲ್ಲಿಸಿದನು. ಇದನ್ನು ನೋಡಿ ಅವನ ತಾಯಿ ಅವನ ಸಾಮರ್ಥ್ಯದ ಬಗ್ಗೆ ನಿಃಶಂಕಿತಳಾಗಿ ಅವನನ್ನು ಗೋಕುಲದಿಂದ ಹಿಂದಕ್ಕೆ ಕರೆತಂದಳು. ದುಷ್ಟನೂ ಸುಖಾರ್ಥಿಯೂ ಆದ ಕಂಸನು ತನಗೆ ಗೋಕುಲದಲ್ಲಿ ಕೃಷ್ಣನು ಸಿಕ್ಕದಿರಲು ಮಥುರೆಗೆ ಮರಳಿದನು.

ಆ ಕಾಲದಲ್ಲೇ ಕಂಸನ ಮನೆಯಲ್ಲಿ ಸಿಂಹವಾಹಿನೀ ನಾಗಶಯ್ಯೆ, ಅಜಿತಂಜಯವೆಂಬ ಧನುಸ್ಸು, ಪಾಂಚಜನ್ಯವೆಂಬ ಶಂಖ—ಈ ಮೂರು ಅದ್ಭುತವಸ್ತುಗಳು ಪ್ರಕಟವಾದುವು. ಕಂಸನ ನೈಮಿತ್ತಕನು "ಯಾವಾತನು ಈ ನಾಗಶಯ್ಯೆಯನ್ನೇರಿ ಈ ಧನುಸ್ಸಿಗೆ ಹೆದೆಯೇರಿಸುತ್ತಾನೋ ಹಾಗೆಯೇ ಪಾಂಚಜನ್ಯವನ್ನು ಪೂರಿಸುತ್ತಾನೋ ಆತನೇ ನಿನ್ನ ಶತ್ರು" ಎಂದನು. ನೈಮಿತ್ತಿಕಾದೇಶದಂತೆ ಕಾರ್ಯಪ್ರವೃತ್ತನಾಗುವ ಕಂಸನು ತನ್ನ ಶತ್ರುವನ್ನು ಪತ್ತೆಮಾಡಲೆಂದು ಆತ್ಮೀಯರ ಮೂಲಕ ನಗರದಲ್ಲಿ ಒಂದು ಘೋಷಣೆ ಹೊರಡಿಸಿದನು. "ಯಾವಾತನು ಇಲ್ಲಿಗೆ ಬಂದು ಸಿಂಹವಾಹಿನೀ ನಾಗಶಯ್ಯೆಯನ್ನು ಏರುತ್ತಾನೋ ಅಜಿತಂಜಯ ಧನುಸ್ಸಿಗೆ ಹೆದೆಯೇರಿಸುತ್ತಾನೋ ಪಾಂಚಜನ್ಯ ಶಂಖವನ್ನು ಪೂರಿಸುತ್ತಾನೋ ಅಂಥವನು ಪುರುಷೋತ್ತಮನೆಂದೂ ಪರಾಜಿತಾಶೇಷಪರಾಕ್ರಮನೆಂದೂ ಪರಿಗಣಿಸಲ್ಪಡುತ್ತಾನೆ. ಪುರುಷಾಂತರಜ್ಞನಾದ ಕಂಸನು ಅಂಥವನನ್ನು ತುಂಬ ಮೆಚ್ಚಿಕೊಳ್ಳುತ್ತಾನೆ, ಇಷ್ಟವ್ಯಕ್ತಿಯಾಗಿ ತಿಳಿಯುತ್ತಾನೆ, ಅಲಭ್ಯವಸ್ತುಗಳನ್ನು ಕೊಡುತ್ತಾನೆ"—ಎಂಬುದೇ ಆ ಘೋಷಣೆ. ಕಂಸನ ಈ ಘೋಷಣೆಯನ್ನು ಕೇಳಿ ಅನೇಕ ರಾಜರು ಮಥುರೆಗೆ ಬಂದರು. ನಾಗಶಯ್ಯೆಯನ್ನೇರುವುದೇ ಮೊದಲಾದುವನ್ನು ಮಾಡುವುದರಲ್ಲಿ ನಿರತರಾದರು. ಆದರೆ ಹೆದರಿ ಹಿಮ್ಮೆಟ್ಟಿ ನಾಚಿಕೆಪಟ್ಟು ಹೊರಟುಹೋದರು.

ಒಂದು ದಿನ ಕಂಸನ ಪತ್ನಿ ಜೀವದ್ಯಶೆಯ ಸೋದರ ಭಾನುವು ಯಾವುದೋ ಕಾರ್ಯನಿಮಿತ್ತ ಗೋಕುಲಕ್ಕೆ ಬಂದನು. ಅಲ್ಲಿ ಶ್ರೀಕೃಷ್ಣನ ಸಾಮರ್ಥ್ಯವನ್ನು ನೋಡಿ ತುಂಬ ಸಂತಸಗೊಂಡು, ಅವನನ್ನು ಜತೆಯಲ್ಲಿ ಮಥುರೆಗೆ ಕರೆತಂದನು. ಇಲ್ಲಿಗೆ ಬಂದು ಯಾವ ನಾಗಶಯ್ಯೆಯು ಸಮೀಪಭೂಮಿ ಸಂಸಜ್ಜಿತವಾಗಿದ್ದಿತೋ, ಯಾವುದರ ಹಿನ್ನೆಲೆಯು ಚಂದ್ರಸನ್ನಿಭವಾಗಿ ಉಜ್ಜ್ವಲವಾಗಿದ್ದಿತೋ, ಯಾವುದು ಭಯಂಕರವಾದ ಹೆಡೆಗಳಿಂದ ರೌದ್ರವಾಗಿದ್ದಿತೋ ಅಂಥ ಮಹಾಹಿಶಯ್ಯೆಯ ಮೇಲೆ ಕೃಷ್ಣನು ಸ್ವಾಭಾವಿಕ ಶಯ್ಯೆಯ ಮೇಲೇರುವಂತೆ ಸುಲಭವಾಗಿ ಏರಿಬಿಟ್ಟನು. ಭುಜಂಗಮೋದ್ಗೀರ್ಣವಾದ ಧೂಮವನ್ನು ಅತ್ತಿತ್ತ ವಿಕೀರ್ಣಗೊಳಿಸುವಂಥ ಮಹಾಧನುಸ್ಸಿಗೆ ಹೆದೆಯೇರಿಸಿದನು. ದಿಕ್ತಟಗಳನ್ನು ಶಬ್ದದಿಂದ ತುಂಬುವ ಶಂಖವನ್ನು ಪೂರೈಸಿದನು. ಆಗ ಪ್ರಕಟವಾದ ಕೃಷ್ಣನ ಲೋಕೋತ್ತರವಾದ ಮಾಹಾತ್ಮ್ಯವನ್ನು ನೋಡಿ ಸಮಸ್ತರೂ ಕ್ಷುಬ್ಧಸಮುದ್ರದಂತೆ ಮಹಾಶಬ್ದ ಮಾಡುವ ಈತನಾರೋ ಮಹಾಪುರುಷನೆಂದು ಘೋಷಿಸಿದರು. ಕೃಷ್ಣನ ಈ ಪರಾಕ್ರಮವನ್ನು ನೋಡಿ ಬಲದೇವನಿಗೆ ದುಷ್ಟ ಕಂಸನ ಕಡೆಯಿಂದ ವಿಪತ್ತಿನ ಶಂಕೆಯುಂಟಾಯಿತು. ಅದರಿಂದ ಅವನು ಆಜ್ಞಾಬದ್ಧನಾದ ಕೃಷ್ಣನನ್ನು, ಗುಣಾನುರಾಗಿಗಳಾದ ತನ್ನ ಆತ್ಮೀಯಜನರನ್ನು ಜತೆಮಾಡಿ ಗೋಕುಲಕ್ಕೆ ಕಳಿಸಿದನು.

ಗೌತಮಸ್ವಾಮಿ ಹೇಳುತ್ತಾನೆ: ''ಪೂರ್ವಜನ್ಮದಲ್ಲಿ ಉಂಟಾದ ಜೈನಧರ್ಮದಿಂದ ಉತ್ಕೃಷ್ಟತೆಯನ್ನು ಪಡೆದವನನ್ನು ಮದೋನ್ಮತ್ತನಾದ ಶತ್ರು ಏನು ತಾನೆ ಮಾಡ ಬಲ್ಲ ? ಗರ್ಭಾಧಾನದ ಮೊದಲೇ ಆಗಲಿ, ಹುಟ್ಟುವ ಮೊದಲೇ ಆಗಲಿ, ಹೃದಯದಲ್ಲಿ ವೈರಭಾವವನ್ನು ತಳೆದು ಕುಳಿತಿದ್ದರೂ ಅಷ್ಟೇ !''

## ೩೬. ಕಂಸಾಪರಾಜಿತವಧ ವರ್ಣನ

ಹೀಗಿರಲು ಹರಿಯ ನವಶ್ರೀಲೀಲೆಯನ್ನೇ ಮೆರೆಯುವಂತೆ ಶರದೃತು ಬಂತು. ಕಂಸನಾದರೋ ಹರಿಯ ಸಾಹಸಕೃತ್ಯಾದಿಗಳನ್ನು ಕಂಡಿದ್ದನಾದ್ದರಿಂದ ಅವನನ್ನು ನಾಶಮಾಡುವ ಉಪಾಯವನ್ನೇ ಯೋಚಿಸುತ್ತಿದ್ದನು. ಈಗ ಈ ಸಮಯದಲ್ಲಿ ಕಮಲವನ್ನು ತರಲೆಂದು ಗೋಪವರ್ಗವನ್ನು ಯಮುನೆಯ ಆ ಮಡುವಿಗೆ ಕಳಿಸಿ ಕೊಟ್ಟನು. ಅದು ಅತಿ ದುರ್ಗಮಸ್ಥಾನವೂ ಭಯಂಕರ ವಿಷಸರ್ಪ ಸಂಯುತವೂ ಆಗಿತ್ತು. ಕೃಷ್ಣನು ಅನಾಯಾಸವಾಗಿ ಆ ಮಡುವಿಗೆ ನುಗ್ಗಿ, ಕೆರಳಿ ತನ್ನತ್ತ ಬಂದ ಮಹೋಗ್ರವೂ ಫಣಾಮಣಿಕಿರಣಗಳಿಂದ ಅಗ್ನಿಸ್ಫುಲಿಂಗದಂತೆ ತೋರುತ್ತಿದ್ದುದೂ ಅತ್ಯಂತ ಕೃಷ್ಣವರ್ಣವೂ ಆದ ಕಾಲಿಯವೆಂಬ ಸರ್ಪವನ್ನು ಶೀಘ್ರದಲ್ಲಿಯೇ ಮರ್ದನ ಮಾಡಿಬಿಟ್ಟನು. ದಡದ ಮರದ ಕೊಂಬೆಗಳ ಮೇಲೇರಿಕೊಂಡು ಗಾಬರಿಯಿಂದ ನೋಡುತ್ತಿದ್ದ ಗೋಪರ ಜಯಜಯಕಾರವೂ ಬಲದೇವನ ಧೀರಧ್ವನಿಯೂ ಕಿವಿದಾಗಿ ಆನಂದ ತುಂದಿಲನಾದ ಕೃಷ್ಣನು ಭುಜನಿಹತ ಭುಜಂಗನಾಗಿ ಕಮಲವನ್ನು ಕಿತ್ತುಕೊಂಡು ಬೇಗ ದಡ ಸೇರಿದನು. ಮಡುವಿಂದ ಅವನು ಹೊರಬರುತ್ತಿದ್ದಂತೆ ಬಲದೇವನು ಅವನನ್ನು ಸಂತೋಷದಿಂದ ಅಪ್ಪಿಕೊಂಡನು.

ಪರಗುಣಸಹಿಷ್ಣುವಲ್ಲದ ವೈರಿ ಕಂಸನು ಗೋಪಾಲರು ತಂದು ಮುಂದಿರಿಸಿದ ಕಮಲಪುಷ್ಪಗಳನ್ನು ನೋಡಿ ಬಿಸಿಯುಸಿರು ಬಿಟ್ಟನು. ಆಮೇಲೆ ನಂದಗೋಪನ ಮಗನನ್ನು ಮೊದಲುಗೊಂಡು ಎಲ್ಲಾ ಗೋಪರೂ ಇಲ್ಲಿ ಮಲ್ಲಯುದ್ಧಕ್ಕೆ ತಡವಿಲ್ಲದೆ ಸಿದ್ಧವಾಗುವುದಾಗಲಿ ಎಂದಾಜ್ಞೆಯಿತ್ತನು. ಹೀಗೆ ಮಲ್ಲಯುದ್ಧಕ್ಕೆ ಕಠಿನಾಜ್ಞೆಯಿತ್ತು, ಚಕ್ರಕ್ರಕಚ ನಿಶಿತಚಿತ್ತನಾದ ಕಂಸನು ಮಲ್ಲಯುದ್ಧಾಪೇಕ್ಷಿಯಾಗಿ, ಅತ್ಯಂತ ಬಲಿಷ್ಠರಾದ ಕನಿಷ್ಠ-ಜ್ಯೇಷ್ಠ-ಮಧ್ಯಮಶ್ರೇಣಿಯ ಮಲ್ಲರಿಗೆ ಕರೆಕಳಿಸಿ ತನ್ನಲ್ಲಿಗೆ ಬರಮಾಡಿಕೊಂಡನು. ಸ್ಥಿರಚಿತ್ತನಾದ ವಸುದೇವನು ತನ್ನ ಅನಾವೃಷ್ಟಿಯೆಂಬ ಮಗನೊಡನೆ ಕಲೆತು ಮಾತಾಡಿ, ಶತ್ರುವಿನ ವರ್ತನೆಯೇನೆಂದು ಆಗಲೇ ಗ್ರಹಿಸಿ, ತನ್ನೆಲ್ಲಾ ಅಣ್ಣಂದಿರಿಗೂ ಈ ಸಂಗತಿಯನ್ನು ತಿಳಿಸಲು ಹಾಗೂ ಅವರನ್ನೆಲ್ಲ ಮಥುರೆಗೆ ಬರಮಾಡಿಕೊಳ್ಳಲು ಸುದ್ದಿ ಕಳಿಸಿದನು. ಶತ್ರುವಿನ ವರ್ತನೆಯನ್ನರಿತಿದ್ದ ವಸುದೇವನ ಅಣ್ಣಂದಿರೆಲ್ಲ ಚತುರಂಗಸಮೇತರಾಗಿ ಇದ್ದಕಿದ್ದಂತೆ ಮಥುರೆಗೆ ಬಂದರು. ಯದುಕುಲದ ಅರಸರೆಲ್ಲ ಮಥುರೆಗೆ ಬಂದದ್ದು ನೋಡಿ ಕಂಸನಿಗೆ ಅನುಮಾನವಾಯಿತು. ಆದರೆ ಬಹುಕಾಲದ ತನಕ ಅಗಲಿ ದೂರವಾಗಿದ್ದ ಚಿಕ್ಕ ತಮ್ಮ ವಸುದೇವನನ್ನು ನೋಡಲೆಂದು ಅವರೆಲ್ಲ ಬಂದಿದ್ದಾರೆ ಎಂದು ಅವನಿಗೆ ಹೇಳಿದ್ದಾ



ಯಿತು. ಆಗ ಅವನು ನಿಶ್ಶಂಕನಾಗಿ ಅವರನ್ನು ಸ್ವಾಗತಿಸಿದನು. ನಮ್ರತೆಯಿಂದ ವಂದಿಸಿ ಆಯೆಲ್ಲರನ್ನೂ ನಗರಪ್ರವೇಶ ಮಾಡಿಸಿದನು. ಮಥುರೆಯ ಗೃಹಶೋಭೆಯನ್ನು ನೋಡಿ ನಲಿಯುತ್ತ, ನಗರಾಧಿಪತಿ ಕಂಸನು ನೀಡಿದ್ದ ಶ್ರೇಷ್ಠ ಭವನದಲ್ಲಿ ವಸುದೇವನ ಸೋದರರೆಲ್ಲ ಇರತೊಡಗಿದರು. ಕಂಸನಾದರೋ ದಾನಸನ್ಮಾನಾದಿಗಳಿಂದ ಅವರನ್ನು ಪ್ರತಿದಿನವೂ ವಿನಯದಿಂದ ಸೇವಿಸುತ್ತಿದ್ದನು. ಆದರೆ ಮೇಲೆ ಇಂಥ ಪ್ರೀತಿಪೂರ್ವಕವಾದ ನಡೆವಳಿಕೆಯನ್ನು ತೋರಿಸುತ್ತಿದ್ದರೂ ಒಳಗೊಳಗೆ ಕುದಿಯುತ್ತಿದ್ದನು.

ಆಮೇಲೆ ಸಕಲಕಾರ್ಯವನ್ನು ನಿಶ್ಚಯಿಸಿದವನೂ ವೃಷಧವಲ ವಿಶೇಷನೂ ಅತ್ಯಂತ ವಿಜ್ಞನೂ ಬುದ್ಧಿಶಾಲಿಯೂ ಮಲ್ಲಯುದ್ಧಾಭಿಲಾಷಿಯೂ ಆದ ಬಲದೇವನು ಗೋಕುಲಕ್ಕೆ ಹೋಗಿ ಕೃಷ್ಣನೆದುರೇ ಯಶೋದೆಗೆ ಕೂಡಲೆ ಸ್ನಾನ ಮಾಡುವಂತೆ ಹೇಳಿದನು. ''ಹೀಗೇಕೆ ಹೊತ್ತು ಮಾಡುತ್ತಿರುವೆ ? ನಿನ್ನ ಶರೀರದ ಬಗ್ಗೆಯೇ ನಿನಗೆ ಹೀಗೆ ಮರೆವು. ಒಂದಲ್ಲ ಅನೇಕ ಬಾರಿ ಹೇಳಿದರೂ ನಿನ್ನ ಅಭ್ಯಾಸ ಬಿಡುವುದಿಲ್ಲ"—ಎಂದು ನುಡಿದನು. ಬಹುಕಾಲ ಜತೆಜತೆಗೇ ಇರುತ್ತಿದ್ದರೂ ಬಲದೇವನು ಯಶೋದೆಗೆ ಇಂಥ ಕಟುವಚನ ಹಿಂದೆಂದೂ ನುಡಿದಿರಲಿಲ್ಲ. ಇದರಿಂದ ಅವಳು ಭಯಚಕಿತೆಯಾದಳು. ಏನು ಮಾತಾಡದಿದ್ದರೂ ಕಣ್ಣಲ್ಲಿ ನೀರು ತುಂಬಿತು. ಮರುಮಾತಿಲ್ಲದೆ ಬೇಗ ಸ್ನಾನಮಾಡಿ ಅಡುಗೆಗೆ ತೊಡಗಿದಳು.

ಇತ್ತ ಕೃಷ್ಣ ಬಲದೇವರು ಸ್ನಾನಕ್ಕಾಗಿ ನದಿಗೆ ಹೊರಟರು. ಏಕಾಂತವು ದೊರೆತಾಗ ಬಲದೇವನು ಕೃಷ್ಣನೊಂದಿಗೆ ''ಇಂದು ನಿನ್ನ ಈ ಮುಖ ನಿಟ್ಟುಸಿರಿಂದ ಕಣ್ಣೀರಿಂದ ಕಂದಿರುವುದೇಕೆ ? ಹಿಮಹತ ಪದ್ಮದಂತೆ ಕಾಂತಿಹೀನವಾದ ನಿನ್ನ ಮುಖ ಯಾವುದೋ ಮಹತ್ತರವಾದ ಮನೋವ್ಯಥೆಯನ್ನು ಪ್ರಕಟಿಸುತ್ತಿದೆ. ಅದರ ಕಾರಣವೇನು ಹೇಳು'' ಎಂದು ಪ್ರಶ್ನಿಸಿದನು. ಆಗ ಕೃಷ್ಣನು ಪ್ರಸನ್ನವದನನಾಗಿ ಬಲದೇವನ ಕಡೆ ನೋಡುತ್ತ, ''ಆರ್ಯ, ನನ್ನ ಮಾತು ಕೇಳು. ನನ್ನ ಮುಖವಿಕಾರದಿಂದ ಮನಸ್ಸಂತಾಪವು ಪ್ರಕಟವಾಗುತ್ತಿದೆ, ನಿಜ. ನೀನು ಶಾಸ್ತ್ರಜ್ಞನಾದ ವಿದ್ವಾಂಸ, ಲೋಕವ್ಯವಹಾರಜ್ಞ, ನಗರದ ಜನರಿಗೆ ಸನ್ಮಾರ್ಗೋಪದೇಶ ನೀಡುತ್ತೀಯೆ. ಇಂಥ ನೀನು ಇಂದು ನಮ್ಮ ಪೂಜ್ಯಮಾತೆ ಯಶೋದೆಯನ್ನು ಅತಿ ಕಠಿನೋಕ್ತಿಗಳಿಂದ ತಿರಸ್ಕರಿಸಿದ್ದು ಸರಿಯೇ ?''—ಎಂದನು. ಹೀಗೆ ದುಃಖವನ್ನು ಎತ್ತಿ ನುಡಿದ ಕೃಷ್ಣನನ್ನು ಬಲದೇವನು ಗಾಢವಾಗಿ ಅಪ್ಪಿದನು. ಆಮೇಲೆ ಅವಿರಲ ಬಾಷ್ಪವಾರಿ ಧಾರಾಪೂರಿತನಾಗಿ ಕೃಷ್ಣನಿಗೆ ಎಲ್ಲಾ ವೃತ್ತಾಂತವನ್ನೂ ತಿಳಿಸಿದನು. ಮೊದಲು ಜರಾಸಂಧಪುತ್ರಿಯೂ ಕಂಸಪತ್ನಿಯೂ ಆದ ಜೀವದ್ಯಶೆಗೆ, ಅತಿ ಗರ್ವಿಷ್ಠೆಯಾಗಿ ನಡೆದವಳಿಗೆ ಅತಿಮುಕ್ತಕಮುನಿ ಹೇಳಿದ ಅವಂಧ್ಯವಚನವನ್ನು ತಿಳಿಸಿದನು. ಆಮೇಲೆ ಕ್ಷುಬ್ಧಹೃದಯನಾದ ಕಂಸನು ದೇವಕಿಯ ಗರ್ಭದಲ್ಲಿ ಜನಿಸಿದ ಆರು ಮಂದಿ ಪುತ್ರರನ್ನು ಕೊಂದುಹಾಕಿದ ಕೋಪಹೇತುವಾದ ಸಂಗತಿಯನ್ನು ಹೇಳಿದನು. ಆಮೇಲೆ ''ನೀನು ಪ್ರಸವಕಾಲಕ್ಕೆ ಮೊದಲೇ ಹುಟ್ಟಿದೆ ; ಹುಟ್ಟುತ್ತಲೇ ನಿನ್ನನ್ನು ನಾವು ಗೋಕುಲದಲ್ಲಿ ಬಚ್ಚಿಟ್ಟು ಯಶೋದೆಯ ಮನೆಯಲ್ಲಿ ಬಿಟ್ಟುಹೋದೆವು.''—ಎಂಬುದನ್ನು ಹೇಳಿ

ದನು. ಇದಾದಮೇಲೆ ಬಾಲ್ಯಕಾಲದಿಂದಲೇ ಶತ್ರುವು ಅವನನ್ನು ತೀರಿಸಲು ಏನೇನು ಸಾಧನೆ ನಡೆಸಿದನು---ಅವನ್ನು ವಿವರಿಸಿದನು. ಕೊನೆಗೆ "ಈಗ ಕಂಸನು ಭಯಂಕರ ಮಲ್ಲಯುದ್ಧವನ್ನು ನಿಶ್ಚಯಿಸಿ ನಿನ್ನನ್ನು ಕೊಲ್ಲಲು ಮನಸ್ಸುಮಾಡಿದ್ದಾನೆ" ಎಂಬುದನ್ನು ಹೇಳಿದನು. ಹೀಗೆ ಕೃಷ್ಣನು ಅಣ್ಣನಿಂದ ಸಮಸ್ತ ಹರಿವಂಶ ತಂದೆ ಗುರು ಬಂಧುಗಳು ಸೋದರರು–ಇವರ ವೃತ್ತಾಂತವನ್ನು ತಿಳಿಯುತ್ತಲೂ ತುಂಬಾ ಸಂತೋಷಗೊಂಡನು. ಅಣ್ಣನ ಬಲವಾದ ರಕ್ಷೆ ಪಡೆದು ಸಿಂಹಸಮಾನನಾಗಿ ಶೋಭಿಸಿದನು.

ಆಮೇಲೆ ಅವರಿಬ್ಬರೂ ಮಹಾಮತ್ಸ್ಯಗಳಂತೆ ಯಮುನೆಯಲ್ಲಿ ಸ್ನಾನಮಾಡಿದರು. ಬಳಿಕ ಗೋಪರೊಡಗೂಡಿ ಮನೆಗೆ ಬಂದು ಹಯ್ಯಂಗವೀನ-ಸೂಪ-ವ್ಯಂಜನ-ಕ್ಷೀರ-ದಧಿಯುಕ್ತವಾದ ಮೃಷ್ಟಾನ್ನ ಭೋಜನವುಂಡು, ತಾಂಬೂಲವನ್ನು ಸೇವಿಸಿದರು. ಆಮೇಲೆ ವಿವಿಧ ಕರಣದಕ್ಷರೂ ಮಲ್ಲವಿದ್ಯೆಯನ್ನು ನಿರ್ದುಷ್ಟವಾಗಿ ಬಲ್ಲವರೂ ಆದ ಅವರಿಬ್ಬರೂ ನೀಲಾಂಬರ ಪೀತಾಂಬರಧರರಾಗಿ ಉಚಿತವೇಷದಿಂದ ಸಜ್ಜಾಗಿ ನಡೆದರು. ವಿಶಾಲವಕ್ಷಸ್ಥಲದಲ್ಲಿ ಸಿಂದೂರವನ್ನು ಹಾಕಿಕೊಂಡರು. ನವವನಮಾಲೆ ಮಾಲತೀ ಪುಷ್ಪಧರರಾದರು. ಕಂಸನನ್ನು ಕೊಲ್ಲಲು ಮನಸ್ಸಿನಲ್ಲಿಯೇ ನಿಶ್ಚಯಿಸಿಕೊಂಡು, ಉಗ್ರ ಮಲ್ಲವೇಷಧಾರಿಗಳಾದ ಸ್ವಜನವರ್ಗಪರಿವೇಷ್ಟಿತ ಗೋಪರೊಂದಿಗೆ ಕೂಡಿಕೊಂಡು ಮಥುರೆಗೆ ನಡೆದರು.

ದಾರಿಯಲ್ಲಿ ಕಂಸನ ಭಕ್ತರಾದ ಅಸುರರಲ್ಲಿ ಒಬ್ಬ ಮಹಾಸರ್ಪದ ವೇಷದಲ್ಲಿಯೂ, ಇನ್ನೊಬ್ಬನು ಕಟುಶಬ್ದದ ಕತ್ತೆಯ ವೇಷದಲ್ಲಿಯೂ, ಮತ್ತೊಬ್ಬನು ದುಷ್ಟಾಶ್ವದ ವೇಷದಲ್ಲಿಯೂ ನಗರಪ್ರವೇಶ ಕಾಲದಲ್ಲಿ ವಿಘ್ನಗಳನ್ನು ಒಡ್ಡಿದರು. ಆಯೆಲ್ಲರೂ ಭಯಂಕರವಾಗಿ ಬಾಯ್ತೆರೆದು ಮುಂದೆ ಬಂದರು. ಆದರೆ ಕೃಷ್ಣನು ಅವರನ್ನೆಲ್ಲ ಹೊಡೆದು ಓಡಿಸಿದನು.

ನಗರಪ್ರವೇಶಮಾಡುತ್ತ ಆ ಸೋದರರು ದ್ವಾರವನ್ನು ಸಮೀಪಿಸುತ್ತಲೂ ಶತ್ರುವಿನ ಆಜ್ಞೆಯಿಂದ ಅವರ ಮೇಲೆ ಒಮ್ಮೆಗೇ ಚಂಪಕ ಮತ್ತು ಪಾದಾಭರ ಎಂಬ ಎರಡು ಮದದಾನೆಗಳನ್ನು ನುಗ್ಗಿಸಲಾಯಿತು. ಎದುರಿಗೆ ಬಂದ ಅವನ್ನು ನೋಡುತ್ತಲೂ ಆಯಿಬ್ಬರೂ ಮಲ್ಲರಂಗದಲ್ಲಿ ಪ್ರಥಮಮಲ್ಲನನ್ನು ಕಂಡಂತೆಯೇ ನಲಿದರು. ಅವುಗಳಲ್ಲಿ ಬಲದೇವನು ಚಂಪಕವನ್ನೂ ಕೃಷ್ಣನು ಪಾದಾಭರವನ್ನೂ ಎದುರಿಸಿ ಅಡ್ಡಗಟ್ಟಿದರು. ಆ ನರಮಲ್ಲ ಕರಿಮಲ್ಲರಿಗೆ ನಡೆದ ಮಲ್ಲಯುದ್ಧ ನೋಡುವವರಿಗೆ ನವನವೀನವೂ ಆಶ್ಚರ್ಯಾವಹವೂ ಆಗಿತ್ತು. ಮದಗಜಗಳು ತಮ್ಮ ಕೋಡುಗಳನ್ನು ಸೊಂಡಿಲಿಂದ ಬಚ್ಚಿಟ್ಟುಕೊಂಡಿದ್ದರೂ ಆ ಸೋದರರು ದೃಢಪದಹತಿಪ್ರಹಾರದಿಂದ ಅವುಗಳ ಕೊಂಬುಗಳನ್ನು ಮುರಿದರು. ಅವು ಭಯಂಕರವಜ್ರಪಾತವಾದಂತೆ ಅರಚುತ್ತ ಮಡಿದುಬಿದ್ದವು. ಸೋದರರು ನಗರವನ್ನು ಹೊಕ್ಕರು. ಗೋಪರ ಜಯಧ್ವನಿ ಮಥುರೆಯನ್ನು ವ್ಯಾಪಿಸಿತು.

ಅನಂತರ ಕಮಲದ ಮೊಗ್ಗುಗಳಿಂದ ತೋರಣದ್ವಾರ ರಚಿಸಿದ್ದ, ಒಳಗೆ ಮುಕುರಿಕುಳಿತಿದ್ದ ಅರಸರು ಪೌರರಿಂದ ಒಪ್ಪುತ್ತಿದ್ದ, ಕುಸ್ತಿಗಾಗಿ ದುಂಡಗಿನ ಸ್ಥಾನವನ್ನು ನಿರ್ಮಿ



ಸಿದ್ದ, ಮಲ್ಲರಂಗವನ್ನು ಪ್ರವೇಶಿಸಿದರು. ತಮ್ಮ ಭುಜಾಗ್ರಗಳಿಂದ ದೊಡ್ಡ ದೊಡ್ಡ ಮಲ್ಲರ ಉನ್ನತಸ್ಕಂಧಗಳಿಗೆ ಪೆಟ್ಟುಕೊಡುತ್ತ ಗೆಲುವಾಗಿ ರಂಗವನ್ನು ಹೊಕ್ಕರು. ಕೃಷ್ಣಬಲರಾಮರು ರಂಗಭೂಮಿಯಲ್ಲಿ ಕೈಕಾಲುಗಳನ್ನು ಆಡಿಸುವ ಸಾಧಕ ಮಾಡುತ್ತ, ಕುಣಿದು ಕುಪ್ಪಳಿಸುತ್ತ, ತೊಡೆತೋಳು ತಟ್ಟುತ್ತಾ, ಮನೋಹರರಾಗಿ ಕಂಡರು. ರಂಗಭೂಮಿಯನ್ನು ಸೇರುತ್ತಲೇ ಬಲದೇವನು ಕೃಷ್ಣನಿಗೆ "ಇಲ್ಲಿ ಶತ್ರು ಕಂಸ ಕುಳಿತಿದ್ದಾನೆ ; ಇವರು ಜರಾಸಂಧನ ಮನುಷ್ಯರು ; ಇವರು ಪುತ್ರಸಮೇತರಾದ ಸಮುದ್ರವಿಜಯಾದಿಗಳಾದ ಹತ್ತುಮಂದಿ ಸೋದರರರು"—ಈ ಪ್ರಕಾರವಾಗಿ ಸಂಜ್ಞೆಯಿಂದ ಸಮಸ್ತರನ್ನೂ ಪರಿಚಯಿಸಿದನು. ಅವರೆಲ್ಲರೂ ಆ ಕುಸ್ತಿಯ ಕಳನತ್ತಲೇ, ಕೃಷ್ಣಬಲದೇವರಿರುವತ್ತಲೇ, ನೋಡುತ್ತಿದ್ದರು.

ಪೌರರೂ ಅರಸರೂ ಮುಂತಾಗಿ ಶ್ರೇಷ್ಠಪುರುಷರೆಲ್ಲ ಕುಸ್ತಿಯನ್ನು ನೋಡಲು ಸೇರಿದ್ದರು. ಮಲ್ಲರ ನೆಗೆತ ಜಿಗಿತಗಳಿಂದ ತೊಡೆ ತೋಳುಗಳ ಚಪ್ಪರಣೆಯಿಂದ ಅಖಾಡ ತುಂಬಿತ್ತು. ಕಂಸನ ಅಪ್ಪಣೆ ಪಡೆದು ಬೇರೆ ಬೇರೆ ಮಲ್ಲರು ಕ್ರಮಕ್ರಮವಾಗಿ ಬಂದು ಮದಿಸಿದ ಕಾಡೆಮ್ಮೆಗಳಂತೆ ಮಲ್ಲಯುದ್ಧಕ್ಕೆ ತೊಡಗಿದರು. ಸಾಧಾರಣಮಲ್ಲರ ಯುದ್ಧವಾದ ಮೇಲೆ ಕಂಸನು ಕೃಷ್ಣನೊಂದಿಗೆ ಕಾದಲು ಚಾಣೂರ ಮಲ್ಲನಿಗೆ ಆಜ್ಞೆಯಿತ್ತನು. ಪರ್ವತದ ಮಹಾಭಿತ್ತಿಯಂತೆ ದೃಢವಕ್ಷನೂ ದೃಢಭುಜಯಂತ್ರದಿಂದ ಮಹಾಮಲ್ಲರನ್ನೇ ಅರೆದು ಹಾಕಿದವನೂ ಆದ ಚಾಣೂರಮಲ್ಲನನ್ನು ಕೃಷ್ಣನ ಮೇಲೆ ಬಿಟ್ಟದ್ದೇ ಅಲ್ಲದೆ, ಹಿಂದಿನಿಂದಲೇ ಮೇಲೆ ಬೀಳಲು ಮುಷ್ಟಿಕಮಲ್ಲನಿಗೂ ಕಂಸನು ತನ್ನ ವಿಷಮವಿಷಮಯದೃಷ್ಟಿಯಿಂದ ಸನ್ನೆಮಾಡಿದನು. ಪ್ರಕಟಿತ ಪಟುಸಿಂಹದಂತೆ ಬಂದು ನಿಂತ ಕೃಷ್ಣನೂ ಚಾಣೂರಮಲ್ಲನೂ ಸ್ಥಿರ ಚರಣನಿವೇಶರೂ ಖರನಖರಕಠೋರಮುಷ್ಟಿಬದ್ಧರೂ ಆಗಿ ಮುಷ್ಟಿಯುದ್ಧಕ್ಕೆ ತೊಡಗಿದರು. ವಜ್ರಸಮಾನವಾದ ಕಠಿನಮುಷ್ಟಿಯ ಮುಷ್ಟಿಕಮಲ್ಲನು ಹಿಂದಿನಿಂದ ಮುಷ್ಟಿಪ್ರಹಾರಮಾಡಲು ಯತ್ನಿಸುತ್ತಿದ್ದನು ; ಆದರೆ ಅಷ್ಟರೊಳಗೆ ಬಲದೇವನು ಶೀಘ್ರವಾಗಿ "ನಿಲ್ಲು ನಿಲ್ಲು, ತಾಳು ತಾಳು" ಎನ್ನುತ್ತ ಅವನ ತಲೆಗೆ ತನ್ನ ಮುಷ್ಟಿಯ ಪೆಟ್ಟುಕೊಟ್ಟು ಅವನನ್ನು ಗತಾಸುವಾಗಿ ಮಾಡಿದನು. ಇತ್ತ ಸಿಂಹಬಲನಾದ ಕೃಷ್ಣನೂ ಗರ್ಜಿಸುತ್ತ ತನಗಿಂತ ದ್ವಿಗುಣಿತ ಶರೀರ ಪ್ರಮಾಣವನ್ನುಳ್ಳ ಚಾಣೂರಮಲ್ಲನನ್ನು ತನ್ನ ವಕ್ಷಸ್ಥಲದ ಮೇಲೆ ಹಾಕಿಕೊಂಡು ತನ್ನ ಭುಜಯಂತ್ರದಿಂದ ಬಲವಾಗಿ ಹಿಂದೊತ್ತಿದನು. ಅವನು ನೆತ್ತರ ಕೋಡಿ ಹರಿಸುತ್ತ ನಿಷ್ಪ್ರಾಣನಾದನು. ಕೃಷ್ಣಬಲದೇವರು ದಶಶತ ಹರಿಹಸ್ತಿ ಪ್ರೋದ್ಬಲರು. ಹೀಗೆ ಅಖಾಡದಲ್ಲಿ ಛಲಗೊಂಡು ಕಂಸನ ಇಬ್ಬರು ಮುಖ್ಯಮಲ್ಲರನ್ನು ಕೊಂದುಹಾಕುತ್ತಲೂ ಅವರನ್ನು ನೋಡಿ ಕಂಸನು ಕೈಯಲ್ಲಿ ನಿಶಿತಖಡ್ಗವನ್ನು ಕೊಂಡು ಅವರತ್ತ ಸಾಗಿದನು. ಅಖಾಡದ ಜನವೆಲ್ಲ ಸಮುದ್ರಘೋಷದಂತೆ ಕೋಲಾಹಲಿಸುತ್ತ ಎದ್ದು ನಿಂತಿತು. ಕೃಷ್ಣನು ತನ್ನೆದುರಿಗೇ ಬರುತ್ತಿದ್ದ ಶತ್ರುವಿನ ಕೈಯಿಂದ ಕತ್ತಿಯನ್ನು ಸೆಳೆದುಕೊಂಡನು. ಗಟ್ಟಿಯಾಗಿ ಅವನ ಕೂದಲು ಹಿಡಿದು ಕೋಪೋದ್ರಿಕ್ತನಾಗಿ ಅವನನ್ನು ನೆಲದ ಮೇಲೆ ಕೆಡವಿ

ಬಿಟ್ಟನು. ಆಮೇಲೆ ಅವನ ಪರುಷಪಾದಗಳನ್ನು ಎಳೆದಾಡಿ "ಇವನಿಗೆ ಇದೇ ಯೋಗ್ಯವಾದ ಶಿಕ್ಷೆ" ಎಂದು ಹೇಳುತ್ತ ಕಲ್ಲಿನ ಮೇಲೆ ಅವನನ್ನು ಬಡಿದು ಕೊಂದಿಕ್ಕಿದನು. ಕಂಸನನ್ನು ಕೊಂದಮೇಲೆ ಕೃಷ್ಣನು ಹಸನ್ಮುಖಿಯಾದನು. ಕಂಸನ ಸೇನೆ ಕ್ಷುಬ್ಧಗೊಂಡು ಎದುರುಬೀಳಲು, ಅದನ್ನು ಕಂಡ ಬಲರಾಮನು ಬದ್ಧಭ್ರುಕುಟಿಯಾದನು. ಕ್ರುದ್ಧನಾಗಿ ಮಂಚಸ್ತಂಭವೊಂದನ್ನು ಕಿತ್ತುಕೊಂಡು ಎತ್ತೆತ್ತಲೂ ಕೊಟ್ಟ ವಜ್ರಸದೃಶ ಆಘಾತದಿಂದ ಆ ಸೈನ್ಯವು ಕ್ಷಣದಲ್ಲಿ ಬೆದರಿ ಚೆದುರಿಹೋಯಿತು, ಕಂಸನ ಕಾರ್ಯದಲ್ಲಿ ನಿಯುಕ್ತವಾಗಿದ್ದ ಸ್ವಚ್ಛಂದವೂ ಮದೋನ್ಮತ್ತವೂ ಆದ ಜರಾಸಂಧಸೈನ್ಯ ತಾನೂ ಕ್ಷುಬ್ಧಗೊಂಡಿತು. ಆದರೆ ಸುಸಮರ್ಥವಾದ ಯಾದವ ಪಕ್ಷವು ತಮ್ಮ ಸೇನೆಯೊಂದಿಗೆ ಏಕಕಾಲದಲ್ಲಿಯೇ ಎದ್ದುನಿಂತುದರಿಂದ ಪ್ರತಿಪಕ್ಷವು ನಷ್ಟಭ್ರಷ್ಟವಾಯಿತು.

ಮಲ್ಲವೇಷದ ಕೃಷ್ಣಬಲದೇವರು ಅನಾವೃಷ್ಟಿಯೊಂದಿಗೆ ಕೂಡಿಕೊಂಡು ನಾಲ್ಕು ಕುದುರೆ ಕಟ್ಟಿದ ರಥದ ಮೇಲೆ ಏರಿದವರಾಗಿ ತಮ್ಮ ತಂದೆಯ ಮನೆಗೆ ಹೋದರು. ಸಮುದ್ರವಿಜಯಾದಿ ರಾಜರೂ ಮತ್ತಿತರ ಯಾದವರೂ ಅಲ್ಲಿ ತುಂಬಿದ್ದರು. ಕೃಷ್ಣಬಲರಾಮರು ಸಮುದ್ರವಿಜಯಾದಿಗಳಿಗೆ ವಂದಿಸಿ ಆಶೀರ್ವಾದ ಪಡೆದರು. ಚಿರಕಾಲವಿಯೋಗದಿಂದಾದ ಮನಸ್ಸಂತಾಪವು ಆ ಪ್ರಿಯಸಂಯೋಗದಿಂದ ಪರಿಹಾರವಾಯಿತು. ವಸುದೇವ ದೇವಕಿಯರು ಶತ್ರುಸಂಹಾರಮಾಡಿ ಬಂದ ಮಗನನ್ನು ನೋಡಿ ನಲಿದರು. ಹಾಗೆಯೇ ಕಂಸನು ಮೂಗು ಒತ್ತಿ ಹಾಕಿದ್ದ ಕನ್ಯೆಯೂ ಸೋದರನ ಮುಖ ನೋಡಿ ಹರ್ಷಿಸಿದಳು. ಈಗ ಸಂಕೋಲೆ ಕಳಚಿಹೋಗಿದ್ದ, ಕಂಸನ ಭಯಾಶಂಕೆ ತೊಲಗಿದ್ದ ಉಗ್ರಸೇನರಾಜನು ಆ ಯಾದವರ ಆಜ್ಞೆಯಂತೆ, ತನಗೆ ಕೃಷ್ಣನಿಂದ ಕೊಡಲ್ಪಟ್ಟ ಮಥುರೆಯನ್ನು ಮತ್ತೆ ಆಳತೊಡಗಿದನು. ಅತ್ತ ಕುಟುಂಬದ ಹಾಗೂ ಅಂತಃಪುರದವರ ರೋದನಧ್ವನಿಯಾಗುತ್ತಿರಲು ಕಂಸನ ದೇಹಕ್ಕೆ ಅಂತಿಮಸಂಸ್ಕಾರವಾಯಿತು. ಯಾದವರ ಮೇಲೆ ಅತ್ಯಂತಕ್ರುದ್ಧಚಿತ್ತೆಯಾಗಿದ್ದ, ಸಾಶ್ರುಪೂರಿತೆಯೂ ಸಗದ್ಗದೆಯೂ ಆಗಿದ್ದ ಜೀವದ್ಯಶೆ ತನ್ನ ತಂದೆ ಜರಾಸಂಧನಲ್ಲಿಗೆ ಹೋದಳು.

ಕೆಲಕಾಲದ ಮೇಲೆ ಒಮ್ಮೆ ಮಥುರೆಯ ಜನ ಆಕಾಶದಲ್ಲಿ ವಿದ್ಯಾಧರರಾಜ ಸುಕೇತುವಿನ ದೂತನನ್ನು ಕಂಡರು. ಮನೋಹರಾಕೃತಿಯ ಆ ದೂತನು ಶೀಘ್ರಗತಿಯಲ್ಲಿ ಸಾಗಿ ಬಂದು ರಾಜಸಮೂಹಪರಿವೇಷ್ಟಿತ ಮಥುರೆಗೆ ಬಂದಿಳಿದನು. ದೌವಾರಿಕನಿಂದ ಪ್ರವೇಶಪಡೆದು ಆ ದೂತನು ಯಾದವಸಮೂಹದಿಂದ ಪರಿಶೋಭಿಸುತ್ತಿದ್ದ ಸಭಾಸ್ಥಾನಕ್ಕೆ ಬಂದು ವಂದಿಸಿ ಕುಳಿತನು. ಸ್ವಲ್ಪಹೊತ್ತಿನ ಮೇಲೆ ಆತನು ಯಾದವರ ಎದುರಿನಲ್ಲಿಯೇ ಶತ್ರುಂಜಯನಾದ ಕೃಷ್ಣನನ್ನು ಕುರಿತು ಇಂತೆಂದನು : "ರಾಜಸ್ತುತನೇ ಕೇಳು. ವಿಜಯಾರ್ಧದ ಮೇಲೆ ಸುಕೇತುವೆಂಬ ಅರಸುಂಟು. ಈತನು ನಮಿ ವಿನಮಿಗಳ ಕುಲದವನು ; ನಯಜ್ಞ ; ದಕ್ಷಿಣಶ್ರೇಣಿಯ ರಥನೂಪುರ ಚಕ್ರವಾಲಪುರದಲ್ಲಿ ವಾಸಿಸುತ್ತಾನೆ. ಶಂಖವನ್ನು ಪೂರೈಸಿದ್ದು, ನಾಗಶಯ್ಯೆಯೇರಿದ್ದು, ಚಾಪವನ್ನೇರಿಸಿದ್ದು ಇವುಗಳಿಂದ ನಿಮ್ಮನ್ನು ಪರೀಕ್ಷಿಸಿ ತಿಳಿದ ಕೂಡಲೇ ಆತನು ನನ್ನನ್ನು ನಿಮ್ಮಲ್ಲಿಗೆ ಕಳಿಸಿದ್ದಾನೆ.



'ತಾವು ತುಂಬ ಉದಾರಿಯೆಂದು ತಿಳಿದೂ ನನ್ನ ಒಂದು ಸಣ್ಣ ಬೇಡಿಕೆಯನ್ನು ಸಲ್ಲಿಸುತ್ತಿದ್ದೇನೆ ; ಅದೆಂದರೆ ನನ್ನ ಮಗಳು ಸತ್ಯಭಾಮೆಯನ್ನು ತಾವು ಸ್ವೀಕರಿಸಬೇಕು. ಇದು ಖಚರಲೋಕಕ್ಕೆ ಭೂತಿಪ್ರಾಯವಾದ್ದು, ಸರ್ವಕಲ್ಯಾಣಮೂಲವಾದ್ದು' ಎಂಬುದಾಗಿ ಹೇಳಿಕಳಿಸಿದ್ದಾನೆ."

ಆ ದೂತನ ಮಾತು ಕೇಳಿ ಪ್ರಸನ್ನಚಿತ್ತನಾದ ಕೃಷ್ಣನು ಅದಕ್ಕೆ ಸಂತೋಷದಿಂದ ಒಪ್ಪಿಕೊಂಡನು. ಆಮೇಲೆ ಆ ದೂತನು ಕೃಷ್ಣನಿಂದ ಸತ್ಕೃತನಾಗಿ ತೆರಳಿದನು. ಹಾಗೆ ತೆರಳಿದ ದೂತನು ಸುಕೇತುವಿನ ಬಳಿಗೈದಿ ಮೊದಲು ಕೃಷ್ಣನ ಗುಣಸ್ತವನ ಮಾಡಿ ಅರಸನಿಗೆ ಕಾರ್ಯಸಿದ್ಧಿಯನ್ನು ಸೂಚಿಸಿದನು. "ಲೋಕದಲ್ಲಿ ಹರಿ ಬಲದೇವರು ಅತ್ಯಂತ ತೇಜಸ್ವಿಗಳು ; ಶತ್ರುಗಳ ತೇಜಸ್ಸು ರೂಪಕಾಂತಿಗಳನ್ನು ಅಡಗಿಸುವವರು" ಎಂದನು. ಅದನ್ನು ಕೇಳಿ ಸುಕೇತವೂ ಅವನ ಸೋದರ ರತಿಮಾಲನೂ ತಮ್ಮ ಪುತ್ರಿಯರೊಡಗೊಂಡು ಮಥುರೆಗೆ ಬಂದರು. ರತಿಮಾಲನ ಮಗಳು ರೇವತಿ. ಈಕೆಯನ್ನು ಅವನು ಬಲದೇವನಿಗೆ ಕೊಟ್ಟನು. ಸುಕೇತುವು ತನ್ನ ಸ್ವಯಂಪ್ರಭೆಯೆಂಬ ಪತ್ನಿಯಲ್ಲಿ ಜನಿಸಿದ ಸತ್ಯಭಾಮೆಯನ್ನು ಕೃಷ್ಣನಿಗೆ ಕೊಟ್ಟನು. ಈ ವಿವಾಹೋತ್ಸವದಲ್ಲಿ ಸುಂದರಿಯರಾದ ಮನುಷ್ಯಸ್ತ್ರೀ ಖೇಚರಸ್ತ್ರೀಯರ ನರ್ತನಗಳಾದವು. ಆ ಮೊದಲ ವಿವಾಹದಲ್ಲಿ ನವವಧುಗಳೊಂದಿಗೆ ಕುಳಿತಿದ್ದ ಕೃಷ್ಣ ಬಲರಾಮರನ್ನು ಕಂಡು ದೇವಕಿ ಮತ್ತು ರೋಹಿಣಿ ತುಂಬ ಆನಂದಿಸಿದರು. ಪ್ರಥಮ ಸಮಾಗಮದಲ್ಲೇ ಸತ್ಯಭಾಮೆ ಕೃಷ್ಣನನ್ನೂ, ರೇವತಿ ಬಲದೇವನನ್ನೂ ಒಲಿಸಿದರು. ಹಾಗೆಯೇ ಕೃಷ್ಣಬಲದೇವರೂ ತಂತಮ್ಮ ಪತ್ನಿಯರ ಮನವೊಲಿಸಿದರು.

ಆಮೇಲೆ ಇತ್ತ ಕಲುಷಚಿತ್ತೆಯೂ ವ್ಯಾಕುಲೆಯೂ ಆದ ಜೀವದ್ಯಶೆ ಕಪ್ಪಾದ ಕೇಶರಾಶಿಯನ್ನು ಕೆದರಿಕೊಂಡವಳಾಗಿ ಜರಾಸಂಧನಲ್ಲಿಗೆ ಬಂದು ತನಗೆ ಯದುಕುಲದವರಿಂದ ಆದ ದೋಷವನ್ನು ಹೇಳಿಕೊಂಡು ಅಳತೊಡಗಿದಳು. ವೇಲೆ ಸಮುದ್ರವನ್ನು ಕ್ಷೋಭೆಗೊಳಿಸುವಂತೆ ಜರಾಸಂಧನನ್ನು ಕ್ಷೋಭೆಗೊಳಿಸಿದಳು. "ತಂದೆಯೆ, ನೀನು ಸಮಸ್ತ ಪೃಥ್ವಿಯನ್ನೇ ಆಳುತ್ತಿರುವಾಗ ನಾನು ಹೀಗೆ ಗಂಡನಿಲ್ಲದೆ ವೈಧವ್ಯದುಃಖವನ್ನು ಹೇಗೆ ಸಹಿಸಲಿ ? ಆ ಸೊಕ್ಕಿನಿಂದ ಹಿಗ್ಗುತ್ತಿರುವ ಯಾದವರ ನೆತ್ತರುಗೆಸರಿನ ತಲೆಗಳಿಂದ ಸೇಡು ತೀರಿಸಿಕೊಳ್ಳಲೆಂದೇ ನಾನು ಆ ದುಃಖವನ್ನು ಇಲ್ಲಿಯತನಕ ಸಹಿಸಿಕೊಂಡಿದ್ದೇನೆ"— ಎಂದಳು. ಹೀಗೆ ಗೋಳಿಡುತ್ತಿದ್ದ ಆಕೆಗೆ ಜರಾಸಂಧನು "ಮಗಳೇ ಅಳಬೇಡ, ಲೋಕದಲ್ಲಿ ಆಗುವುದೆಲ್ಲ ದೈವಯೋಗದಿಂದಲೇ ಆಗುವಂಥದು. ಅನ್ಯರ ಶಕ್ತಿ ಸಾಮರ್ಥ್ಯಗಳನ್ನು ಅಲಕ್ಷಿಸುವ ದೈವವೇ ಇಲ್ಲಿ ಪ್ರಧಾನವಾದ್ದು. ಹೊಲಕ್ಕೆ ನುಗ್ಗುವ ಪಶುವೂ ವಧಾಶಂಕೆಯಿಂದಾಗಿ ಎಲ್ಲಕ್ಕೂ ಮೊದಲು ತಪ್ಪಿಸಿಕೊಳ್ಳುವ ಹಾದಿಯನ್ನು ಕುರಿತು ಚಿಂತಿಸುತ್ತದೆ. ಆದರೆ ಈ ಯಾದವರು ನಿನ್ನ ಪತಿಯನ್ನು ಕೊಂದು ತಮಗೆ ಇನ್ನು ಬದುಕಿರಲು ಇಷ್ಟವಿಲ್ಲ ಎಂಬುದನ್ನು ತೋರಿಸಿಕೊಂಡಿದ್ದಾರೆ. ಇಲ್ಲಿಯವರೆಗೆ ನಿನ್ನ ಪದಶರಣ್ಯತೆಯಿಂದ ನಿಷ್ಕಂಟಕರಾಗಿರಲಿ, ಬಲಕುಲಶಾಖಾದಿಗಳಿಂದ ಬಲಿತಿರಲಿ, ಇನ್ನು ನನ್ನ

ಕ್ರೋಧವೆಂಬ ದಾವಾಗ್ನಿಯಿಂದ ಅವರನ್ನು ಸುಟ್ಟು ಬೂದಿಮಾಡುತ್ತೇನೆ. ಅವರ ಹೆಸರನ್ನೇ ಅಳಿಸಿಹಾಕುತ್ತೇನೆ''—ಎಂದಾಡಿ ಅವಳನ್ನು ಸಂತೈಸಿದನು. ಹೀಗೆ ಕ್ರುದ್ಧನಾಗಿ ಯಮಸಮಾನನಾದ ಕಾಲಯವನನೆಂಬ ತನ್ನ ಮಗನನ್ನು ಕೂಡಲೇ ಕರೆಸಿ ಯಾದವರ ನಾಶಕ್ಕೆ ಆಜ್ಞೆಯಿತ್ತನು. ಕಾಲಯವನನು ಚತುರಂಗಬಲದೊಂದಿಗೆ ಶತ್ರುವನ್ನಿದಿರಿಸಿ ನಡೆದು ಯಾದವರೊಂದಿಗೆ ೧೭ ಸಾರಿ ಭೀಕರಕದನವನ್ನು ನಡಸಿ ಗೆಲ್ಲಲಾಗದೆ ಅತುಲ ಮಾಲಾವರ್ತ ಶೈಲದಲ್ಲಿ ಮಡಿದನು. ಕೂಡಲೇ ಜರಾಸಂಧನು ತನ್ನ ಸೋದರನಾದ ಅಪರಾಜಿತನನ್ನು ಕಳಿಸಿದನು. ಈತನು ಜಿತಜೇಯನು, ಪ್ರಾಣತುಲ್ಯನು, ಶತ್ರುಲೋಕವನ್ನು ಹಿಡಿಯಲು ಉತ್ಸುಕನಾಗಿ ಬಂದು ಯಾದವರೊಂದಿಗೆ ೩೪೬ ಬಾರಿ ಯುದ್ಧಮಾಡಿ ಕೊನೆಗೆ ಕೃಷ್ಣನ ಬಾಣಗಳ ಮೊನೆಗೆ ನಿಷ್ಪ್ರಾಣನಾಗಿ ನೆಲದ ಮೇಲೆ ಕೆಡೆದನು. ನೆಲದ ಮೇಲೆ ಕೆಡೆದ ಆತನು ಆಯಾಸಪರಿಹಾರಕ್ಕಾಗಿ ವೀರಶಯ್ಯೆಯ ಮೇಲೆ ಮಲಗಿದಂತಿದ್ದನು. ಆಮೇಲೆ ಯಾದವರೆಲ್ಲ ಮಥುರೆಯ ಪೌರರೊಂದಿಗೆ ಕೃಷ್ಣಬಲದೇವರ ಬಲದ ರಕ್ಷೆಯಲ್ಲಿ ಶತ್ರುಭೀತಿಯೇನೂ ಇಲ್ಲದೆ ಕ್ರೀಡಾತತ್ಪರರಾಗಿದ್ದರು.

## ೩೭. ಸ್ವಪ್ನಫಲಕಥನ

ಗೌತಮನು ಶ್ರೇಣಿಕನಿಗೆ ಹೇಳುತ್ತಾನೆ : "ದಶಾರ್ಹದಲ್ಲಿ ಮುಖ್ಯವಾದ ಸೌರ್ಯಪುರದಲ್ಲಿ ಸಮುದ್ರವಿಜಯ ರಾಜನ ಮನೆಯಲ್ಲಿ ಜಿನೇಂದ್ರನು ಗರ್ಭಸ್ಥನಾಗುವ ಮೊದಲಿನಿಂದಲೂ ಲೋಕಹರ್ಷಣಕಾರಿಯಾದ ಆಶ್ಚರ್ಯವುಂಟಾಯಿತು. ಅದನ್ನೀಗ ಹೇಳುತ್ತೇನೆ, ಕೇಳು.

ನೇಮಿಜಿನನ ಸ್ವರ್ಗಾವತರಣಕ್ಕೆ ಪೂರ್ವದ ೬ ತಿಂಗಳಿಂದ ಹಿಡಿದು ಜನ್ಮಕಾಲ ಪರ್ಯಂತ ಎಂದರೆ ೧೫ ತಿಂಗಳ ಕಾಲ ಇಂದ್ರನ ಅನುಜ್ಞೆಯಂತೆ ದೇವತೆಗಳು ಸಮುದ್ರವಿಜಯನ ಮನೆಯಲ್ಲಿ ಧನವೃಷ್ಟಿಯನ್ನು ಕರೆದರು. ಇದರಿಂದ ಯಾಚಕಲೋಕ ನಲಿದು ತಣಿಯಿತು. ಆಗ ಪೂರ್ವ ಮೊದಲಾದ ದೆಸೆಗಳ ಅಗ್ರಭಾಗದಿಂದ ಬಂದು ದಿಕ್ಕುಮಾರಿಯರು ಶಿವಾದೇವಿಯ ಪರಿಚರ್ಯೆಯಲ್ಲಿ ತೊಡಗಿರುತ್ತಿದ್ದರು. ಇದರಿಂದ ಅವರು ಜಿನಬಾಲಕನು ಆ ತಾಯಿಯ ಗರ್ಭದಲ್ಲಿ ಬರಲಿರುವನೆಂಬುದನ್ನೂ ಅವನು ತ್ರಿಲೋಕಸ್ವಾಮಿಯಾಗುವನೆಂಬುದನ್ನೂ ಸೂಚಿಸಿದರು.

ಹೀಗಿರಲು ಶಿವಾದೇವಿಗೆ ಒಂದು ರಾತ್ರಿ ಮಲಗಿದ್ದಾಗ ೧೬ ಶುಭಸ್ವಪ್ನಗಳಾದವು. ಆಕೆ ಮೊದಲ ಸ್ವಪ್ನದಲ್ಲಿ ಇಂದ್ರನ ಐರಾವತವನ್ನೂ, ೨ ನೆಯದರಲ್ಲಿ ಅಂಬಿಕೆಯ ಮಹಾವೃಷಭವನ್ನೂ, ೩ ನೆಯದರಲ್ಲಿ ಪರ್ವತಾಗ್ರದ ಸಿಂಹವನ್ನೂ, ೪ ನೆಯದರಲ್ಲಿ ಪದ್ಮಾಸನೆ ಲಕ್ಷ್ಮಿಯನ್ನೂ. ೫ ನೆಯದರಲ್ಲಿ ನಿರ್ಮಲಾಕಾಶದಲ್ಲಿ ತೂಗುವ ಮಾಲಾದ್ವಯಗಳನ್ನೂ, ೬ ನೆಯದರಲ್ಲಿ ನಿರಭ್ರಾಕಾಶದ ನಡುವಣ ಚಂದ್ರನನ್ನೂ, ೭ನೆಯದರಲ್ಲಿ ಸುಸಂಧ್ಯ ಸಿಂಧೂರ ಪರಾಗಪಿಂಜರನಾದ ಸೂರ್ಯನನ್ನೂ, ೮ನೆಯದರಲ್ಲಿ ಮಿಂಚಿನಂತೆ ಸಂಚಲಗಳಾದ ಮತ್ಸ್ಯಯುಗಲವನ್ನೂ, ೯ನೆಯದರಲ್ಲಿ ಸುಸೌರಭಯುತವಾದ ಜಲಕುಂಭವನ್ನೂ, ೧೦ನೆಯದರಲ್ಲಿ ರಮಣೀಯವಾದ ಮಹಾಸರಸ್ಸನ್ನೂ. ೧೧ನೆಯದರಲ್ಲಿ ಉತ್ತುಂಗತರಂಗ ಭಂಗುರವಾದ ಮಹಾರ್ಣವವನ್ನೂ, ೧೨ನೆಯದರಲ್ಲಿ ಲಕ್ಷ್ಮಿಯ ಆಸನದಂತಿದ್ದ ಸಿಂಹಾಸನವನ್ನೂ, ೧೩ ನೆಯದರಲ್ಲಿ ದಿವ್ಯವಾದೊಂದು ನಭಸ್ಥಲದ ವಿಮಾನವನ್ನೂ, ೧೪ ನೆಯದರಲ್ಲಿ ಮಹತ್ತಾದ ಫಣೀಂದ್ರ ಭಾಸ್ವದ್ಭವನವನ್ನೂ, ೧೫ ನೆಯದರಲ್ಲಿ ಗಗನಸ್ಪರ್ಶಿಯಾದ ಸುರತ್ನ ರಾಶಿಯನ್ನೂ, ೧೬ ನೆಯದರಲ್ಲಿ ಶಿಖೋಜ್ವಲವೂ ಸೌಮ್ಯಾಕಾರವೂ ಆದ ಅಗ್ನಿಯನ್ನೂ ನೋಡಿದಳು. ಹೀಗೆ ಸ್ವಪ್ನದರ್ಶನಾನಂತರ ಕಾರ್ತಿಕ ಶುಕ್ಲ ಷಷ್ಠಿಯ ದಿನ, ದೇವತೆಗಳಿಗೆ ಆಸನಕಂಪನವನ್ನುಂಟುಮಾಡುತ್ತ, ಜಿನೇಂದ್ರನು ಸ್ವರ್ಗಚ್ಯುತನಾಗಿ ಬಂದು ಧವಳಗಜದ ರೂಪದಲ್ಲಿ ಶಿವಾದೇವಿಯ ಮುಖವನ್ನು ಪ್ರವೇಶಿಸಿದನು.



ಪ್ರಾತಃಕಾಲದಲ್ಲಿ ಜಯಧ್ವನಿಗೂ ಮಂಗಲಗೀತೆಗೂ ಶಿವಾದೇವಿ ಎಚ್ಚತ್ತು ಕುತೂಹಲವಶೆಯಾಗಿ ತನ್ನ ಪತಿಯಲ್ಲಿಗೆ ಹೋಗಿ ವಂದಿಸಿ, ರಾತ್ರಿ ತಾನು ಕಂಡ ಸ್ವಪ್ನಗಳನ್ನು ಅವನಿಗೆ ತಿಳಿಸಿದಳು. ಸಮುದ್ರವಿಜಯನು ಪ್ರಸನ್ನನಾಗಿ ಆ ಸ್ವಪ್ನಫಲಗಳನ್ನು ಅನುಕ್ರಮವಾಗಿ ಹೀಗೆ ನಿರೂಪಿಸಿದನು :

"ಪ್ರಿಯೆ, ಪ್ರತಿದಿನವೂ ಸುರಿಯುತ್ತಿರುವ ಈ ಧನವೃಷ್ಟಿ, ದಿಕ್ಕುಮಾರಿಯರ ಸೇವೆ ಶುಶ್ರೂಷೆಗಳು ಇವಕ್ಕೆ ಕಾರಣಭೂತನಾದ ತೀರ್ಥಂಕರನು ಇಂದು ನಿನ್ನ ಗರ್ಭಕ್ಕೆ ಬಂದು ನೆಲಸಿದ್ದಾನೆ. ನೀನು ಕಂಡ ಸ್ವಪ್ನಫಲಗಳನ್ನು ಏನೆಂದು ಹೇಳುವುದು ? ನೀನು ತೀರ್ಥಂಕರಜನನಿ. ನಿನಗೆ ತೀರ್ಥಂಕರನು ಪುತ್ರನಾಗಿ ಜನಿಸುತ್ತಾನೆ. ಇದೇ ಆ ಸ್ವಪ್ನಗಳು ಸೂಚಿಸುವ ಫಲ. ಹೀಗಿದ್ದರೂ ಆತನು ಏನೇನು ಫಲಪ್ರಾಪ್ತಿಗೆ ಒಡೆಯನಾಗುತ್ತಾನೆ ಎಂಬುದನ್ನು ಕ್ರಮವಾಗಿ ಹೇಳುತ್ತೇನೆ ಕೇಳು : 'ಆ ನಿನ್ನ ಪುತ್ರನು ಅನೇಕ ಜೀವರ ಸಂರಕ್ಷಕನಾಗುತ್ತಾನೆ ; ನಿರ್ಮಲ ಸ್ವಭಾವದವನಾಗುತ್ತಾನೆ ; ಅನಂತವೀರ್ಯನಾಗುತ್ತಾನೆ ; ಸುರಾಸುರೇಂದ್ರರಿಂದ ಮೇರುವಿನಲ್ಲಿ ಅಭಿಷಿಕ್ತನಾಗುತ್ತಾನೆ ; ತ್ರಿಲೋಕವ್ಯಾಪಿ ಯಶಸ್ಸಿಗೆ ಭಾಜನನಾಗುತ್ತಾನೆ ; ದಯಾವಂತನೂ ಅಜ್ಞಾನಾಂಧಕಾರವನ್ನು ಕಳೆಯುವವನೂ ಆಗುತ್ತಾನೆ ; ಮಹಾತೇಜಸ್ವಿಯಾಗುತ್ತಾನೆ ; ವಿಷಯೋಪಭೋಗಜ ಸೌಖ್ಯವನ್ನುಂಡು ತುದಿಗೆ ಮೋಕ್ಷಗಾಮಿಯಾಗುತ್ತಾನೆ ; ಲೋಕದ ಮನೋರಥವನ್ನು ಪೂರೈಸುವವನಾಗುತ್ತಾನೆ ; ಶುಭಲಕ್ಷಣ ಸಮನ್ವಿತನಾಗುತ್ತಾನೆ ; ಮಹಾ ಅಮೃತಾತ್ಮನಾಗುತ್ತಾನೆ ; ದೇವದಾನವ ಪರಿವೃಢನಾಗಿ ಉತ್ತಮ ಸಿಂಹಾಸನಾರೂಢನಾಗುತ್ತಾನೆ ; ವಿಮಾನಸ್ವಾಮಿಗಳಾದ ಇಂದ್ರರ ಪಂಕ್ತಿಗಳಿಂದ ಪೂಜೆಗೊಂಡ ಪಾದಗಳುಳ್ಳವನಾಗುತ್ತಾನೆ ; ಸಂಸಾರರೂಪಿಯಾದ ಪಂಜರವನ್ನು ಭೇದಿಸಿದವನೂ ಜ್ಞಾನತ್ರಯನೇತ್ರನೂ ಆಗುತ್ತಾನೆ ; ಬಹುಪ್ರಕಾರದ ಉಜ್ವಲಕಿರಣಗಳಿಂದ ಅನುರಂಜಿತನೂ ಗುಣರತ್ನಭೂಷಿತನೂ ಶರಣಾಗತರಿಗೆ ಆಶ್ರಯದಾತನೂ ಆಗುತ್ತಾನೆ ; ಧ್ಯಾನಾಗ್ನಿಯಿಂದ ಕರ್ಮದ ಕಾಡನ್ನು ಸುಟ್ಟುರುಹುತ್ತಾನೆ.'

ಪ್ರಿಯೇ, ನಿನ್ನ ಪುತ್ರನ ಪ್ರಭಾವದಿಂದ ಇಂದ್ರರೂ ಸಾಧಾರಣರಾಜರಂತೆ ಅನುಕೂಲವರ್ತನೆಯ ಸೇವಕರಾಗಿ ನನ್ನ ಆಜ್ಞೆಯನ್ನು ಅನುವರ್ತಿಸುತ್ತಾರೆ. ಇಂದ್ರಾಣಿ

ಯರು ನಿನ್ನ ಪ್ರಸಾಧನದ ಕಾರ್ಯಕಲಾಪಗಳಲ್ಲಿ ಯಾವಾಗಲೂ ಉದ್ಯತರಾಗಿರುತ್ತಾರೆ. ಇಲ್ಲಿ ಹುಟ್ಟಲಿರುವ ಜಿನೇಂದ್ರಸೂರ್ಯನಿಂದ ನೀನೂ ನಿನ್ನ ವಂಶವೂ, ನೀನೂ ನಾನೂ, ಸಮಸ್ತಲೋಕವೂ, ಪವಿತ್ರಿತವೂ ಭೂಷಿತವೂ ಸಂಸಾರಸಾಗರದಿಂದ ಉದ್ಧೃತವೂ ಆಯಿತೆಂದೇ ತಿಳಿ.''

ಪತಿಯಿಂದ ಸ್ವಪ್ನಫಲಗಳನ್ನಾಲಿಸಿ ತಿಳಿದ ರಾಣಿ ಶಿವಾದೇವಿಗೆ ಪರಮಸಂತೋಷವಾಯಿತು. ಪೂರ್ವೋಕ್ತ ದಿವ್ಯಗುಣವಿಶಿಷ್ಟನಾದ ಪುತ್ರನು ತನ್ನ ಮಡಿಲಿಗೆ ಬಂದಿದ್ದಾನೆ ಎಂದು ತಿಳಿದ ಮೇಲೆ ಜಿನಪೂಜೆ ಮೊದಲಾದ ಸತ್ಕಾರ್ಯಗಳಲ್ಲಿ ಸದಾ ತೊಡಗಿರುತ್ತಿದ್ದಳು.

## ೩೮. ಜನ್ಮಾಭಿಷೇಕ ವರ್ಣನ

ಆಮೇಲೆ ಇಂದ್ರನ ಆಜ್ಞೆಯಿಂದಲೂ ಸ್ವಭಕ್ತಿ ಪ್ರೇರಣೆಯಿಂದಲೂ ಕುಬೇರನು ತಾನೇ ಬಂದು ತೀರ್ಥೋದಕದಿಂದ ಜಿನೇಂದ್ರನ ತಾಯಿತಂದೆಗಳಿಗೆ ಅಭಿಷೇಕ ಮಾಡಿದನು. ದಿವ್ಯ ಸುಗಂಧ ಭೂಷಣಾದಿಗಳಿಂದ ಅರ್ಚಿಸಿದನು. ಶಿವಾದೇವಿಯು ದಿಕ್ಕುಮಾರಿಯರಿಂದ ಮೊದಲೇ ಪರಿಶೋಧಿತವಾದ ನಿರ್ಮಲೋದರದಲ್ಲಿ ಜಗತ್ಕಲ್ಯಾಣಕ್ಕಾಗಿ ಸರ್ವಪ್ರಥಮವಾಗಿ ಸ್ವಬಂಧುಜನ ಸಿಂಧುವೃದ್ಧಿಕರನೂ ಸರ್ವಸಂತಾಪಹರನೂ ಆದ ಜಿನೇಂದ್ರಚಂದ್ರನನ್ನು ಧರಿಸಿದಳು. ಆ ಗರ್ಭಭಾರ ಆಕೆಯನ್ನು ಸ್ವಲ್ಪವಾದರೂ ಬಳಲಿಸಲಿಲ್ಲ. ಗರ್ಭಸ್ಥನಾಗಿ ಜಿನೇಂದ್ರನಿರುವುದನ್ನು ಪ್ರಕಟಿಸುವಂತೆ ಆಕೆಗೆ ಗರ್ಭಚಿಹ್ನೆಗಳು ತಲೆದೋರಿದುವು. ಜಿನಶಿಶುವಿನ ಪ್ರಭಾವದಿಂದ ಆಕೆಯ ಮನಸ್ಸು ಯಾವಾಗಲೂ ಭುವನರಕ್ಷಣೆಯಲ್ಲಿ ಸಕಲತತ್ತ್ವಸಂವೀಕ್ಷಣೆಯಲ್ಲಿ ಸರ್ವಸಂಶಯವಿಚ್ಛೇದಿಯಾದ ಹಿತಭಾಷಣದಲ್ಲಿ ವ್ರತವಿಭೂಷಣದಲ್ಲಿ ವಿನಯಪೋಷಣದಲ್ಲಿ ತೊಡಗಿರುತ್ತಿತ್ತು. ಆಕೆ ಕೃಶದೇಹಿಯಾಗಿ ತೋರುತ್ತಿದ್ದರೂ ದೇವಾಂಗನಾದತ್ತವಾದ ಅಮೃತಾಹಾರವನ್ನು ಕೊಳ್ಳುತ್ತಿದ್ದುದರಿಂದ ಅಪೂರ್ವ ದಿವ್ಯಕಾಂತಿಯಿಂದ ತೊಳಗುತ್ತಿದ್ದಳು. ಸಮುದ್ರವಿಜಯನೂ ಪರಮವೈಭವದಿಂದಿರುತ್ತಿದ್ದನು. ಹೀಗೆ ಜಿನಶಿಶುವಿನ ತಾಯ್ತಂದೆಗಳು ಲೋಕವಂದ್ಯರಾಗಿ ಹರ್ಷಚಿತ್ತರಾಗಿ ದೇವದೇವಿಯರು ಸಲಿಸುವ ವಿಭೂತಿಗೆ ಪಾತ್ರರಾಗಿ ಸುಖದಲ್ಲಿ ಕಾಲ ಕಳೆಯುತ್ತಿರಲು ಗರ್ಭಕಾಲದ ೯ ತಿಂಗಳು ಸಂದವು. ವೈಶಾಖ ಶುಕ್ಲ ತ್ರಯೋದಶಿ ಶುಭತಿಥಿಯಲ್ಲಿ ರಾತ್ರಿಯ ವೇಳೆಯಲ್ಲಿ ಚಂದ್ರನು ಚಿತ್ತಾನಕ್ಷತ್ರದಲ್ಲಿರುವಾಗ ಶಿವಾದೇವಿಗೆ ಪುತ್ರಜನನವಾಯಿತು. ಜ್ಞಾನತ್ರಯನೇತ್ರನೂ ದಶಶತಾಷ್ಟ ಸಲ್ಲಕ್ಷಣನೂ ನೀಲನೀರಜವಪುವೂ ಆದ ಆ ಜಿನಶಿಶು ತನ್ನ ದೇಹಕಾಂತಿಯಿಂದ ಪ್ರಸೂತಿಗೃಹದ ಮಣಿದೀಪಕಾಂತಿಯನ್ನು ಉಜ್ವಲಿಸಿ ತೋರುತ್ತಿದ್ದನು. ಜಿನಜನನವಾಗುತ್ತಲೂ ಸಮುದ್ರವೇ ಗಗನದವರೆಗೆ ಹಿಗ್ಗಿನಿಂದ ಉಬ್ಬೆದ್ದಿತು. ಕಡಲುಡುಗೆಯಾದ ಜಂಬೂದ್ವೀಪದ ಭೂಮಂಡಲವೇ ಚಲವಿಚಲವಾಗಿ ಹರ್ಷದಿಂದ ನರ್ತಿಸುವಂತೆ ತೋರಿತು. ತ್ರಿಲೋಕಪುರುಷನು ಚಟುವಟಿಕೆಯಿಂದೆದ್ದು ಕಟಿಹಸ್ತನಾಗಿ ನಾಟ್ಯಮಾಡುವಂತೆ ಕಂಡಿತು. ಭವನವಾಸಿ ದೇವರ ಲೋಕ



ದಲ್ಲಿ ಶಂಖಧ್ವನಿಗಳೂ ವ್ಯಂತರದೇವರ ಲೋಕದಲ್ಲಿ ಪಟಹಧ್ವನಿಗಳೂ ಆದುವು. ಸೂರ್ಯಲೋಕದಲ್ಲಿ ಸಿಂಹನಾದವೂ ಕಲ್ಪವಾಸಿ ದೇವರ ಭವನಗಳಲ್ಲಿ ಘಂಟಾನಾದವೂ ಆದುವು.

ಜಿನಜನನವನ್ನು ಅವಧಿಜ್ಞಾನದಿಂದರಿತು ಆನಂದಿಸಿದ ತ್ರಿಲೋಕವಾಸಿ ಸುರೇಂದ್ರರೂ ಅಸುರೇಂದ್ರರೂ ಚತುರ್ನಿಕಾಯಾಮರರನ್ನು ಒಡಗೊಂಡು ಭರತಕ್ಷೇತ್ರದತ್ತ ನಡೆದರು. ಅಹಮಿಂದ್ರರು ಸ್ವಸ್ಥಾನದಲ್ಲಿಯೇ ಕೈಯೆತ್ತಿ ಮುಗಿದು, ತಂತಮ್ಮ ಸಿಂಹಾಸನದಿಂದ ಏಳು ಹೆಜ್ಜೆ ಮುಂದೆ ಬಂದು ಜಿನೇಂದ್ರನಿಗೆ ವಂದಿಸಿದರು. ದಶಪ್ರಕಾರದ ಭವನವಾಸಿದೇವರು ದಶದಿಕ್ಕುಗಳನ್ನೂ ಬೆಳಗುತ್ತಾ ಪೃಥ್ವೀತಲದಿಂದ ಮೇಲೆ ಬರತೊಡಗಿದರು. ಹಾಗೆಯೇ ಅಷ್ಟಪ್ರಕಾರದ ವ್ಯಂತರದೇವರು ನಾಲ್ಕೂ ದಿಕ್ಕುಗಳಿಂದ ಬಂದರು. ಪಂಚ ಪ್ರಕಾರದ ಜ್ಯೋತಿಷ್ಕದೇವರು ಏಕಕಾಲದಲ್ಲಿ ತಂತಮ್ಮ ವಿಮಾನಗಳಿಂದ ಬಂದು ಸಂದಣಿಸಿದರು. ತಂತಮ್ಮ ಸಪ್ತಾನೀಕಿನಿಗಳೊಡನೆ ದೇವತೆಗಳೊಡನೆ ಯಥಾಯೋಗ್ಯವಾಗಿ ೧೬ ಇಂದ್ರರೂ ಅಲ್ಲಿಗೆ ಬರತೊಡಗಿದರು. ಸೌಧರ್ಮೇಂದ್ರನು ತನ್ನ ಪತ್ನಿಯರೊಂದಿಗೆ ಐರಾವತವೇರಿ ಬಂದನು. ಇಂದ್ರನ ದೇವಸೇನೆ ಏಳು ವಿಭಾಗಗಳಾಗಿ ನಾಲ್ಕೂ ಕಡೆಗಳನ್ನು ವ್ಯಾಪಿಸಿ ಹೊರಟುಬರುತ್ತಿತ್ತು. ಇವುಗಳಲ್ಲಿ ಅಸಂಖ್ಯಾತ ಅಶ್ವಸೇನೆಯೂ ವೃಷಸೇನೆಯೂ ರಥಸೇನೆಯೂ ದೇವಾಧಿಷ್ಠಿತಗಳಾದ ಹಸ್ತಿಸೇನೆಯೂ ಗಾಂಧರ್ವಸೇನೆಯೂ ನರ್ತಕಿಯರ ಸೇನೆಯೂ ಒಂದಾದ ಮೇಲೆ ಒಂದರಂತೆ ಬರುತ್ತಿತ್ತು. ಪ್ರತಿ ದೇವಸೇನೆಯಲ್ಲೂ ಹೀಗೆ ೭-೭ ವಿಭಾಗಗಳಿದ್ದು ಪ್ರತಿವಿಭಾಗದಲ್ಲಿಯೂ ಹಸ್ತ್ಯಶ್ವ ಸಂಖ್ಯೆ ಒಂದಕ್ಕಿಂತ ಒಂದು ಇಮ್ಮಡಿಯಾಗಿರುತ್ತಿತ್ತು.

ತಂತಮ್ಮ ದೇವಸೇನೆಯೊಂದಿಗೆ ಬರುತ್ತಿದ್ದ ಇಂದ್ರರು ಸೂರ್ಯಪುರವನ್ನು ಸೇರುವ ಮೊದಲು, ದಿಕ್ಕುಮಾರಿಯರು ಮಗುವಿಗೆ ಜಾತಕರ್ಮ ನಡಸಿದರು. ವಿಜಯಾದಿ ದಿಕ್ಕುಮಾರಿಯರು ಜಲಕಲಶಗಳನ್ನು ಹಿಡಿದು ನಿಂತರು.ಯಶೋಧರಾ ಮುಂತಾದವರು ಮಣಿದರ್ಪಣವನ್ನು ಹಿಡಿದಿದ್ದರು. ಇಲಾ ಮುಂತಾದವರು ಸಿತಾತಪತ್ರಧರರಾಗಿ ನಿಂತಿದ್ದರು. ಶ್ರೀ ಮೊದಲಾದವರು ಚಾಮರಧಾರಿಗಳಾಗಿ ನಿಂತಿದ್ದರು. ಕನಕಚಿತ್ರಾದಿಗಳು ಜಿನಸನ್ನಿಧಿಯಲ್ಲಿದ್ದರು. ಪ್ರಧಾನರಾದ ರುಚಕಪ್ರಭಾದಿ ವಿದ್ಯುತ್ಕುಮಾರಿಯರೂ, ವಿಜಯಾದಿ ದಿಕ್ಕುಮಾರಿಯರೂ ಜಿನಶಿಶುವಿಗೆ ವಿಧಿಪೂರ್ವಕವಾಗಿ ಜಾತಕರ್ಮವನ್ನು ನಡಸಿದರು. ಜಿನಜನ್ಮೋತ್ಸವಪೂರ್ವದಲ್ಲಿಯೇ ಕುಬೇರನು ನಗರಶೋಭೆಯನ್ನು ಅದ್ಭುತವಾಗಿ ಮಾಡಿದ್ದನು. ಅಲ್ಲಿಯ ಸೌಧಗಳಲ್ಲಿ ಎತ್ತರದ ಧ್ವಜಗಳು ಹಾರುತ್ತಿದ್ದವು. ತಂತಮ್ಮ ಇಂದ್ರರೊಂದಿಗೆ ಚತುರ್ನಿಕಾಯಾಮರರು ಬಂದು ನಗರವನ್ನು ತ್ರಿಃಪ್ರದಕ್ಷಿಣೆ ಬಂದು ನಗರಶೋಭೆಯನ್ನು ನೋಡಿ ನಲಿದರು. ಆಮೇಲೆ ಇಂದ್ರನು ನಗರಪ್ರವೇಶಮಾಡಿ ಶಿವಾದೇವಿಯ ಭವನದ ಬಳಿ ಬಂದು ನಿಂತು, ಅಲ್ಲಿಂದಲೇ ಇಂದ್ರಾಣಿಗೆ ಜಿನಶಿಶುವನ್ನೆತ್ತಿ ತರಲು ಅನುಜ್ಞೆಯಿತ್ತನು. ಇಂದ್ರಾಣಿ ಪ್ರಸೂತಿಗೃಹವನ್ನು ಹೊಕ್ಕಳು. ಜಿನಶಿಶುವಿಗೆ ವಂದಿಸಿ, ಶಿವಾದೇವಿಗೆ ಮಾಯಾನಿದ್ರೆ ಬರಿಸಿ, ದೇವಮಾಯೆಯಿಂದ ಇನ್ನೊಂದು ಶಿಶು

ವನ್ನು ಮಾಡಿ ಆಕೆಯ ಮಗ್ಗುಲಲ್ಲಿ ಮಲಗಿಸಿ, ಜಿನಬಾಲಕನನ್ನು ಎತ್ತಿತಂದು ಇಂದ್ರನಿಗೆ
ಕೊಟ್ಟಳು. ಇಂದ್ರನೂ ಆ ಶಿಶುವಿಗೆ ವಂದಿಸಿ ಎರಡೂ ಕೈಗಳಲ್ಲಿ ಅದನ್ನೆತ್ತಿಕೊಂಡನು.
ಆ ಅಸಿತೋತ್ಪಲವನಶ್ರೀಕರನನ್ನು ಸಾವಿರ ಕಣ್ಣುಗಳಿಂದ ನೋಡಿಯೂ ತೃಪ್ತನಾಗ
ದಾದನು. ಆ ಇಂದ್ರನೀಲಮಣಿಚೂಡಾಮಣಿಯನ್ನು ಐರಾವತವೇರಿಸಿಕೊಂಡು ಹೊರ
ಟನು. ಆ ಐರಾವತಗಜದ ೩೨ ಮುಖಗಳಲ್ಲಿ ಒಂದೊಂದರಲ್ಲೂ ೮-೮ ದಂತಗಳು ;
ಅವೊಂದೊಂದರಲ್ಲೂ ಒಂದೊಂದು ಸರಸ್ಸು ; ಅವೊಂದೋದರಲ್ಲೂ ಒಂದೊಂದು
ಕಮಲಿನಿ; ಅವೊಂದೊಂದರಲ್ಲೂ ಒಬ್ಬೊಬ್ಬ ಅಪ್ಸರೆಯ ನರ್ತನ. ಇಂಥ ಲೋಕೋತ್ತರ
ವಿಭೂತಿಯೊಂದಿಗೆ ದೇವತೆಗಳು ಮೇರುವನ್ನು ಸಮೀಪಿಸಿ, ಪಾಂಡುಕವನವನ್ನು ಹೊಕ್ಕು
ಅಲ್ಲಿಯ ಪಾಂಡುಕಶಿಲಾತಲದ ಮೇಲೆ ಉನ್ನತ ಸಿಂಹಾಸನದಲ್ಲಿ ಜಿನಶಿಶುವನ್ನು ಇರಿಸಿ
ದರು. ದೇವಾಂಗನೆಯರು ನಾಲ್ದೆಸೆಗಳಲ್ಲಿಯೂ ಪೂಜೋಪಕರಣಗಳನ್ನು ಹಿಡಿದು ನಿಂತಿ
ದ್ದರು. ನರ್ತಕರ ನರ್ತನಗಳಾಗುತ್ತಿದ್ದುವು. ಶಂಖಧ್ವನಿ ಸಿಂಹನಾದ ಭೇರೀನಾದಗಳು
ಮಧ್ಯಮ ಲೋಕವನ್ನೇ ವ್ಯಾಪಿಸಿದುವು. ಧೂಪಗಂಧ ಪುಷ್ಪ ಸೌರಭ ಗಾಳಿಯಲ್ಲಿ
ಹರಡಿ ನೆಲಮುಗಿಲನ್ನೇ ತುಂಬುತ್ತಿತ್ತು. ಬಹುರೂಪಧರನಾದ ಇಂದ್ರನು ದೇವಸಮೇತ
ನಾಗಿ, ದೇವರು ಭಕ್ತಿಯಿಂದ ತಂದೊಪ್ಪಿಸುತ್ತಿದ್ದ ಮಣಿಹೇಮ ಕುಂಭಗಳ ಕ್ಷೀರೋದಕ
ದಿಂದ ಜಿನಶಿಶುವಿಗೆ ಅಭಿಷೇಕ ಮಾಡಿದನು. ಮೇರುವಿಗೂ ಕ್ಷೀರಸಾಗರಕ್ಕೂ ನಡುವೆ
ಆಕಾಶದಲ್ಲಿ ಮಣಿಕಲಶಗಳನ್ನು ಕೈಯಲ್ಲಿ ಹಿಡಿದು ನಿಂತಿದ್ದ ದೇವಪಂಕ್ತಿ ಶೋಭಾಯ
ಮಾನವಾಗಿತ್ತು. ಕಲಶಗಳನ್ನು ಕೊಡುವ ಕೊಳ್ಳುವ ಸಡಗರದ ನುಡಿ ಒಂದೇ ಸಮನೆ
ಕೇಳಿ ಬರುತ್ತಿತ್ತು. ಸ್ವರ್ಣಮಯ ಮಣಿಮಯ ಜಲಕುಂಭಗಳು ದೇವತೆಗಳ
ಕೈಯಲ್ಲಿ ಹೋಗಿ ಬರುತ್ತಿದ್ದುದು, ಹಂಸಪಂಕ್ತಿ ಗರುಡಪಂಕ್ತಿಗಳು ಎನ್ನುವಂತಿತ್ತು.
ಇಂದ್ರನು ನಡಸುತ್ತಿದ್ದ ಜಿನಸವನೋದಕದಿಂದ ಮೇರುಪರ್ವತ ಧವಳಿಮವಾಯಿತು.
ಹಾಗೆಯೇ ಇತರ ಇಂದ್ರರೂ ಇಚ್ಛಾನುಸಾರವಾಗಿ ಸಂತೋಷದಿಂದ ಜಿನಾಭಿಷೇಕ ಮಾಡಿ
ದರು. ಆಮೇಲೆ ಶಚಿ ಮುಂತಾದ ಇಂದ್ರಾಣಿಯರು ಬಂದು ಸುಗಂಧಿತದ್ರವ್ಯದಿಂದ ಜಿನ
ಶಿಶುವಿಗೆ ಉದ್ವರ್ತನ ಮಾಡಿದರು. ತಾವೂ ಜಿನಾಭಿಷೇಕ ಮಾಡಿದರು. ಇದಾದ ಮೇಲೆ
ಇಂದ್ರಾದಿ ಸಮಸ್ತ ಸುರಾಸುರವೃಂದವು ವಸ್ತ್ರಭೂಷಣಾದಿಗಳಿಂದ ಜಿನಶಿಶುವನ್ನು
ಅಲಂಕರಿಸಿ, ಆ ಶುಭಪರ್ವತನಾದ ಜಿನಶಿಶುವಿಗೆ ಅರಿಷ್ಟನೇಮಿಯೆಂದು ಹೆಸರುಕೊಟ್ಟರು.
ಆತನಿಗೆ ಪ್ರದಕ್ಷಿಣೆ ಬಂದು ನಾನಾ ಪ್ರಕಾರದ ಸ್ತುತಿಗಳಿಂದ ಜಿನಸ್ತವನಮಾಡಿದರು.

### ೩೯. ಜನ್ಮಾಭಿಷೇಕ-ಇಂದ್ರಸ್ತುತಿ ವರ್ಣನ

ಇಂದ್ರನು ನೇಮಿ ಜಿನೇಂದ್ರನನ್ನು "ಹೇ ಪ್ರಭೂ, ನೀನು ಶ್ರುತಮತ್ಯವಧಿ
ಜ್ಞಾನತ್ರಯಪೂರ್ಣನೂ ರತ್ನತ್ರಯವಿರಾಜಿತನೂ ತೀರ್ಥಂಕರನಾಮಕ ಪುಣ್ಯಪ್ರಕೃತಿ
ಯನ್ನು ಗಳಿಸಿದವನೂ ಆಗಿರುತ್ತೀಯೆ, ಮಹಾಹರಿವಂಶಮಹೋದಯ ಶೈಲಶಿಖಾಮಣಿ
ಬಾಲದಿವಾಕರನೂ ಹರಿನೀಲಮಣಿದ್ಯುತಿಮಂಡಲದಿಂದ ಮಂಡಿತವಾದ ದಿಙ್ಮುಖ



ಮಂಡಲನೂ ಆಗಿರುತ್ತೀಯೆ" ಎಂದು ಮುಂತಾಗಿ ಸ್ತುತಿಸತೊಡಗಿದನು.

ಬಳಿಕ ದೇವತೆಗಳು ಜಿನಶಿಶುವಿಗೆ ವಂದಿಸಿ, "ನಮಗೆಲ್ಲ ಉತ್ತಮಜ್ಞಾನವು ಲಭಿಸು
ವಂತೆ ಅನುಗ್ರಹಿಸು" ಎಂದು ಪ್ರಾರ್ಥಿಸಿಕೊಂಡರು. ಆಮೇಲೆ ಸಂತೋಷದಿಂದ ಅತ್ಯುಚ್ಚ
ಕಂಠದಲ್ಲಿ ಶಂಖಧ್ವನಿಮಾಡಿದರು. ಜತೆಗೆ ಭೇರೀಮೃದಂಗ ಪಟಹಾದಿಗಳ ಮಹಾ
ಧ್ವನಿಯೂ ಕೊಳಲು ವೀಣೆಗಳ ಮಧುರಧ್ವನಿಯೂ ಶ್ರೀಜಿನೇಂದ್ರನ ಜನ್ಮಾಭಿ
ಷೇಕೋತ್ಸವವು ಮುಗಿಯಿತು ಎಂಬುದನ್ನು ಲೋಕಪ್ರಕಟ ಮಾಡುವಂತೆ ದಿಗ್ದಿಗಂತ
ಗಳಲ್ಲಿಯೂ ಪ್ರತಿಧ್ವನಿಸಿತು. ವಿದ್ಯಾಧರರ ಹಾಗೂ ದೇವಾಂಗನೆಯರ ಸಂಗೀತದೊಂದಿಗೆ
ಅಪ್ಸರೆಯರ ನೃತ್ಯ ನಡೆಯಿತು. ಸೌಧರ್ಮೇಂದ್ರನು ಸಡಗರದಿಂದೆದ್ದು ಐರಾವತಗಜ
ಸ್ಕಂಧದ ಮೇಲೆ ಜಿನಶಿಶುವನ್ನು ಏರಿಸಿಕೊಂಡು ಸುಮೇರುಪರ್ವತದಿಂದ ಶೌರ್ಯಪುರ
ದತ್ತ ನಡೆದನು. ಜಿನಶಿಶುವಿನ ಮೇಲೆ ಬೆಳ್ಗೊಡೆ ಹಿಡಿಯಲಾಗಿತ್ತು; ಚಾಮರಪಂಕ್ತಿಗಳು
ಸುಳಿಯುತ್ತಿದ್ದವು.ಅಪ್ಸರೆಯರು ಜಿನನ ವಿಶುದ್ಧಕೀರ್ತಿಯನ್ನುಹಾಡುತ್ತಿದ್ದರು. ಆಕಾಶವು
ದೇವಸೇನೆಯಿಂದ ವ್ಯಾಪ್ತವಾಗಿತ್ತು. ದಾರಿಯುದ್ದಕ್ಕೂ ದೇವತೆಗಳು ವಂದನೆ ಸ್ತುತಿ
ಸಂಕೀರ್ತನೆಗಳಿಂದ ಜಿನನನ್ನು ಅಭಿನಂದಿಸುತ್ತಿದ್ದರು. ತ್ರಿಲೋಕೇಂದ್ರರೂ ಜಿನನ ಪಾದ
ಸೇವೆಯಲ್ಲೇ ಇರುತ್ತಿದ್ದರು. ಹೀಗೆ ಅತ್ಯಂತವಿಭೂತಿಗೆ ಪಾತ್ರನಾದ ಜಿನೇಂದ್ರಚಂದ್ರ
ನನ್ನು ಸೌರ್ಯಪುರಕ್ಕೆ ಕರೆತರಲಾಯಿತು. ನಗರದಲ್ಲಿ ಧ್ವಜಗಳು ಹಾರುತ್ತಿದ್ದವು.
ವಾದಿತ್ರಗಳು ಮೊಳಗುತ್ತಿದ್ದವು. ಹಾದಿಯಲ್ಲಿ ಸುಗಂಧಿತ ಜಲಸೇಚನವೂ ಪುಷ್ಪ
ವೃಷ್ಟಿಯೂ ಆಗಿ ನಗರವು ಶೋಭಾಯಮಾನವಾಗಿತ್ತು.

ಬಾಲಕನಾಗಿಯೂ ನೇಮಿಜಿನನ ಶೋಭೆ ಪ್ರೌಢರಿಗೆ ಸಮಾನವಾದ ಶೋಭೆಯನ್ನು
ಪ್ರಕಟಿಸುತ್ತಿತ್ತು. ಕೃಷ್ಣನನ್ನೂ ಸೌರ್ಯಪುರದ ಪ್ರಜೆಗಳನ್ನೂ ಸಂತಸಪಡಿಸುವ ಬಾಲ
ಸೂರ್ಯನಂತಿದ್ದ ಆ ನೇಮಿಜಿನನನ್ನು ಐರಾವತದಿಂದಿಳಿಸಿ, ಇಂದ್ರನು ಶಿವಾದೇವಿಯ
ಮಡಿಲಿಗಿತ್ತನು. ಆಮೇಲೆ ವಿಕ್ರಿಯಾಬಲದಿಂದ ಇಂದ್ರನು ಸಹಸ್ರಭುಜನಾಗಿ, ಚಾಚಿದ
ಆತನ ಭುಜಗಳಮೇಲೆ ಸಹಸ್ರಾರು ದೇವಿಯರು ನರ್ತಿಸಿದರು. ಈ ನೃತ್ಯಲೀಲೆಯನ್ನು
ನೋಡುತ್ತ ಯಾದವರೆಲ್ಲ ಎದುರಿಗೆ ಕುಳಿತಿದ್ದರು. ಆಮೇಲೆ ಇಂದ್ರನು ಮಹಾನಂದ
ವೆಂಬ ಅದ್ಭುತ (ತಾಂಡವ) ನೃತ್ಯವನ್ನು ತೋರಿಸಿದನು. ಎಲ್ಲರೂ ನಿಬ್ಬೆರಗಿಂದ ಅದನ್ನು
ನೋಡಿದರು.

ಇಂದ್ರನು ಜಿನನ ತಾಯ್ತಂದೆಗಳಿಗೆ ವಂದಿಸಿ, ಪೂಜಿಸಿ, ಅನ್ಯದುರ್ಲಭವಾದ
ಅಮೂಲ್ಯ ಭೂಷಣಗಳಿಂದ ಅಲಂಕರಿಸಿದನು. ರಕ್ಷಾನಿಮಿತ್ತವಾಗಿ ಜಿನಶಿಶುವಿನ ಬಲಗೈ
ಹೆಬ್ಬೆರಳಿನಲ್ಲಿ ಅಮೃತಾಹಾರವನ್ನು ಕಲ್ಪಿಸಿದನು. ಕ್ರೀಡೆಗಾಗಿ ಸಮವಯಸ್ಕರಾದ ದೇವ
ಕುಮಾರರನ್ನು ನಿಯೋಜಿಸಿದನು. ಕಾಲಋತು ಭೇದಾದಿಗಳನ್ನು ಅನುಸರಿಸಿ ಜಿನನ
ಕಲ್ಯಾಣಕ್ಕೆ ತಕ್ಕ ವ್ಯವಸ್ಥೆ ಮಾಡುವಂತೆ ಕುಬೇರನನ್ನು ನೇಮಿಸಿದನು. ಜಿನನ ತಾಯ್ತಂದೆ
ಗಳಿಂದ ಬೀಳ್ಕೊಂಡು ಕೃತಕೃತ್ಯನಾಗಿ ಚತುರ್ನಿಕಾಯಾಮರರೊಂದಿಗೆ, ಇತರೇಂದ್ರ
ರೊಂದಿಗೆ ಸ್ವಸ್ಥಾನಕ್ಕೆ ಹೋದನು. ಇಂದ್ರನ ಯಾತ್ರೆ ಸಫಲವಾಯಿತು. ಹಾಗೆಯೇ

ದಿಕ್ಕುಮಾರಿಯರೂ ತಂತಮ್ಮ ಕೆಲಸವಾದ ಮೇಲೆ ಜಿನಶಿಶು ಶಿವಾದೇವಿಯರಿಗೆ ವಂದಿಸಿ ಹೊರಟುಹೋದರು. ಇತ್ತ ನೇಮಿ ಜಿನೇಂದ್ರನು ಬಂಧುವರ್ಗದವರ ಹಾಗೂ ದೇವರ ಮೂಲಕ ಲಾಲನೆಗೊಳ್ಳುತ್ತ ದಿನದಿನಕ್ಕೆ ಬೆಳೆಯತೊಡಗಿದನು.

ಜಿನೇಂದ್ರನ ಜನ್ಮಾಭಿಷೇಕಸಂಬಂಧವಾದ ಈ ಸ್ತವನವು ಪಾಪಪರಿಹಾರಕ್ಕೂ ಪುಣ್ಯಮಾರ್ಗನಿರ್ದೇಶನಕ್ಕೂ ಸಹಕಾರಿಯಾದ್ದು, ಸಂಸಾರದಲ್ಲಿ ಸಾರಭೂತವಾದ್ದು, ಮೋಕ್ಷದಾಯಕವಾದ್ದು, ಭವ್ಯಜನಮೋದಪ್ರದವಾದ್ದು ಎಂದು ಮುಂತಾಗಿ ಇದರ ಫಲಗಳನ್ನು ಗೌತಮಸ್ವಾಮಿ ಹೇಳುತ್ತಾನೆ.

## ೪೦. ಹರಿವಂಶಯಾದವ ಪ್ರಸ್ಥಾನ ವರ್ಣನ

ಸೋದರ ಅಪರಾಜಿತನು ಯುದ್ಧದಲ್ಲಿ ಸತ್ತ ಸುದ್ದಿ ಕೇಳಿ ಜರಾಸಂಧನಿಗೆ ತುಂಬ ದುಃಖವಾಯಿತು. ಶತ್ರುಗಳ ಮೇಲೆ ಸೇಡು ತೀರಿಸಿಕೊಳ್ಳಲು ಹೇಗೋ ಅದನ್ನು ಸೈರಿಸಿದನು. ಸಮಸ್ತ ಯಾದವರ ನಾಶಕ್ಕಾಗಿ ದೃಢನಿರ್ಧಾರ ಮಾಡಿಕೊಂಡು ಶತ್ರುಗಳನ್ನೆದುರಿಸಿ ಮಿತ್ರರಾಜರಿಗೆ ಆಜ್ಞಾಪಿಸಿದನು. ಸ್ವಾಮಿಯ ಅಜ್ಞೆಯಂತೆ ಅವರೆಲ್ಲ ಚತುರಂಗಬಲ ಸಮೇತರಾಗಿ ಬಂದರು. ಹೀಗೆ ಅಪಾರಸೈನ್ಯಸಾಗರದೊಂದಿಗೆ ಜರಾಸಂಧನು ಹೊರಡುತ್ತಲೂ ಗುಪ್ತಚಾರರಿಂದ ಯಾದವರಿಗೆ ಸುದ್ದಿ ತಿಳಿಯಿತು. ವೃಷ್ಣಿವಂಶದ ಹಾಗೂ ಭೋಜವಂಶದ ಪ್ರಧಾನರು ಕೂಡಿ ಮಂತ್ರಾಲೋಚನೆ ನಡಸಿದರು : "ಈ ಜರಾಸಂಧನು ತ್ರಿಖಂಡಾಖಂಡಿತಾಜ್ಞನೂ ಪ್ರಚಂಡನೂ ಚಂಡಶಾಸನನೂ ಚಕ್ರಖಡ್ಗಗದಾದಿ ಬಲೋದ್ಧತನೂ ಕೃತಜ್ಞನೂ ಕ್ಷಮಾಶೀಲನೂ ನಮಗೆ ಇಲ್ಲಿಯವರೆಗೆ ಅಪಕಾರಮಾಡದೆ ಉಪಕಾರವೇ ಎಸಗಿದವನೂ ಆಗಿದ್ದಾನೆ.ಆದರೆ ಈಗ ಅಳಿಯನ ಹಾಗೂ ಸೋದರನ ವಧೆಯಿಂದ ಕೆರಳಿ ಆ ಅಪಮಾನವನ್ನು ತೊಡೆಯಲೆಂದು ನಮಗೆ ಎದುರುಬಿದ್ದಿದ್ದಾನೆ. ನಮಗಿರುವ ಸುಪ್ರಕಟ ದೈವಪೌರುಷಸಾಮರ್ಥ್ಯವನ್ನು ಕೂಡ ನೋಡದಷ್ಟು ಗರ್ವಿಯಾಗಿದ್ದಾನೆ. ಕೃಷ್ಣನ ಪುಣ್ಯಸಾಮರ್ಥ್ಯ, ಬಲರಾಮನ ಪೌರುಷ ಇವು ಅವರ ಬಾಲ್ಯದಿಂದಲೇ ಸುಸ್ಪಷ್ಟ. ನೇಮಿನಾಥನು ಈಗಿನ್ನೂ ಬಾಲಕನಾದರೂ ಆತನ ಪ್ರಭುತ್ವ ತ್ರಿಲೋಕ ಪ್ರಕಟವಾಗಿದೆ. ಈ ತೀರ್ಥಂಕರನ ಪಾಲನೆಯಲ್ಲಿ ಲೋಕಪಾಲರೇ ಇರುವಾಗ ಯಾವಾತ ಈ ತೀರ್ಥಂಕರಕುಲಕ್ಕೆ ಅಪಕಾರ ಮಾಡಲಾದೀತು ? ತೀರ್ಥಂಕರ, ಬಲ, ಕೃಷ್ಣರನ್ನು ಎದುರಿಸಲಾದೀತು ? ಈ ಜರಾಸಂಧನು ಪ್ರತಿವಾಸುದೇವ. ಇವನನ್ನು ಕೊಲ್ಲುವಂಥ ಬಲದೇವ ವಾಸುದೇವರು ಹುಟ್ಟಿ ಆಗಿದೆ. ಈತನು ತಾನಾಗಿ ಬಂದು ಕೃಷ್ಣನನ್ನೆದುರಿಸಿ ನಾಶವಾಗದಿದ್ದರೆ ನಾವೇ ಕೃಷ್ಣನನ್ನು ವಿಜಯಕ್ಕೆ ಮುಂದೆಮಾಡೋಣ. ಈಗ ನಾವು ಪಶ್ಚಿಮದಿಕ್ಕನ್ನಾಶ್ರಯಿಸಿ, ಕೆಲದಿನಗಳವರೆಗೆ ಸುಮ್ಮನಿರುವುದು ಲೇಸು. ಇದರಿಂದ ಕಾರ್ಯಸಿದ್ಧಿ ತಪ್ಪದೆ ಆಗುತ್ತದೆ. ನಾವು ಹೀಗೆ ಶಾಂತರಾಗಿದ್ದು ಬಿಡೋಣ. ಹಾಗೂ ಜರಾಸಂಧನು ನಮ್ಮನ್ನೆದುರಿಸಿ ನಿಂತರೆ ಆಗ ಯುದ್ಧಮಾಡಿ ಅವನನ್ನು ಯಮನಲ್ಲಿಗೆ ಕಳಿಸೋಣ."



ಹೀಗೆ ವಿಚಾರಮಾಡಿ ಸೇನೆಯಲ್ಲಿ ಈ ಆಶಯವನ್ನು ಪ್ರಕಟಿಸಿ ಪ್ರಸ್ಥಾನಭೇರಿ ಮೊಳಗಿಸಿದರು. ಯಾದವರ, ಭೋಜವಂಶಿಗಳ ಚಾತುರಂಗ ಹೊರಟಿತು. ಮಥುರೆ ಶೌರ್ಯಪುರ ವೀರ್ಯಪುರಗಳ ಪ್ರಜೆಗಳು ಸ್ವಾಮಿಭಕ್ತಿಯಿಂದ ತಾವೂ ಜತೆಗೆ ನಡೆದರು. ಅವರೆಲ್ಲ ವನಕ್ರೀಡೆಗೆ ತೆರಳಿದಂತೆ ಭಾವಿಸಿದರು. ೧೮ ಕೋಟಿ ಯಾದವರೂ ಶೌರ್ಯಪುರದಿಂದ ಹೊರಟರು. ಹಲವು ದೇಶಗಳನ್ನು ದಾಟಿ ಪಶ್ಚಿಮದಿಕ್ಕಿನಲ್ಲಿ ಸಾಗಿ ವಿಂಧ್ಯಾಚಲವನ್ನು ತಲುಪಿದರು. "ಮಾರ್ಗದಲ್ಲಿ ಜರಾಸಂಧ ಹಿಂಬಾಲಿಸುತ್ತಿದ್ದಾನೆ" ಎಂಬುದು ಕೇಳಿ ಬಂದಾಗ ಯುದ್ಧೋತ್ಸಾಹದಿಂದ ಶತ್ರುಸೇನೆಯನ್ನು ಪ್ರತೀಕ್ಷಿಮಾಡತೊಡಗಿದರು. ಆಯಿಬ್ಬರ ಸೈನ್ಯದಲ್ಲಿಯೂ ಸ್ವಲ್ಪ ಅಂತರವನ್ನು ಕಂಡು, ಕಾಲ ದೈವನಿಯೋಗದಿಂದ ಭರತಾರ್ಧನಿವಾಸಿಯರಾದ ದೇವತೆಯರು ತಮ್ಮ ದಿವ್ಯಸಾಮರ್ಥ್ಯದಿಂದಾಗಿ ವಿಕ್ರಿಯೆಯುಂಟುಮಾಡಿ ಅನೇಕಾನೇಕ ಚಿತೆಗಳನ್ನು ನಿರ್ಮಿಸಿದರು. ಶತ್ರುವಿಗೆ ಯಾದವರೆಲ್ಲ ಅಗ್ನಿಶಿಖೆಗಳಿಂದ ವ್ಯಾಪ್ತರಾದಂತೆ ತೋರಿದರು. ಜರಾಸುಧನಿಗೆ ತನ್ನ ಚತುರಂಗವೆಲ್ಲ ಅಲ್ಲಲ್ಲಿ ಅಗ್ನಿಜ್ವಾಲಾವ್ಯಾಪ್ತವಾದಂತೆ ಕಂಡಿತು. ಜ್ವಾಲೆಗಳಿಂದ ನಡೆಯು ತಡೆಗೊಂಡಾಗ ಸೇನೆಯನ್ನು ಅಲ್ಲೇ ನಿಲ್ಲಿಸಿದನು. ವೃದ್ಧೆಯ ರೂಪದಲ್ಲಿದ್ದು ಅಳುತ್ತಿದ್ದ ದೇವತೆಯೊಬ್ಬಳನ್ನು ಕಂಡು "ಹೇ ವೃದ್ಧೆ, ಇದಾರ ಮಹಾಸೈನ್ಯ ಹೀಗೆ ವ್ಯಾಕುಲಗೊಂಡು ಸುಟ್ಟುರಿಯುತ್ತಿದೆ? ಅಳುತ್ತಿರುವ ನೀನಾರು ? ಸ್ಪಷ್ಟವಾಗಿ ತಿಳಿಸು'' ಎಂದನು. ಅವಳು ಕಣ್ಣೀರು ತುಂಬಿ, ಗಂಟಲು ಒತ್ತಿ ಬಂದು ಕಷ್ಟದಿಂದ ದುಃಖವನ್ನದುಮಿಕೊಂಡು ಹೀಗೆ ನುಡಿದಳು : ''ರಾಜಾ, ನಾನು ಕಂಡದ್ದನ್ನು ನಿನಗೆ ಹೇಳುತ್ತೇನೆ. ಹಿರಿಯರಲ್ಲಿ ಹೇಳಿಕೊಂಡ ದುಃಖದಿಂದ ಎಂಥ ದುಃಖವೂ ತಗ್ಗುತ್ತದೆ. ರಾಜಗೃಹದಲ್ಲಿ ಜರಾಸಂಧನೆಂಬ ಸತ್ಯಪ್ರತಿಜ್ಞನಾದ ಅರಸು ಇದ್ದಾನೆ. ಅವನ ಪ್ರತಾಪಾಗ್ನಿ ಶತ್ರುಗಳನ್ನು ಅಡಗಿಸುವಲ್ಲಿ ಬಡಬದಂತೆ ಸಮುದ್ರದಲ್ಲಿಯೂ ಜ್ವಲಿಸುತ್ತದೆ. ತಮ್ಮ ಎಷ್ಟೋ ಅಪರಾಧಗಳಿಂದ ಯಾದವರು ಹೆದರಿ ಜರಾಸಂಧನನ್ನು ನೆನೆದು ಎಂದೂ ಸಶಲ್ಯಹೃದಯರಾಗಿರುತ್ತಿದ್ದರು. ಪ್ರಾಣರಕ್ಷಣೆಗೆ ಎಲ್ಲಿಯೋ ಪಲಾಯನಮಾಡಿದರು. ಆದರೆ ಲೋಕದಲ್ಲಿ ಎಲ್ಲಿಯೂ ಅವರಿಗೆ ಆಶ್ರಯಕೊಡತಕ್ಕವರು ಯಾರೂ ದೊರಕದೆ, ಅವರೆಲ್ಲ ಅಗ್ನಿಪ್ರವೇಶಮಾಡಿ ಮರಣವನ್ನಪ್ಪಿ ಈಗ ನಿಃಶಲ್ಯರಾದರು. ನಾನಾದರೋ ಆ ರಾಜರಿಗೆ ವಂಶಪರಂಪರೆಯಿಂದ ಬಂದ ದಾಸಿ. ಜೀವದಾಸೆಯಿಂದ ನಾನು ಅವರೊಂದಿಗೆ ಸುಟ್ಟುಹೋಗದೆ ಉಳಿದುಕೊಂಡೆ. ಆದರೆ ಸ್ವಾಮಿಯ ದುರ್ಮರಣದಿಂದ ನಾನು ದುಃಖಿತೆಯಾಗಿ ಅಳುತ್ತಿದ್ದೇನೆ. ಯಾರನ್ನು ಹಿಂಬಾಲಿಸಿಕೊಂಡು ಜರಾಸಂಧನು ಬರುತ್ತಿದ್ದನೋ ಆ ಯದು ಕುರು ಭೋಜ ವಂಶಗಳ ಅರಸರು ಅಗ್ನಿಮುಖವನ್ನು ಹೊಕ್ಕರು.ಆದರೆ ಅಭಾಗಿನಿಯಾದ ನನಗೆ ಪ್ರಾಣವು ಪ್ರಿಯವಾಗಿದ್ದುದರಿಂದ, ಉಳಿದುಕೊಂಡು ದುಃಖಭಾಜನೆಯಾಗಿದ್ದೇನೆ. ಅವರೆಲ್ಲರ ವಿಯೋಗದುಃಖದಿಂದ ಪಿಶಾಚಗ್ರಸ್ತಳಾದಂತೆ ಹೀಗೆ ಕಣ್ಣೀರು ಕರೆಯುತ್ತ ಇದ್ದೇನೆ.''

ವೃದ್ಧೆಯ ಮಾತು ಕೇಳಿ ಜರಾಸಂಧನು ವಿಸ್ಮಿತನಾದನು. ಅವಳ ಮಾತನ್ನು ನಂಬಿ ಅಂಧಕವೃಷ್ಣಿಗಳ ವಂಶ ನಾಶವಾಯಿತೆಂದೇ ಬಗೆದನು. ಸ್ವಸ್ಥಾನಕ್ಕೆ ಹಿಂದಿರುಗಿ

ಅಲ್ಲಿ ಮೃತರಿಗೆ ಅವರ ಬಾಂಧವರೊಡಗೂಡಿ ಜಲಾಂಜಲಿಯಿತ್ತು, ಕೃತಕೃತ್ಯನಾದಂತೆ ನಿಶ್ಚಿಂತತೆಯಿಂದ ಇರತೊಡಗಿದನು. ಅತ್ತ ಯಾದವರೂ ಸ್ವೇಚ್ಛೆಯಿಂದ ಮುಂದೆ ಸಾಗಿ ಅಪರಾರ್ಣವದ ಕರೆಯನ್ನು ಹೋಗಿ ತಲುಪಿದರು. ಅಲ್ಲಿಗೆ ಬಂದು ದೂರದೇಶದಲ್ಲಿ ತಂಗಿದ್ದ ರಾಜರು ಪ್ರಜೆಗಳೆಲ್ಲ ಅಲ್ಲಿಯೇ ಯಥಾಯೋಗ್ಯಸ್ಥಾನಗಳಲ್ಲಿ ಕುಳಿತರು.

## ೪೧. ದ್ವಾರವತೀನಿವೇಶ ವರ್ಣನ

ದಶಾರ್ಹ ಮಹಾಭೋಜ ವೃಷ್ಣಿಗಳೂ ವಿಷ್ಣುನೇಮಿಗಳೂ ಘೂರ್ಣಿಸುವ ಪಶ್ಚಿಮಸಮುದ್ರದ ನೋಟಕ್ಕಾಗಿ ಅದರ ಬಳಿಗೆ ಬಂದರು. ಆ ಸಮುದ್ರವು ಅವರನ್ನು ಕಂಡು ಹರ್ಷಾತಿರೇಕದಿಂದ ಉಬ್ಬೆದ್ದು ಸ್ವಾಗತಿಸುವಂತೆ ತೋರುತ್ತಿತ್ತು.

ಆಮೇಲೆ ಒಂದು ಪ್ರಶಸ್ತತಿಥಿಯಲ್ಲಿ ಕೃಷ್ಣನು ಬಲದೇವನೊಂದಿಗೆ ಸ್ಥಾನಪ್ರಾಪ್ತಿಯ ಬಯಕೆಯಿಂದ ತ್ರಿದಿನೋಪವಾಸ ಮಾಡಿದನು. ಪಂಚಪರಮೇಷ್ಠಿ ಸ್ತವನ ಮಾಡಿ, ನಿಯಮಸ್ಥಿತನಾಗಲು ಸಮುದ್ರತಟದಲ್ಲಿ ದರ್ಭಶಯ್ಯೆಯ ಮೇಲೆ ಉಪಸ್ಥಿತನಾದನು. ಆಗ ಸೌಧರ್ಮೇಂದ್ರನ ಆಜ್ಞೆಯಂತೆ ಗೋತಮನೆಂಬ ಶಕ್ತನಾದ ದೇವನು ಒಂದು ಕಾಲಾಂತರ ಸ್ಥಿತವಾಗಿದ್ದ ಸಮುದ್ರವನ್ನು ದೂರಕ್ಕೊತ್ತಿ ಸರಿಸಿಬಿಟ್ಟನು. ಕೃಷ್ಣನ ಪುಣ್ಯ ಮತ್ತು ನೇಮಿಯ ಮೇಲಿನ ಭಕ್ತಿಯಿಂದಾಗಿ ಕುಬೇರನು ಕೂಡಲೇ ಅಲ್ಲಿ ದ್ವಾರಾವತಿಯೆಂಬ ಪುರವನ್ನು ರಚಿಸಿದನು. ಅದು ೧೨ ಯೋಜನ ಉದ್ದ, ೯ ಯೋಜನ ಅಗಲವಾಗಿದ್ದು, ವಜ್ರಪ್ರಾಕಾರದ ವಲಯ, ಸಮುದ್ರದ ಪರಿಖೆ, ರತ್ನಮಯ ಸ್ವರ್ಣಮಯ ಭವನಗಳು ಇವುಗಳಿಂದ ಕೂಡಿತ್ತು. ಆಕಾಶದಿಂದ ಚ್ಯುತವಾದ ಅಲಕಾಪುರಿಯೋ ಎನ್ನುವಂತಿತ್ತು. ಇಂಥ ನಗರದ ನಡುವೆ ಆಗ್ನೇಯಾದಿ ದಿಕ್ಕುಗಳಲ್ಲಿ ಸಮುದ್ರವಿಜಯಾದಿ ಸೋದರರಿಗೆ ಕ್ರಮವಾಗಿ ಭವನಗಳು ನಿರ್ಮಾಣವಾಗಿದ್ದುವು. ನಡುವೆ ಕೃಷ್ಣನ ಸರ್ವತೋಭದ್ರವೆಂಬ ಭವನ ಶೋಭಿಸುತ್ತಿತ್ತು. ಅಂತಃಪುರಗೃಹಗಳಿಂದ ಬಳಸಿ ಬಲದೇವನ ಭವನವಿತ್ತು. ಇದರ ಮುಂದೆ ಒಂದು ದಿವ್ಯ ಸಭಾಮಂಟಪವಿತ್ತು. ಉಗ್ರಸೇನಾದಿ ರಾಜರಿಗೂ ಭವನಪಂಕ್ತಿಗಳಿದ್ದುವು. ಅವರ್ಣನೀಯ ವೈಭವದ ಈ ಸುಂದರನಗರವನ್ನು ನಿರ್ಮಿಸಿ ಕುಬೇರನು ಕೃಷ್ಣನಿಗೆ ಈ ಸಂಗತಿ ತಿಳಿಸಿದನು. ಅಲ್ಲದೆ ಆಗಲೇ ಕುಬೇರನು ಕೃಷ್ಣನಿಗೆ ಮಕುಟ, ಹಾರ, ಕೌಸ್ತುಭರತ್ನ, ಪೀತವಸ್ತ್ರದ್ವಯ, ನಕ್ಷತ್ರಮಾಲಾದಿ ಭೂಷಣಗಳು, ಕುಮುದ್ವತೀಗದೆ, ಶಕ್ತಿ, ನಂದಕಖಡ್ಗ, ಶಾರ್ಙ್ಗಧನು, ತೂಣೀರಯುಗ್ಮ, ವಜ್ರಮಯಾಸ್ತ್ರ, ಸರ್ವಾಯುಧಯುತವೂ ಗರುಡ ಧ್ವಜಯುತವೂ ಆದ ದಿವ್ಯರಥ, ಚಾಮರ ಸಿತಚ್ಛತ್ರಗಳು ಇವನ್ನಿತ್ತನು. ಬಲದೇವನಿಗೆ ನೀಲವಸ್ತ್ರದ್ವಯ, ಮಾಲೆ, ಮಕುಟ, ಗದೆ, ಹಲ, ಮುಸಲ, ಧನುರ್ಬಾಣ, ತೂಣೀರಯುಗ್ಮ, ದಿವ್ಯಾಸ್ತ್ರಪೂರ್ಣವೂ ತಾಲಧ್ವಜಯುತವೂ ಆದ ರಥ, ಛತ್ರ ಮುಂತಾದುವನ್ನಿತ್ತನು. ಸಮುದ್ರವಿಜಯಾದಿ ಸೋದರರಿಗೂ ಭೋಜಾದ್ಯರಸರಿಗೂ ವಸ್ತ್ರಾಭರಣಗಳಿತ್ತನು. ನೇಮಿನಾಥನಂತೂ ತನ್ನ ವಯೋಧರ್ಮಕ್ಕನುಸಾರವಾಗಿ ಉತ್ತಮವಸ್ತುಗಳನ್ನು ಪಡೆದೇ ಇದ್ದನು. "ನೀವೆಲ್ಲ ನಗರಪ್ರವೇಶಮಾಡಿ" ಎಂದು ತಿಳಿಸಿ, ಪೂರ್ಣಭದ್ರನೆಂಬ ಯಕ್ಷನಿಗೆ ಸಂದೇಶವಿತ್ತು, ಕುಬೇರನು ಕ್ಷಣದಲ್ಲಿ ಅಂತರ್ಹಿತನಾದನು.



ಆಮೇಲೆ ಯಾದವಪಕ್ಷ ಸಮುದ್ರತಟದಲ್ಲಿ ಕೃಷ್ಣಬಲರಿಗೆ ಅಭಿಷೇಕಮಾಡಿ ಜಯಕಾರ ಮಾಡಿತು. ಕೃಷ್ಣನು ಮೊದಲಾಗಿ ಚತುರಂಗವೂ ಪ್ರಜೆಗಳೂ ನಗರವನ್ನು ಹೊಕ್ಕರು. ಆ ದ್ವಾರಾವತಿಯಲ್ಲಿ ಪೂರ್ಣಭದ್ರಯಕ್ಷನಿಂದ ಉಕ್ತವಾದ ಭವನಗಳಲ್ಲಿ ಸಪರಿವಾರವಾಗಿ ಪ್ರಜೆಗಳು ಸುಖದಿಂದಿರುತ್ತಿದ್ದರು. ಮಥುರೆ ಸೂರ್ಯಪುರ ವೀರ್ಯಪುರಗಳ ನಿವಾಸಿಗಳು ತಂತಮ್ಮ ಕೇರಿಗಳಿಗೆ ಹಿಂದಿನ ಹೆಸರನ್ನೇ ಇಟ್ಟುಕೊಂಡು ಸಂತೋಷದಿಂದಿದ್ದರು. ಕುಬೇರನ ಆಜ್ಞೆಯಂತೆ ಯಕ್ಷರು ನಗರದ ಸಮಸ್ತ ಭವನಗಳಲ್ಲಿಯೂ ಮೂರೂವರೆ ದಿನಗಳ ಕಾಲ ಸಂತತ ಧನ ಧಾನ್ಯವರ್ಷವನ್ನು ಕರೆದರು. ಕೃಷ್ಣನು ಅಲ್ಲಿ ವಾಸಿಸುತ್ತಲೂ, ಅವನ ಪ್ರತಾಪದಿಂದಾಗಿ ಪಶ್ಚಿಮದರಸರು ಅವನಿಗೆ ಆಜ್ಞಾಬದ್ಧರಾದರು. ಆಮೇಲೆ ಕೃಷ್ಣನು ದ್ವಾರಾವತಿಯಲ್ಲೇ ಅನೇಕ ಅರಸರ ಸಹಸ್ರಾರು ಕನ್ಯೆಯರನ್ನು ವರಿಸಿ ಕ್ರೀಡೆಯಲ್ಲಿರುತ್ತಿದ್ದನು.

ನೇಮಿಚಂದ್ರನು ಬಾಲಚಂದ್ರನಂತೆ ದಿನದಿನಕ್ಕೆ ಬೆಳೆದನು. ಅವನ ಅಭ್ಯುದಯದಿಂದ ಯಾದವರು ಆನಂದಿಸುತ್ತಿದ್ದರು. ಕೃಷ್ಣಬಲದೇವರನ್ನು ನಲಿಸುತ್ತ ನೇಮಿಯು ಬಾಲ್ಯಕಾಲದಲ್ಲಿ ಜನರ ಕಣ್ಮನಗಳನ್ನು ಸೆಳೆಯುತ್ತ ಕ್ರೀಡಿಸುತ್ತಿದ್ದನು. ಅವರಿವರೆಂದು ಯಾದವಸ್ತ್ರೀಯರ ಕೈಯಲ್ಲಿ ಹೀಗೆಯೇ ಬೆಳೆಯುತ್ತ ಯೌವನಸ್ಥನಾದನು. ಶುಭಲಕ್ಷಣಯುತನೂ ನೀಲಕಮಲನೇತ್ರನೂ ಆದ ನೇಮಿಯ ಮೇಲಿಟ್ಟ ದೃಷ್ಟಿಯನ್ನು ಬೇರೆಡೆಗೆ ತಿರುಗಿಸಲು ವನಿತೆಯರಿಗೆ ಆಗುತ್ತಿರಲಿಲ್ಲ. ಅವನ ರೂಪಾಸ್ತ್ರವು ಅನ್ಯರ ಹೃದಯಸ್ಥಲವನ್ನು ಭೇದಿಸುತ್ತಿತ್ತಾದರೂ ಅನ್ಯರ ರೂಪಾಸ್ತ್ರವು ಅವನ ಹೃದಯವನ್ನು ಭೇದಿಸುವುದು ಸಾಧ್ಯವಿರಲಿಲ್ಲ. ಕ್ರೀಡಾಸಮಯದಲ್ಲಿ ತನ್ನ ಕುಟುಂಬದವರು ತನ್ನ ಮದುವೆಯ ವಿಚಾರ ಚರ್ಚಿಸುತ್ತಿದ್ದಾಗಲೂ ನೇಮಿ ಮುಗುಳ್ನಗೆ ನಕ್ಕು ನಾಚುತ್ತಿದ್ದನು. ಮೋಹವಾಗಲಿ ವೈಭವವಾಗಲಿ ಅವನ ಹೃದಯವನ್ನು ಕಲುಷಿತಗೊಳಿಸುವಂತಿರಲಿಲ್ಲ. ಹೀಗೆ ದ್ವಾರಾವತಿಯು ಮಹನೀಯರಾದ ನೇಮಿಜಿನೇಂದ್ರಾದಿಗಳಿಂದಲೂ ಹರ್ಷಪೂರ್ಣರಾದ ಪ್ರಜೆಗಳಿಂದಲೂ ನಲಿಯುತ್ತಿತ್ತು.

## ೪೨. ರುಕ್ಮಿಣೀಹರಣ ವರ್ಣನ

ಹೀಗಿರಲು ಒಮ್ಮೆ ನಭೋಗಾಮಿಯಾದ ನಾರದಮುನಿ ನಭದಿಂದಿಳಿದು ಸಭ್ಯಸಮಾಕೀರ್ಣವಾಗಿದ್ದ ಯಾದವರ ಸಭೆಗೆ ಬಂದನು. ದ್ವಾರಿಕೆಯ ವೈಭವವನ್ನು ನೋಡಿ ಅಚ್ಚರಿಯಿಂದ ತಲೆದೂಗುತ್ತ ಆತ ಕೆಳಗಿಳಿಯುತ್ತಲೂ ಸಭೆಯ ಅರಸರೆಲ್ಲ ಕೂಡಲೇ ಎದ್ದುನಿಂತರು. ಆತನಿಗೆ ವಂದಿಸಿ ಆಸನಾದ್ಯುಪಚಾರಗಳಿಂದ ಸತ್ಕರಿಸಿದರು. ನೇಮಿ, ಕೃಷ್ಣ, ಬಲ ಇವರ ಆಲೋಕನ ಸಂಭಾಷಣಾದಿಗಳಿಂದ ಸುಖಿಸಿಯೂ ತೃಪ್ತನಾಗದ ನಾರದ ಸಭಾಮಧ್ಯೆ ಅಧಿಷ್ಠಿತನಾದನು. ಆಮೇಲೆ ಪೂರ್ವಾಪರ ವಿದೇಹಕ್ಷೇತ್ರಗಳಲ್ಲಿಯ

ತೀರ್ಥಂಕರ ಕಥಾಮೃತವನ್ನೂ ಮೇರುಮಂದರನೆಯ ವೃತ್ತಾಂತವನ್ನೂ ಅವರಿಗೆ ತಿಳಿಸಿ ಸಂತಸಪಡಿಸಿದನು.

ನಡುವೆ ಶ್ರೇಣಿಕರಾಜನು ಗೌತಮಗಣಧರನನ್ನು "ಸ್ವಾಮಿ, ಈ ನಾರದನು ಯಾರು? ಈತನ ಉತ್ಪತ್ತಿ ಏಕಾಯಿತು?'' ಎಂದು ಪ್ರಶ್ನಿಸಿದನು. ಗೌತಮನು ''ಅಯ್ಯಾ ಶ್ರೇಣಿಕ, ಚರಮದೇಹಿ ನಾರದನ ಉತ್ಪತ್ತಿ ಸ್ಥಿತಿಗಳನ್ನು ನಿನಗೆ ಈಗ ತಿಳಿಸುತ್ತೇನೆ, ಕೇಳು'' ಎಂದು ನುಡಿದು ಅದನ್ನು ಹೇಳಲುಪಕ್ರಮಿಸಿದನು :

ಸೌರ್ಯಪುರದ ಬಳಿ ದಕ್ಷಿಣದಿಶೆಯಲ್ಲಿ ಒಂದು ತಾಪಸಾಶ್ರಮವಿತ್ತು. ಅಲ್ಲಿ ಫಲ ಮೂಲಾದಿಗಳಿಂದ ಜೀವಿಸುತ್ತಿದ್ದ ಹಲವು ತಪಸ್ವಿಗಳಿದ್ದರು. ಅವರಲ್ಲಿ ಉಂಛವೃತ್ತಿಯಿಂದ ಜೀವಿಸುತ್ತಿದ್ದ ಸುಮಿತ್ರನೆಂಬ ತಾಪಸಿಗೆ ಸೋಮಯಶೆಯೆಂಬ ಪತ್ನಿಯಲ್ಲಿ ಒಬ್ಬ ಮಗನಾದನು. ಕ್ಷುತ್ಪಿಪಾಸೆಯಿಂದ ಆ ದಂಪತಿಗಳು ಉಂಛವೃತ್ತ್ಯರ್ಥವಾಗಿ ನಗರಕ್ಕೆ ಹೋಗುವಾಗ ಮಗುವನ್ನು ಮರವೊಂದರ ಕೆಳಗಿರಿಸಿ ಹೋದರು. ಒಂಟಿಯಾಗಿ ಆಡಿಕೊಳ್ಳುತ್ತಿದ್ದ ಆ ಮಗುವನ್ನು ನೋಡಿ, ಜೃಂಭಕನೆಂಬ ದೇವನು ಪೂರ್ವಭವ ಸ್ನೇಹದಿಂದ ಬಂದು ಅದನ್ನೆತ್ತಿಕೊಂಡು ವೈತಾಢ್ಯ ಪರ್ವತಕ್ಕೆ ಹೋದನು. ಅಲ್ಲಿ ಮಣಿಕಾಂಚನವೆಂಬ ಗುಹೆಯಲ್ಲಿ ಅದನ್ನಿರಿಸಿ, ಕಲ್ಪವೃಕ್ಷದಿಂದಾದ ದಿವ್ಯಾಹಾರವಿತ್ತು ಬೆಳೆಸಿದನು. ಆ ಬಾಲಕನು ದೇವತಾಪ್ರಿಯನಾಗಿದ್ದುದರಿಂದ ಅವನಿಗೆ ೮ ವರ್ಷವಾಗುತ್ತಲೂ ಅವನಿಗೆ ಸರಹಸ್ಯವಾಗಿ ಜಿನಾಗಮವನ್ನೂ ಆಕಾಶಗಾಮಿನೀವಿದ್ಯೆಯನ್ನೂ ಪ್ರದಾನಮಾಡಿದನು. ಅವನೇ ನಾರದನೆಂದು ಪ್ರಸಿದ್ಧನಾದನು. ಈತನು ಬಹುವಿದ್ಯನೂ ನಾನಾಶಾಸ್ತ್ರವಿಶಾರದನೂ ಸಾಧುವೇಷಿಯೂ ಸಾಧುಸೇವಾನಿರತನೂ ಆಗಿದ್ದನು. ಈತನು ಕಂದರ್ಪಜಿತನಾಗಿಯೂ ಕಂದರ್ಪನಿಭವಿಭ್ರಮ; ಸಕಂದರ್ಪಪ್ರಿಯ. ಹಾಸಲೀಲ. ಲೋಭವರ್ಜಿತ, ಚರಮದೇಹಿ ; ಪ್ರಕೃತಿಯಿಂದ ನಿಷ್ಕಷಾಯನಾಗಿಯೂ ರಣಪ್ರೇಕ್ಷಾಪ್ರಿಯ ; ವಾಚಾಳಿ, ಜಿನಜನ್ಮಾಭಿಷೇಕಾದಿ ಮಹಾತಿಶಯಗಳನ್ನು ನೋಡುವ ಕುತೂಹಲದಿಂದ ಇವನು ಲೋಕಸಂಚಾರಿಯಾಗಿದ್ದನು.

ರಾಜಾ, ಇದೇ ಆ ನಾರದನು ಯಾದವರನ್ನು ಕೇಳಿಕೊಂಡು ಕೃಷ್ಣನ ಅಂತಃಪುರವನ್ನು ನೋಡಲೆಂದು ಅಂತಃಪುರಭವನಕ್ಕೆ ಹೋದನು. ಆಗ ಕೃಷ್ಣಪತ್ನಿ ಸತ್ಯಭಾಮೆ, ಕೃಷ್ಣನಿಗೆ ಪ್ರಾಣಾಧಿಕಳಾದವಳು, ಕೈಯಲ್ಲಿ ಮಣಿದರ್ಪಣವನ್ನು ಹಿಡಿದು ತನ್ನ ರೂಪವನ್ನು ಅದರಲ್ಲಿ ನೋಡಿಕೊಳ್ಳುತ್ತಿದ್ದಳು. ಅವಳನ್ನು ನಾರದನು ದೂರದಿಂದಲೇ ಕಂಡನು. ಸಾಕ್ಷಾತ್ ರತಿಯಂತೆ ಅವಳು ತೋರಿದಳು. ಆದರೆ ತನ್ನ ರೂಪವನ್ನೇ ನೋಡಿಕೊಳ್ಳುವುದರಲ್ಲಿ ಮೈಮರೆತು ನಾರದನತ್ತ ನೋಡದೆಹೋದುದರಿಂದ ಅವನಿಗೆ ಕೋಪ ಬಂದು ಹೊರಗೆ ಹೊರಟುಹೋದನು. ''ಈ ಲೋಕದಲ್ಲಿ ಎಲ್ಲಾ ಖೇಚರರಾಜರೂ ನೃಪಾಲರೂ ಅವರ ಅಂತಃಪುರವನಿತೆಯರೂ ನನ್ನನ್ನು ಕಾಣುತ್ತಲೇ ಎದ್ದು ನನಗೆ ನಮಸ್ಕರಿಸುತ್ತಾರೆ. ಆದರೆ ಈ ಖೇಚರಪುತ್ರಿ ಸತ್ಯಭಾಮೆ ಇಷ್ಟು ಧೃಷ್ಟೆಯಾಗಿ, ರೂಪಮದಗರ್ವಿತೆಯಾಗಿ, ನನ್ನನ್ನು ನೋಡದೆ ಹೋದಳು. ಇವಳಿಗೆ ಧಿಕ್ಕಾರವಿರಲಿ.



ನಾನು ಈಕೆಗೊಬ್ಬ ಸವತಿಯನ್ನು ತಂದು ಇವಳ ರೂಪಸೌಭಾಗ್ಯಗಳ ಗರ್ವವನ್ನು ಮುರಿಯುತ್ತೇನೆ. ರೂಪಸೌಭಾಗ್ಯಗಳಲ್ಲಿ ಸತ್ಯಭಾಮೆಯನ್ನು ಮೀರಿಸುವ ಬೇರೊಬ್ಬ ಕನ್ಯೆಯನ್ನು ಶೀಘ್ರದಲ್ಲಿಯೇ ಕೃಷ್ಣನಿಗೆ ನಾನು ದೊರಕಿಸಬಲ್ಲೆ. 'ಬಹುರತ್ನಾ ವಸುಂಧರಾ' ಅಲ್ಲವೇ ? ಹಾಗೆ ಸವತಿ ಬರುತ್ತಲೂ ಇವಳ ಮುಖ ನಿಟ್ಟುಸಿರಿಂದ ದುಗುಡಗೊಳ್ಳುವಂತೆ ಮಾಡುತ್ತೇನೆ. ನಾರದನು ಕೋಪಿಸಿದನೆಂದರೆ ಈ ಅನರ್ಥದಿಂದ ಪಾರಾಗುವುದು ಶಕ್ಯವೇ ?''—ಹೀಗೆ ವಿಚಾರಮಾಡಿ ಆಗಲೇ ಆಕಾಶಕ್ಕೆ ಹಾರಿಹೋಗಿ, ಕುಂಡಿನಪುರ ಸೇರಿದನು.

ಕುಂಡಿನಪುರದ ಅರಸು ಭೀಷ್ಮ. ಇವನಿಗೆ ರುಕ್ಮಿಯೆಂಬ ಮಗನೂ ರುಕ್ಮಿಣಿಯೆಂಬ ಮಗಳೂ ಇದ್ದರು. ನಾರದನು ಅಂತಃಪುರದಲ್ಲಿ ಚೆಲುವೆಯಾದ ರುಕ್ಮಿಣಿಯನ್ನು ಆಕೆಯ ಸೋದರತ್ತೆಯೊಂದಿಗೆ ನೋಡಿದನು. ಲೋಕದ ಸೌಲಕ್ಷಣ್ಯ ಸೌರೂಪ್ಯ ಸೌಭಾಗ್ಯಗಳನ್ನು ಒಗ್ಗೂಡಿಸಿ, ಕೃಷ್ಣನ ಪುಣ್ಯದ ಫಲವಾಗಿಯೇ ನಿರ್ಮಾಣವಾಗಿದ್ದಂತೆ ಆಕೆ ನಾರದನಿಗೆ ತೋರಿದಳು. ಅನೇಕ ಕನ್ಯಾರತ್ನಗಳನ್ನು ಕಂಡಿದ್ದ ನಾರದನು ರುಕ್ಮಿಣಿಯನ್ನು ಕಾಣುತ್ತಲೂ ಆಶ್ಚರ್ಯಗೊಂಡು, ''ಈ ಕನ್ಯೆ ಸೌಂದರ್ಯದ ಪರಮಸೀಮೆಯನ್ನು ಮುಟ್ಟಿದ್ದಾಳೆ'' ಎಂದುಕೊಂಡನು. ''ಈಕೆಯನ್ನು ಕೃಷ್ಣನಿಗೆ ಸೇರುವಂತೆ ಮಾಡಿ ಆ ಸತ್ಯಭಾಮೆಯ ರೂಪಸೌಭಾಗ್ಯದ ಮದವನ್ನು ಈಗಲೇ ಖಂಡಿಸಿಬಿಡುತ್ತೇನೆ'' ಎಂದು ನಿರ್ಧರಿಸಿದನು. ತನಗೆದುರಿಗೆ ಬಂದ ನಾರದನನ್ನು ಕಾಣುತ್ತಲೂ, ರುಕ್ಮಿಣಿ ಸಹಜ ವಿನಯದಿಂದ ಎದ್ದುನಿಂತಳು. ಅತ್ಯಾದರದಿಂದ ಕೈಮುಗಿದುಕೊಂಡು ಆತನೆದುರಿಗೆ ಹೋಗಿ ವಂದಿಸಿದಳು. ನಾರದನು "ದ್ವಾರಿಕಾಪತಿ ನಿನಗೆ ಪತಿಯಾಗಲಿ'' ಎಂದು ಹರಸಿದನು. ಅವಳು ಪ್ರಶ್ನೆಮಾಡಿದ್ದಕ್ಕೆ, ನಾರದನು ಅವಳಿಗೆ ದ್ವಾರಿಕೆಯ ವರ್ಣನೆಯನ್ನು ಮಾಡಿದನು. ಅದನ್ನು ಕೇಳುತ್ತಲೂ ಆಕೆ ಕೃಷ್ಣನಲ್ಲಿ ಅತ್ಯಂತ ಅನುರಕ್ತೆಯಾದಳು. ಹೀಗೆ ನಾರದನೆಂಬ ಚಿತ್ರಕಾರನು ರುಕ್ಮಿಣಿಯ ಹೃದಯಭಿತ್ತಿಯ ಮೇಲೆ ರೂಪಯೌವನ ಸಂಪನ್ನನಾದ ಕೃಷ್ಣನ ಚಿತ್ರವನ್ನು ಬರೆದು ಹೋದನು. ಈಗ ನಾರದನು ರುಕ್ಮಿಣಿಯ ಅದ್ಭುತರೂಪವನ್ನು ಸ್ಪಷ್ಟವಾಗಿ ಚಿತ್ರದಲ್ಲಿ ಬರೆದು, ಆ ಚಿತ್ತಸಂಮೋಹಕಾರಿಯಾದ ಚಿತ್ರಪಟವನ್ನು ತೆಗೆದುಕೊಂಡು ಹೋಗಿ ಕೃಷ್ಣನಿಗೆ ತೋರಿಸಿದನು. ನವಯೌವನವತಿ, ಸುಲಕ್ಷಣಾನ್ವಿತೆ, ಚಿತ್ರಗತ ಕನ್ಯೆಯನ್ನು ನೋಡಿ ಕೃಷ್ಣನು ಇಮ್ಮಡಿ ಆದರವನ್ನು ತೋರಿ, ನಾರದನನ್ನು ಕುರಿತು, "ತಾವು ಈ ಚಿತ್ರಪಟದಲ್ಲಿ ಮೂಡಿಸಿರುವ ಈ ವಿಚಿತ್ರಕನ್ಯೆ ಯಾರು ? ಮನುಷ್ಯರೂಪವನ್ನು ತಿರಸ್ಕರಿಸುವಂಥ ಈಕೆ ಯಾರೋ ದೇವಕನ್ಯೆಯಿರಬೇಕು'' ಎಂದನು. ಆಗ ನಾರದನು ವಂಚನೆಯಿಲ್ಲದೆ ಇದ್ದ ಸಂಗತಿಯನ್ನು ಇದ್ದಂತೆಯೇ ಕೃಷ್ಣನಿಗೆ ಹೇಳಿಬಿಟ್ಟನು. ಕೃಷ್ಣನು ರುಕ್ಮಿಣಿಯನ್ನು ವರಿಸಲು ಚಿಂತಿಸತೊಡಗಿದನು.

ಅತ್ತ ಎಲ್ಲಾ ವೃತ್ತಾಂತವನ್ನೂ ಬಲ್ಲ ಆ ಸೋದರತ್ತೆ ರುಕ್ಮಿಣಿಗೆ ಸಮಯವರಿತು ಏಕಾಂತದಲ್ಲಿ ಹೀಗೆ ಅರುಹಿದಳು : ''ನನ್ನ ಮಾತು ಕೇಳು ; ಹಿಂದೊಮ್ಮೆ ಅವಧಿಜ್ಞಾನಿ

ಗಳಾದ ಅತಿಮುಕ್ತಕ ಮುನಿಗಳು ಇಲ್ಲಿಗೆ ಬಂದಿದ್ದರು. ಅವರು ನಿನ್ನನ್ನು ನೋಡಿ ಈ ಕನ್ಯೆ ಸ್ತ್ರೀಯರ ಸಲ್ಲಕ್ಷಣಗಳಿಂದ ಕೂಡಿದ್ದಾಳೆ. ಮುಂದೆ ಈಕೆ ವಾಸುದೇವನ ವಕ್ಷಃಸ್ಥಲವನ್ನು ಲಕ್ಷ್ಮಿಯಂತೆ ಆಶ್ರಯಿಸುತ್ತಾಳೆ. ಕೃಷ್ಣನ ಅಂತಃಪುರಸ್ತ್ರೀಯರಲ್ಲಿ ಷೋಡಶ ಸಹಸ್ರ ಸ್ತ್ರೀಯರಲ್ಲಿ ಈಕೆ ಪ್ರಧಾನಳಾಗುತ್ತಾಳೆ' ಎಂದು ಹೇಳಿದ್ದರು. ಹೀಗೆ ಹೇಳಿ ಆ ಸಿದ್ಧಾದೇಶರಾದ ಮುನಿಗಳು ಹೊರಟುಹೋದರು. ಕೆಲಕಾಲದವರೆಗೆ ಕೃಷ್ಣನ ವಿಚಾರ ಮಾತುಕತೆ ಅಂತರ್ಹಿತವಾಗಿದ್ದಿತು. ಇದೀಗ ನಾರದನು ಪುನರ್ಜನ್ಮದ ಕಥೆಯ ಹಾಗೆ ಈ ಕಥೆಯನ್ನು ಮತ್ತೆ ಎತ್ತಿದ್ದಾನೆ. ಇದೆಲ್ಲ ನಿಜವಾದದ್ದಾದರೆ, ಮುನಿವಚನವು ಸತ್ಯವೆಂದೇ ನಾನು ತಿಳಿಯುತ್ತೇನೆ. ಆದರೆ ಇಲ್ಲಿ ವಿಚಾರಮಾಡಬೇಕಾಗಿರುವುದೇನೆಂದರೆ, ನಿನ್ನ ಸೋದರ ರುಕ್ಮಿ ಪ್ರಭಾವಶಾಲಿಯಾದವನು ; ನಿನ್ನನ್ನು ನಂಟಸ್ತಿಕೆಯು ಕಾರಣವಾಗಿ ಶಿಶುಪಾಲನಿಗೆ ಕೊಡುತ್ತಿದ್ದಾನೆ. ನಿನ್ನ ವಿವಾಹಸಮಯವೂ ಸನ್ನಿಹಿತವಾಗುತ್ತಿದೆ. ಇಂದು ನಾಳೆ ಶಿಶುಪಾಲನು ನಿನಗಾಗಿ ಇಲ್ಲಿಗೆ ಬರುವವನಿದ್ದಾನೆ.''

ಸೋದರತ್ತೆಯ ಈ ಮಾತು ಕೇಳಿ, ''ಲೋಕದಲ್ಲಿ ಮುನಿವಾಕ್ಯವು ಅನ್ಯಥಾ ಆಗುವುದೆಂತು ? ಇದರಿಂದ ನನ್ನ ಅಭಿಪ್ರಾಯವನ್ನು ಹೇಗಾದರೂ ಮಾಡಿ ಕೂಡಲೇ ನೀವು ದ್ವಾರಿಕಾಪತಿಯಲ್ಲಿಗೆ ಹೇಳಿ ಕಳಿಸಿ, ಅವರೇ ನನ್ನ ಪತಿಯಾಗುವವರು'' ಎಂದು ರುಕ್ಮಿಣಿ ನುಡಿದಳು. ರುಕ್ಮಿಣಿಯ ಸೋದರತ್ತೆ ಅವಳ ಇಷ್ಟವನ್ನರಿತು ಕೂಡಲೇ ಒಬ್ಬ ಆಪ್ತನ ಮೂಲಕ ಗುಪ್ತರೀತಿಯಿಂದ ಕೃಷ್ಣನಿಗೆ ಒಂದು ಪತ್ರವನ್ನು ಹೀಗೆ ಬರೆದು ಕಳಿಸಿದಳು : "ಹೇ ಕೃಷ್ಣ, ರುಕ್ಮಿಣಿ ನಿನ್ನಲ್ಲಿ ಅನುರಕ್ತೆಯಾಗಿದ್ದಾಳೆ; ನಿನ್ನ ಹೆಸರಿನಲ್ಲಿ ಉಸಿರು ಹಿಡಿದುಕೊಂಡಿದ್ದಾಳೆ. ನಿನ್ನಿಂದ ಅವಳು ತನ್ನ ಪ್ರಾಣದ ಭಿಕ್ಷೆ ಬೇಡುತ್ತಾಳೆ. ಹೇ ಮಾಧವ, ಮಾಘ ಶುಕ್ಲ ಅಷ್ಟಮಿಯಂದು ನೀನು ಬಂದು ರುಕ್ಮಿಣಿಯನ್ನು ಶೀಘ್ರವಾಗಿ ಅಪಹರಿಸಿ ಕೊಂಡೊಯ್ಯಬಲ್ಲೆಯಾದರೆ ಮಾತ್ರ ಆಕೆ ನಿಸ್ಸಂದೇಹವಾಗಿ ನಿನ್ನವಳಾಗುತ್ತಾಳೆ. ಇಲ್ಲವೆ ಅವಳ ತಂದೆಯೂ ಬಂಧುಗಳೂ ಸೇರಿ ಅವಳನ್ನು ಶಿಶುಪಾಲನಿಗೊಪ್ಪಿಸುತ್ತಾರೆ. ಆ ಸ್ಥಿತಿಯಲ್ಲಿ ನೀನು ಆಕೆಗೆ ದೊರೆಯದಿದ್ದರೆ ಅವಳಿಗೆ ಮರಣವೇ ಶರಣಾಗುತ್ತದೆ. ಆಕೆ ನಾಗವಲಿಯ ವ್ಯಾಜದಿಂದ ನಿನ್ನನ್ನು ನಗರದ ಬಾಹ್ಯೋದ್ಯಾನದಲ್ಲಿದ್ದು ನಿರೀಕ್ಷಿಸುತ್ತಿರುತ್ತಾಳೆ. ನೀನು ದಯಾಳುವಾಗಿ ತಪ್ಪದೆ ಬಂದು ಅವಳನ್ನು ಸ್ವೀಕರಿಸಬೇಕು.''

ಈ ಲೇಖಾರ್ಥವನ್ನು ಅರಿತು ಕೃಷ್ಣನು ರುಕ್ಮಿಣಿಯನ್ನಪಹರಿಸಲು ಮನಸ್ಸುಕೊಟ್ಟನು. ಇತ್ತ ಕನ್ಯಾದಾನಕ್ಕೆ ಏರ್ಪಾಡು ಮಾಡುತ್ತಿದ್ದ ಭೀಷ್ಮನ ಮಾತಿನಂತೆ ಶಿಶುಪಾಲನು ಕುಂಡಿನಪುರಕ್ಕೆ ಉತ್ಸುಕನಾಗಿ ಬಂದನು. ಅವನ ಚಾತುರಂಗ ಪುರದ ದಿಗ್ದೆಸೆಗಳನ್ನು ವ್ಯಾಪಿಸಿತು. ಅವಸರಜ್ಞನಾದ ನಾರದನು ಕೂಡಲೇ ಬಂದು ಕೃಷ್ಣನನ್ನು ಏಕಾಂತದಲ್ಲಿ ಪ್ರೇರಿಸಿದನು. ಕೃಷ್ಣನು ಬಲದೇವನೊಂದಿಗೆ ಗುಪ್ತರೀತಿಯಿಂದ ಕುಂಡಿನಪುರಕ್ಕೆ ಬಂದನು. ರುಕ್ಮಿಣಿ ನಾಗವಲಿಯಾಚರಿಸಿ ಸೋದರತ್ತೆ ಮೊದಲಾದವರೊಂದಿಗೆ ಪುರೋಪವನದಲ್ಲಿ ನಿಂತಿರಲು, ಕೃಷ್ಣನು ಅವಳನ್ನು ಚೆನ್ನಾಗಿ ನೋಡಿದನು. ಉಚಿತವರಿತು ಅವಳೊಡನೆ ಮಾತಾಡಿದ ಮೇಲೆ, ''ಹೇ ಭದ್ರೆ, ನಾನು ನಿನಗಾಗಿಯೇ ಬಂದಿದ್ದೇನೆ. ನಿನ್ನ



ಹೃದಯಸ್ಥಿತನಾದವನು ಯಾರೋ ಆತನೇ ನಾನು. ದಿಟವಾಗಿ ನಿನಗೆ ನನ್ನ ಮೇಲೆ ಅನುರಾಗವಿರುವುದಾದರೆ, ಇಕೋ ಈ ರಥವನ್ನೇರು'' ಎಂದನು. ಆಗ ರುಕ್ಮಿಣಿಯ ಸೋದರತ್ತೆ ಕೂಡ ''ಹೇ ಕಲ್ಯಾಣಿ, ಅತಿಮುಕ್ತಕನು ನಿನಗೆ ಪತಿಯೆಂದು ಯಾರನ್ನು ಹೇಳಿದ್ದನೋ ಆತನೇ ಈಗ ನಿನ್ನ ಪುಣ್ಯದಿಂದಾಗಿ ಸೆಳೆಯಲ್ಪಟ್ಟು ಇಲ್ಲಿಗೆ ಬಂದಿದ್ದಾನೆ. ತಾಯಿತಂದೆಗಳು ಮಗಳನ್ನು ಕೊಡುವುದಾದರೂ ವಿಧಿಪ್ರೇರಣೆಯಿಂದಲೇ. ಆದ್ದರಿಂದ ಎಲ್ಲಕ್ಕೂ ದೊಡ್ಡ ಗುರು ವಿಧಿಯೇ'' ಎಂದಳು. ಅನುರಾಗವತಿಯೂ ಲಜ್ಜಾವತಿಯೂ ಆದ ರುಕ್ಮಿಣಿಯನ್ನು ಕೃಷ್ಣನು ತನ್ನೆರಡೂ ಕೈಗಳಿಂದೆತ್ತಿ ರಥದ ಮೇಲೆ ಕೂರಿಸಿಕೊಂಡನು. ಆ ಸರ್ವಪ್ರಥಮ ಸರ್ವಾಂಗೀಣ ತನುಸ್ಪರ್ಶದಿಂದ ಅವರಿಗೆ ಸುಖವೆನಿಸಿತು. ರುಕ್ಮಿಣಿಯ ಆ ಕಲ್ಯಾಣವು ಅವಳನ್ನು ಶಿಶುಪಾಲನಿಗೆ ವಿಮುಖವೂ ಕೃಷ್ಣನಿಗೆ ಸಮ್ಮುಖವೂ ಆಗಿ ಮಾಡಬೇಕೆಂಬ ವಿಧಿಯಿಚ್ಛೆಯಂತೆಯೇ ಆಯಿತು.

ಆಮೇಲೆ ಕೃಷ್ಣನು ರುಕ್ಮಿ ಶಿಶುಪಾಲ ಭೀಷ್ಮರಿಗೆ ರುಕ್ಮಿಣೀಹರಣದ ಸುದ್ದಿಯಿತ್ತು, ತನ್ನ ರಥವನ್ನು ಮುನ್ನಡಸಿದನು. ಕೃಷ್ಣನು ಪಾಂಚಜನ್ಯವನ್ನೂ ಬಲದೇವನು ಸುಘೋಷ ಶಂಖವನ್ನೂ ಪೂರೈಸಿದರು. ಶತ್ರುಸೇನೆ ವಿಕ್ಷುಬ್ಧವಾಯಿತು. ಸುದ್ದಿ ತಿಳಿಯುತ್ತಲೇ ರುಕ್ಮಿಯೂ ಶಿಶುಪಾಲನೂ ರಥವೇರಿ ಕೃಷ್ಣ ಬಲರನ್ನು ಹಿಂಬಾಲಿಸಿ ಧಾವಿಸಿದರು. ೬೦ ಸಾವಿರ ರಥ, ೧೦ ಸಾವಿರ ಆನೆ, ೩ ಲಕ್ಷ ಕುದುರೆ ಮತ್ತು ಅನೇಕ ಲಕ್ಷ ಪದಾತಿ ಇವನ್ನೊಳಗೊಂಡು ಆ ವೀರರಿಬ್ಬರೂ ಕೃಷ್ಣ ಬಲರನ್ನು ಸಮೀಪಿಸಿದರು. ಇತ್ತ ಅರ್ಧಾಸನಸುಖಾಸೀನೆಯಾದ ರುಕ್ಮಿಣಿಯನ್ನು ಸಂತೈಸುತ್ತ, ಹರಿಯು ಅವಳಿಗೆ ಗ್ರಾಮಾಕಾರಗಳನ್ನೂ ಸರಿತ್ಸರೋವರಗಳನ್ನೂ ತೋರಿಸುತ್ತ ಮೆಲ್ಲಮೆಲ್ಲಗೆ ಸಾಗುತ್ತಿದ್ದನು. ಸಮೀಪಗತವಾಗುತ್ತಿದ್ದ ಉಗ್ರಸೈನ್ಯವನ್ನು ಕಂಡು ರುಕ್ಮಿಣಿ ಅಪಾಯಶಂಕೆಯಿಂದಾಗಿ ಕೃಷ್ಣನಿಗೆ ''ಹೇ ನಾಥ, ಮಹಾರಥಿಯಾದ ನನ್ನ ಸೋದರ ರುಕ್ಮಿಯೂ, ಶಿಶುಪಾಲನೂ ಕ್ರುದ್ಧರಾಗಿ ಇದೀಗ ಇತ್ತ ಬರುತ್ತಿದ್ದಾರೆ. ಏನು ಕಾದಿದೆಯೋ? ಮಹಾಸೈನ್ಯ ಸಮೇತರಾದ ಇವರೊಂದಿಗೆ ಏಕಾಕಿಗಳಾದ ನಿಮ್ಮಿಬ್ಬರಿಗೂ ಮಹಾಯುದ್ಧ ಘಟಿಸಿದರೆ ಜಯವು ಸಂದಿಗ್ಧವಾದದ್ದು. ಅಯ್ಯೋ, ನಾನು ದುರದೃಷ್ಟಶಾಲಿನಿ"—ಎಂದಳು. ಆಗ ಕೃಷ್ಣನು ''ಹೇ ಮೃದುಮಾನಸೆ, ಹೆದರಬೇಡ; ನಾನು ಸತ್ತ್ವಶಾಲಿಯಾಗಿರಬೇಕಾದರೆ ಅನ್ಯರ ಸೈನ್ಯಸಂಖ್ಯೆ ಎಷ್ಟು ದೊಡ್ಡದಾದರೇನು?"—ಎಂದು ನುಡಿದು, ಅಪ್ರಾಕೃತ ಅಸ್ತ್ರವಿದನಾದ ಆತನು ತನ್ನ ಬಾಣದಿಂದ ಎದುರಿಗೆ ನಿಂತಿದ್ದ ತಾಲವೃಕ್ಷವನ್ನು ಅನಾಯಾಸವಾಗಿ ಕತ್ತರಿಸಿ ಹಾಕಿದನು. ಹಾಗೆಯೇ ಉಂಗುರದ ವಜ್ರವನ್ನು ಕೈಯಿಂದ ಪುಡಿಮಾಡಿ, ಅವಳ ಸಂದೇಹವನ್ನು ತೊಲಗಿಸಿದನು. ಇವುಗಳಿಂದ ಪತಿಯ ಸಾಮರ್ಥ್ಯವರಿತ ರುಕ್ಮಿಣಿ ಕೈಮುಗಿದು ''ಹೇ ನಾಥ, ನೀನು ಯತ್ನಪೂರ್ವಕವಾಗಿ ನನ್ನ ಸೋದರನನ್ನು ಯುದ್ಧದಲ್ಲಿ ರಕ್ಷಿಸಬೇಕು'' ಎಂದು ಕೇಳಿಕೊಂಡಳು. ಕೃಷ್ಣನು ಹಾಗೆಯೇ ಆಗಲೆಂದು ನುಡಿದು ಸಂತೈಸಿದ ಮೇಲೆ, ಕೃಷ್ಣ ಬಲದೇವರು ಬಲುವೇಗದಲ್ಲಿ ತಮ್ಮ ರಥವನ್ನು ಶತ್ರುವಿನ ಕಡೆ ತಿರುಗಿಸಿದರು. ಕ್ರುದ್ಧರಾದ ಇವರಿಬ್ಬರ ಬಾಣಹತಿಗೆ ಸಿಕ್ಕು ಶತ್ರು

ಸೇನೆ ಬೆದರಿ ಚೆದರಿಹೋಯಿತು. ಕೃಷ್ಣನು ಉಗ್ರಯುದ್ಧದಲ್ಲಿ ಶಿಶುಪಾಲನನ್ನೂ ಬಲದೇವನು ರುಕ್ಮಿಯನ್ನೂ ಎದುರಿಸಿದರು. ದ್ವಂದ್ವಯುದ್ಧದಲ್ಲಿ ಕೃಷ್ಣನು ತನ್ನ ಬಾಣದಿಂದ ಶಿಶುಪಾಲನ ಉನ್ನತ ಶಿರಸ್ಸನ್ನೂ ಅವನ ಕೀರ್ತಿಯನ್ನೂ ಒಟ್ಟಿಗೆ ಹೊಡೆದುರುಳಿಸಿದನು. ಬಲದೇವನು ರಥವನ್ನೂ ರುಕ್ಮಿಯನ್ನೂ ಜರ್ಜರಗಾತ್ರವಾಗಿ ಮಾಡಿ, ಪ್ರಾಣವೊಂದನ್ನುಳಿಸಿ, ರುಕ್ಮಿಯನ್ನು ಬಿಟ್ಟುಕೊಟ್ಟನು. ಅಲ್ಲಿಂದ ಬಲರಾಮನು ಕೃಷ್ಣನೊಂದಿಗೆ ಮುನ್ನಡೆದನು. ರೈವತಕ ಪರ್ವತದ ಮೇಲೆ ಕೃಷ್ಣನು ವಿಧಿಪೂರ್ವಕವಾಗಿ ರುಕ್ಮಿಣಿಯನ್ನು ವರಿಸಿದನು. ಮೂವರೂ ದ್ವಾರಿಕೆಯನ್ನು ಪ್ರವೇಶಿಸಿದರು. ರೇವತಿಯನ್ನು ಕಾಣಲು ಉತ್ಸುಕನಾಗಿ ಬಲದೇವನು ತನ್ನ ಭವನಕ್ಕೆ ಹೋದನು. ಕೃಷ್ಣನೂ ನವವಧುವಿನೊಂದಿಗೆ ತನ್ನ ಭವನಕ್ಕೆ ಪ್ರವೇಶಮಾಡಿದನು.

ಸೂರ್ಯಾಸ್ತವಾಗಿ ಜಗನ್ಮೋಹಕವಾದ ಚಂದ್ರೋದಯವು ಕಾಣಿಸಿಕೊಂಡಿತು. ಯಾದವರು ತಮ್ಮ ಪತ್ನಿಯರೊಂದಿಗೆ ತಂತಮ್ಮ ಭವನಗಳಲ್ಲಿ ಕ್ರೀಡಿಸತೊಡಗಿದರು. ಕೃಷ್ಣನೂ ರುಕ್ಮಿಣಿಯೊಂದಿಗೆ ಆ ರಾತ್ರಿ ಕ್ರೀಡೆಯಲ್ಲಿದ್ದು, ಕೋಮಲಶಯ್ಯೆಯಲ್ಲಿ ಅವಳೊಂದಿಗೆ ಪವಡಿಸಿದನು. ರಾತ್ರಿ ಸರಿದು ಬೆಳಗಿನ ಕೋಳಿ ಕೂಗಿತು. ರುಕ್ಮಿಣಿ ಮೊದಲು ಎಚ್ಚರಗೊಂಡು ಕೃಷ್ಣನನ್ನು ಮೆಲ್ಲಗೆ ಅತ್ತ ಸರಿಸುತ್ತಲೂ, ಅವಳ ಕರಸ್ಪರ್ಶದಿಂದ ಅವನೂ ಎಚ್ಚರಗೊಂಡು ಲಜ್ಜಾವನತೆಯಾಗಿದ್ದ ಅವಳನ್ನು ಬಳಿಯಲ್ಲಿಯೇ ಕೂರಿಸಿಕೊಂಡು, ಲಕ್ಷ್ಮಿಯನ್ನು ನೋಡುವ ಹಾಗೆ ನೋಡಿದನು. ದ್ವಾರಿಕಾಪುರಿಯಲ್ಲಿ ಪ್ರಾತಃಕಾಲದ ಭೇರೀತಾಡನ ಶಂಖಧ್ವನಿ ಮಧುರಗೀತ ಇವು ಸಮುದ್ರಗಂಭೀರಧ್ವನಿಯಿಂದ ಮೊಳಗಿದುವು. ಅಲ್ಲಲ್ಲಿ ರಾಜರೂ ಪ್ರಜೆಗಳೂ ಎದ್ದು ತಮ್ಮ ತಮ್ಮ ಕೆಲಸಗಳಲ್ಲಿ ತತ್ಪರರಾದರು. ಸೂರ್ಯೋದಯವಾಯಿತು.

## ೪೩. ಶಂಬಪ್ರದ್ಯುಮ್ನ ವರ್ಣನ

ಕೃಷ್ಣನು ಸತ್ಯಭಾಮೆಯ ಮನೆಯ ಬಳಿಯೆ ರುಕ್ಮಿಣಿಗೆ ದಿವ್ಯಭವನವನ್ನು ಮಾಡಿಸಿದನು. ಅದು ಮಹತ್ತರ ಮೊದಲಾದ ಪರಿವಾರ ವರ್ಗದಿಂದ ಕೂಡಿದ್ದಿತು. ಆಕೆಗೆ ಮಹಾರಾಣಿ ಪದವಿಯಿತ್ತು ಗೌರವಿಸಿದನು. "ಕೃಷ್ಣನು ಸಮಸ್ತ ಸ್ತ್ರೀಯರನ್ನೂ ಮೀರಿಸುವಂಥ ಒಬ್ಬಳನ್ನು ಕರೆತಂದಿದ್ದಾನೆ, ಆಕೆ ಅವನಿಗೆ ಅತಿಪ್ರಿಯಳಾಗಿದ್ದಾಳೆ" ಎಂಬುದು ಸತ್ಯಭಾಮೆಗೆ ತಿಳಿಯಿತು. ತನಗೆ ಈರ್ಷ್ಯೆಯುಂಟಾದರೂ ದಿಟ್ಟೆಯಾಗಿ ಪತಿಯೊಂದಿಗೆ ಸುಖವಾಗಿದ್ದಳು.

ಒಂದು ದಿನ ಕೃಷ್ಣನು ರುಕ್ಮಿಣೀನಿಷ್ಠ್ಯೂತಮುಖತಾಂಬೂಲವನ್ನು ವಸ್ತ್ರದ ಸೆರಗಿಂದ ಮರೆಸಿ ಸತ್ಯಭಾಮೆಯ ಮನೆಗೆ ಬಂದನು. ಆದರೆ ಅದರ ವಾಸನೆಗೆ ದುಂಬಿಗಳು ಮುತ್ತಿ, 'ಇದೇನು ಈ ಸುಗಂಧವಸ್ತು?' ಎಂದು ಭ್ರಾಂತಿಯಿಂದ ಅವಳು ಅದನ್ನು ತೆಗೆದುಕೊಂಡಳು. ವರ್ಣಗಂಧಾಢ್ಯವಾದ ಆ ಮುಖತಾಂಬೂಲವನ್ನು ಚೆನ್ನಾಗಿ ಮೂಸಿನೋಡಿ. ತನ್ನ ಶರೀರದ ಮೇಲೆ ಹಾಕಿಕೊಂಡಳು. ಕೃಷ್ಣನು ಜೋರಾಗಿ ನಕ್ಕನು.



ಇದನ್ನು ಕಂಡು ಸತ್ಯಭಾಮೆ ಕೆರಳಿ ಕೆಂಡವಾದಳು. ಕೃಷ್ಣನ ವರ್ತನೆಯಿಂದ ಸವತಿಯ ಭಾಗ್ಯಾತಿಶಯವನ್ನು ತಿಳಿದು ಸತ್ಯಭಾಮೆಯು ರುಕ್ಮಿಣಿಯ ರೂಪಲಾವಣ್ಯವನ್ನು ನೋಡಬಯಸಿದಳು. ಒಂದು ದಿನ ಪತಿಗೆ "ನಾಥ, ನನಗೆ ರುಕ್ಮಿಣಿಯನ್ನು ತೋರಿಸಿ ; ಕಿವಿಗಳಿಗೆ ಹೇಗೋ ಕಣ್ಣುಗಳಿಗೂ ನಲಿವುಂಟುಮಾಡಿ" ಎಂದಳು. ಕೃಷ್ಣನು ಒಪ್ಪಿ ತನ್ನಲ್ಲಿ ಏನೋ ರಹಸ್ಯವನ್ನು ಪರಿಭಾವಿಸಿ, ಅಲ್ಲಿಂದ ಹೊರಟನು. ಮಣಿವಾಪಿಕೆಯ ತಟದ ಮೇಲೆ ರುಕ್ಮಿಣಿಯನ್ನು ನಿಲ್ಲಿಸಿ ಮತ್ತೆ ಸತ್ಯಭಾಮೆಯಲ್ಲಿಗೆ ಬಂದನು. "ನೀನು ಉದ್ಯಾನಕ್ಕೆ ನಡೆ; ನಾನು ನಿನ್ನಿಷ್ಟದಂತೆ ರುಕ್ಮಿಣಿಯನ್ನು ಈಗಲೇ ಕರೆತರುತ್ತೇನೆ" ಎಂದು ಹೇಳಿ ಮೊದಲು ಸತ್ಯಭಾಮೆಯನ್ನು ಕಳಿಸಿದನು. ತಾನು ಹಿಂದಿನಿಂದ ಹೋಗಿ ಯಾವುದೋ ಗಿಡದ ಪೊದರಿನಲ್ಲಿ ಬಚ್ಚಿಟ್ಟುಕೊಂಡನು. ಮಣಿಭೂಷಣಾಲಂಕೃತೆ ರುಕ್ಮಿಣಿ ಮಣಿವಾಪಿಕೆಯ ಬಳಿಯಲ್ಲಿ ಒಂದು ಕೈಯಲ್ಲಿ ಚೂತಲತೆಯನ್ನು ಹಿಡಿದುಕೊಂಡು ಪಾದಾಗ್ರದ ಮೇಲೆ ನಿಂತಿದ್ದಳು. ಎಡಗೈಯಲ್ಲಿ ತನ್ನ ಹೊರವಾದ ಧಮ್ಮಿಲ್ಲವನ್ನು ಹಿಡಿದಿದ್ದಳು. ಸ್ತನಭಾರದಿಂದ ಬಾಗಿದ್ದಳು. ಊರ್ಧ್ವಶಾಖೆಯ ಫಲದತ್ತ ನೋಟವು ನಟ್ಟಿತ್ತು. ದೇವತೆಯಂತೆ ತೋರುತ್ತಿದ್ದ ಆಕೆಯನ್ನು ಸತ್ಯಭಾಮೆ ನೋಡಿ "ಈಕೆ ಯಾರೋ ದೇವತೆ ಎಂದೇ ಬಗೆದಳು. ಅವಳೆದುರು ಸುಮಾಂಜಲಿಯನ್ನು ಸೂಸಿ, ಅವಳ ಕಾಲ ಮೇಲೆ ಬಿದ್ದು, ಈರ್ಷ್ಯಾಶಲ್ಯ ಕಲಂಕಿತೆಯಾದ ಅವಳು ಸ್ವಸೌಭಾಗ್ಯವನ್ನೂ ಸವತಿಯ ದೌರ್ಭಾಗ್ಯವನ್ನೂ ಪ್ರಾರ್ಥಿಸಿಕೊಂಡಳು. ಆ ಹೊತ್ತಿಗೆ ಸರಿಯಾಗಿ ಮಂದಸ್ಮಿತನಾಗಿ ಕೃಷ್ಣನು ಕಾಣಿಸಿಕೊಂಡು, ಸತ್ಯಭಾಮೆಗೆ "ಆಹಾ. ಸೋದರಿಯರಿಬ್ಬರೂ ನಯವಾದ ರೀತಿಯಲ್ಲಿ ಅಪೂರ್ವವಾಗಿ ಪರಸ್ಪರರನ್ನು ದರ್ಶಿಸಿದಿರಿ" ಎಂದನು. ಆ ಮಾತು ಕೇಳಿ ಸತ್ಯಭಾಮೆಗೆ ರಹಸ್ಯವೇನೆಂದು ತಿಳಿದು ಕೋಪ ಬಂತು. "ಏನು ನೀನೋ. ನಮ್ಮಿಬ್ಬರ ಇಚ್ಛಾನುಸಾರ ದರ್ಶನವಾಗಲೆಂದು ಹೀಗೆ ಮಾಡುವುದರಲ್ಲಿ ನಿನ್ನ ಉದ್ದೇಶವೇನು ?" ಎಂದಳು. ಕೃಷ್ಣನ ಮಾತಿನಂತೆ ರುಕ್ಮಿಣಿ ಸತ್ಯಭಾಮೆಗೆ ವಂದಿಸಿದಳು. ಕೃಷ್ಣನು ಆಯಿಬ್ಬರೊಂದಿಗೆ ಆ ಉದ್ಯಾನದಲ್ಲಿ ಬಲುಹೊತ್ತು ಕ್ರೀಡಿಸುತ್ತಿದ್ದು, ತನ್ನ ಭವನಕ್ಕೆ ಮರಳಿದನು.

ಕೃಷ್ಣನು ಹೀಗೆ ತನ್ನ ಪತ್ನಿಯರೊಂದಿಗೆ ಸುಖವಾಗಿದ್ದು ಹಲವು ದಿನಗಳನ್ನು ಒಂದು ದಿನದಂತೆ ಕಳೆದನು. ಒಂದು ದಿನ ಗಾಢಸ್ನೇಹದಿಂದಾಗಿ ಹಸ್ತಿನಪುರಾಧಿಪನಾದ ದುರ್ಯೋಧನನು ಒಂದು ಪ್ರಿಯವಾರ್ತೆಯೊಂದಿಗೆ ದೂತನೊಬ್ಬನನ್ನು ಕೃಷ್ಣನಲ್ಲಿಗೆ ಕಳಿಸಿದನು. "ನಿಮಗೆ ರುಕ್ಮಿಣಿ ಸತ್ಯಭಾಮೆಯರಲ್ಲಿ ಯಾರಿಗೆ ಮೊದಲು ಪುತ್ರನಾಗುವನೋ, ಆತನೇ ನನಗೊಂದು ಪಕ್ಷ ಪುತ್ರಿ ಜನಿಸುವಲ್ಲಿ ಅವಳಿಗೆ ಪತಿಯಾಗುವವನಾಗಲಿ" ಎಂಬುದೇ ಆ ಸಂದೇಶ. ಈ ಮಾತಿಗೆ ಕೃಷ್ಣ ಹರ್ಷಿಸಿ ದೂತನನ್ನು ಸನ್ಮಾನಿಸಿ ಕಳಿಸಿದನು. ದೂತನು ತೆರಳಿ ತನ್ನ ಸ್ವಾಮಿಗೆ ಕಾರ್ಯಸಿದ್ಧಿಯಾಗುವ ಸುದ್ದಿ ನಿವೇದಿಸಿದನು. ಈ ವಿಷಯ ಸತ್ಯಭಾಮೆಗೆ ತಿಳಿದು ರುಕ್ಮಿಣಿಗೆ ತನ್ನ ದೂತಿಯರನ್ನು ಕಳಿಸಿಕೊಟ್ಟಳು. ಅವರು ಬಂದು ರುಕ್ಮಿಣಿಗೆರಗಿ ಹೀಗೆಂದರು : "ಎಲೈ ಸ್ವಾಮಿನಿ, ನಮ್ಮ ಒಡತಿ ಸತ್ಯಭಾಮೆ ನಮ್ಮ ಕೈಯಲ್ಲಿ ನಿಮಗೆ ಕೆಲವು ಒಳ್ಳೆಯ ಮಾತು ಹೇಳಿ ಕಳಿಸಿದ್ದಾಳೆ. ಅದೇನೆಂದರೆ, ನಮ್ಮಿಬ್ಬರಲ್ಲಿ

ಯಾರಿಗೆ ಮೊದಲು ಪುತ್ರನಾಗುವನೋ ಆತನು ದುರ್ಯೋಧನನಿಗೆ ಹುಟ್ಟಲಿರುವ ಮಗಳನ್ನು ವರಿಸುವುದು ಎಂದು ನಿಶ್ಚಯವಾಗಿಹೋಗಿದೆ. ಆ ವಿವಾಹಸಮಯದಲ್ಲಿ ನಮ್ಮಿಬ್ಬರಲ್ಲಿ ಯಾರಿಗೆ ಪುತ್ರನಾಗಿರುವುದಿಲ್ಲವೋ ಅಂಥವಳ ಖಂಡಿತಕೇಶಲತೆಯನ್ನು ವಧೂವರರು ಕಾಲುಕೆಳಗೆ ಹಾಕಿಕೊಂಡು ಸ್ನಾನ ಮಾಡುವವರಾಗುತ್ತಾರೆ. ಈ ಕಾರ್ಯ ಪ್ರಶಸ್ತವಾದ್ದು, ಯಶಸ್ಕರವಾದ್ದು. ಆದ್ದರಿಂದ ನಿನಗೆ ಇದು ಹಿಡಿಸಿದರೆ ನಿನ್ನ ಒಪ್ಪಿಗೆಯನ್ನು ಕಳಿಸಿಕೊಡು ಎನ್ನುವುದಾಗಿದೆ''. ಆ ಕರ್ಣಾಮೃತಪ್ರಾಯವೂ ಹರ್ಷಪ್ರದವೂ ಆದ ಸಮಾಚಾರಕ್ಕೆ ರುಕ್ಮಿಣಿ ಹರ್ಷಿಸಿ 'ತಥಾಸ್ತು' ಎನ್ನುತ್ತಲೂ ದೂತಿಯರು ತೆರಳಿ ತಮ್ಮ ಒಡತಿಗೆ ಅದನ್ನು ನಿವೇದಿಸಿದರು.

ಚತುರ್ಥಸ್ನಾನಾನಂತರದಂದು ರುಕ್ಮಿಣಿ ರಾತ್ರಿ ಮಲಗಿರುವಾಗ ತಾನು ಹಂಸ ವಿಮಾನವೇರಿ ಆಕಾಶಯಾನ ಮಾಡಿದಂತೆ ಕನಸು ಕಂಡಳು. ಎಚ್ಚರವಾಗಿ ಕೃಷ್ಣನಿಗೆ ಅದನ್ನು ತಿಳಿಸಿದಳು. ಅದಕ್ಕೆ ಆತನು ''ನಿನಗೆ ಆಕಾಶಗಾಮಿಯಾಗುವ ಪುತ್ರನೊಬ್ಬನು ಆಗುತ್ತಾನೆ" ಎಂದನು. ಅವಳಿಗೆ ಸಂತಸವಾಯಿತು. ಆಮೇಲೆ ಕೃಷ್ಣ ಮೊದಲಾಗಿ ಎಲ್ಲರ ಸಂತಸವನ್ನೂ ಬೆಳಸುವಂತೆ ಅಚ್ಯುತೇಂದ್ರನು ಸ್ವರ್ಗಚ್ಯುತನಾಗಿ ಬಂದು ರುಕ್ಮಿಣಿಯ ಗರ್ಭದಲ್ಲಿ ನೆಲಸಿದನು. ಆಗಲೇ ಸತ್ಯಭಾಮೆಯೂ ಶಿಸಃಸ್ನಾತೆಯಾಗಿ ಸುಸ್ವಪ್ನಪೂರ್ವಕವಾಗಿಯೇ ಸ್ವರ್ಗಚ್ಯುತ ದೇವನನ್ನು ಪುತ್ರನಾಗಿ ಗರ್ಭದಲ್ಲಿ ಧರಿಸಿದಳು. ಅವರ ಗರ್ಭದ ಬಳವಿ ತಾಯ್ತಂದೆಯರನ್ನು ನಲಿಸಿತು. ಪ್ರಸವದ ದಿನ ನೆರೆದು ರುಕ್ಮಿಣಿ ನರಲಕ್ಷಣಪೂರ್ಣನಾದ ಪುತ್ರನನ್ನು ಹಡೆದಳು. ಸತ್ಯಭಾಮೆಯೂ ರಾತ್ರಿ ಮಗನೊಬ್ಬನನ್ನು ಹಡೆದಳು. ಇಬ್ಬರೂ ಒಸಗೆಯನ್ನು ತಿಳಿಸಲು ರಾತ್ರಿಯೇ ಕೃಷ್ಣನಲ್ಲಿಗೆ ಸೇವಕರನ್ನು ಏಕಕಾಲದಲ್ಲಿ ಕಳಿಸಿಕೊಟ್ಟರು. ಆಗ ಕೃಷ್ಣನು ಮಲಗಿದ್ದುದರಿಂದ ಸತ್ಯಭಾಮೆಯ ಚರ ಕೃಷ್ಣನ ತಲೆದೆಸೆಯೂ ರುಕ್ಮಿಣಿಯ ಚರ ಕೃಷ್ಣನ ಕಾಲ್ದೆಸೆಯೂ ನಿಂತುಕೊಂಡರು. ಅವನು ಎಚ್ಚತ್ತಾಗ ಮೊದಲು ಅವನ ದೃಷ್ಟಿ ಕಾಲ್ದೆಸೆಯ ದೂತನ ಮೇಲೆ ಬಿತ್ತು. ಮೊದಲು ರುಕ್ಮಿಣಿಯ ಪುತ್ರಜನನದ ವಾರ್ತೆ ಕೇಳಿ ನಲಿದನು. ಆಭರಣದಿಂದ ಸೇವಕನನ್ನು ಬಹುಮಾನಿಸಿದನು. ಆ ಮೇಲೆ ಪಕ್ಕಕ್ಕೆ ತಿರುಗಿ ಸತ್ಯಭಾಮೆಯ ಕಡೆಯವರನ್ನು ಕಂಡನು. ಅವರು ಅವನನ್ನು ಸ್ತುತಿಸಿ, ಸತ್ಯಭಾಮೆಗೆ ಪುತ್ರಜನನವಾದ್ದು ಹೇಳಿದರು. ಅವರಿಗೂ ಸಂತಸಗೊಂಡು ಧನವಿತ್ತು ಪುರಸ್ಕರಿಸಿದನು.

ಆ ವೇಳೆಗೆ ಧೂಮಕೇತುವಿನಂತೆ ಭೀಕರನಾದ ಧೂಮಕೇತುವೆಂಬ ಅಸುರನು ವಿಮಾನಸ್ಥನಾಗಿ ನಭೋಮಾರ್ಗದಿಂದ ಹೋಗುತ್ತ ರುಕ್ಮಿಣಿಯ ಭವನದತ್ತ ಬಂದನು. ಅಲ್ಲಿಗೆ ಬರುತ್ತಲೂ ವಿಮಾನ ನಿಂತುಹೋಯಿತು. ಇದರಿಂದ ಸ್ವಲ್ಪ ಅಚ್ಚರಿಗೊಂಡು ಅವನು ಕೆಳಗೆ ನೋಡಿದನು. ವಿಭಂಗಜ್ಞಾನವುಳ್ಳವನಾದ್ದರಿಂದ ಅದರ ನೆರವಿಂದ ರುಕ್ಮಿಣಿಯ ಪುತ್ರನನ್ನು ನೋಡಿ ಕ್ರೋಧದಿಂದ ಕಣ್ಣುಕೆಂಪಾಗಿ ಅವನ ಪೂರ್ವವೈರ ಭುಗಿಲೆಂದಿತು. ಆ ಪಾಪಿ ಬರುತ್ತಲೇ ರಕ್ಷಣೆಯ ಕೆಲಸದ ಪಹರೆಯವರನ್ನೂ ಪರಿವಾರಜನರನ್ನೂ ರುಕ್ಮಿಣಿಯನ್ನೂ ಗಾಢನಿದ್ರೆಗೆ ಸಲುವಂತೆ ಮಾಡಿ, ಆ ಪುತ್ರನನ್ನು ಎತ್ತಿಕೊಂಡು ಆಕಾಶಕ್ಕೆ ಹಾರಿ



ಹೋದನು. ಆ ಪರ್ವತಸಮಶಿಶುವನ್ನು ಆ ಮಲಿನಬುದ್ಧಿಯು ತನ್ನೆರಡೂ ಕೈಗಳಲ್ಲಿ ಎತ್ತಿಕೊಂಡು ನಭಕ್ಕೊಯ್ದು ''ಈತನು ನನಗೆ ಪೂರ್ವಭವದ ವೈರಿ. ಇವನನ್ನು ಕೈಗಳಲ್ಲಿ ಹೊಸಕಿಹಾಕಿಬಿಡಲೇ ? ಇಲ್ಲ ಉಗುರಿಂದ ಸೀಳಿಹಾಕಿ ಆಕಾಶದಲ್ಲಿ ಹಕ್ಕಿಗಳಿಗೆ ಬಲಿಯಾಗಿ ಎಸೆಯಲೇ ? ಅಥವಾ ನನಗೆ ದ್ರೋಹಬಗೆದ ಈ ಕ್ಷುದ್ರವೈರಿಯನ್ನು ಉಗ್ರ ಜಲಚರಗಳಿರುವ ಈ ಸಮುದ್ರದಲ್ಲಿ ಹಾಕಿಬಿಡಲೇ ? ಅಥವಾ ಇದೊಂದು ಮಾಂಸಪಿಂಡವಷ್ಟೇ ಅಲ್ಲವೆ ? ಇದನ್ನು ಕೊಲ್ಲುವುದರಿಂದ ಏನು ಲಾಭ ? ರಕ್ಷಕರಿಲ್ಲದ ಸ್ಥಿತಿಯಲ್ಲಿ ಇದನ್ನೀಗ ಹೀಗೆಯೇ ಬಿಟ್ಟುಬಿಟ್ಟರೆ ಇದು ತನಗೆ ತಾನೇ ಸತ್ತುಹೋಗುತ್ತದೆ''—ಎಂದುಕೊಂಡನು. ಬಾಲಕನ ಪುಣ್ಯದಿಂದಾಗಿ ಹೀಗೆ ವಿಚಾರಮಾಡಿ ಆ ಮಹಾಸುರನು ಅಲ್ಲಿಂದ ಮುಂದೆ ಸಾಗುತ್ತಿರುವಾಗ, ಒಂದು ಖದಿರಾಟವಿಯನ್ನು ಕಂಡು ಅಲ್ಲಿ ಕೆಳಗಿಳಿದನು. ಅಲ್ಲಿ ತಕ್ಷಶಿಲೆಯ ಕೆಳಗೆ ಆ ಶಿಶುವನ್ನಿರಿಸಿ, ಆ ಧೂಮಕೇತು ಧೂಮಕೇತುವಿನ ಹಾಗೆಯೇ ಅದೃಶ್ಯನಾದನು.

ಆ ವೇಳೆಗೆ ಮೇಘಕೂಟನಗರದ ಅರಸು ಕಾಲಸಂವರ ತನ್ನ ಪತ್ನಿ ಕನಕಮಾಲೆಯೊಂದಿಗೆ ಭೂವಿಹಾರ ಮಾಡುತ್ತ ವಿಮಾನಸ್ಥನಾಗಿ ನಭೋಮಾರ್ಗವಾಗಿ ಆ ಕಡೆಗೆ ಬಂದನು. ಬಾಲಕನ ಪ್ರಭಾವದಿಂದಾಗಿ ಅಲ್ಲಿ ಗತಿನಿರೋಧವುಂಟಾಯಿತು. ''ಇದೇನು ಹೀಗೆ'' ಎಂದು ಆತನು ಅಚ್ಚರಿಗೊಂಡನು. ಕೆಳಗಿಳಿದು ನೋಡುವಾಗ ಒಂದು ಅತ್ತಿತ್ತ ಅಲುಗಾಡುವ ಶಿಲೆಯೊಂದನ್ನು ಕಂಡನು. ತಾನೇ ತೋಚಿಕೊಂಡು ಅದನ್ನು ಸರಿಸಲು ಅದರ ಕೆಳಗೆ ಅಕ್ಷತಶರೀರದ ಕಾಮದೇವಸನ್ನಿಭನಾದ ಬಾಲಕನನ್ನು ಕಂಡನು. ದಯೆಯಿಂದ ಎತ್ತಿಕೊಂಡು ಪತ್ನಿಗೆ ''ನಿನಗೆ ಹೇಗೂ ಪುತ್ರನಿಲ್ಲ ; ಇಕೋ ಇವನು ನಿನ್ನ ಮಗ, ತೆಗೆದುಕೋ'' ಎಂದು ಹೇಳಿ ಕೊಟ್ಟನು. ಮೊದಲೇನೋ ವಿದ್ಯಾಧರಿ ಕನಕಮಾಲೆ ಎರಡೂ ಕೈಗಳನ್ನು ಚಾಚಿದಳು. ಆದರೆ ಮತ್ತೆ ಚತುರೆಯೂ ದೂರದರ್ಶಿಯೂ ಆದ ಆಕೆ ಕೈ ಹಿಂತೆಗೆದುಕೊಂಡು ತನಗೆ ಮಗನೇ ಬೇಡವೆನ್ನುವಂತೆ ಸುಮ್ಮನೆ ನಿಂತುಬಿಟ್ಟಳು. ''ಪ್ರಿಯೆ ಇದೇನು ?'' ಎಂದು ಕಾಲಸಂವರನು ಕೇಳಿದಾಗ ''ನಿಮಗೆ ಉಚ್ಚಕುಲಜರಾದ ೫೦೦ ಮಂದಿ ಮಕ್ಕಳುಂಟು. ಆದ್ದರಿಂದ ಈ ಅಜ್ಞಾತಕುಲದ ಪುತ್ರನನ್ನು ಅವರೇನಾದರೂ ಅಹಂಕಾರದಿಂದ ತಲೆಯ ಮೇಲೆ ಬಡಿಯಲು ತೊಡಗಿದರೆ, ಆ ದೃಶ್ಯವನ್ನು ನನ್ನಿಂದ ನೋಡಲಾಗುವುದಿಲ್ಲ. ಆ ಕಾರಣ ನಾನು ಅಪುತ್ರಕಳಾದರೂ ಚಿಂತೆಯಿಲ್ಲ''—ಎಂದಳು. ರಾಣಿಯು ಹೀಗೆನ್ನಲು ಕಾಲಸಂವರನು ಆಕೆಯನ್ನು ಸಂತೈಸಿ, ಕರ್ಣಪತ್ರಕವನ್ನು ತೆಗದುಕೊಂಡು ''ಇವನು ಯುವರಾಜನಾಗುವವನು'' ಎಂದು ನುಡಿದು ಅವನಿಗೆ ಅಲ್ಲಿಯೇ ಪಟ್ಟಕಟ್ಟಿದನು. ಕನಕಮಾಲೆ ಸಂತೋಷಿಸಿ ಮಗುವನ್ನೆತ್ತಿಕೊಂಡಳು. ಇಬ್ಬರೂ ಮೇಘಕೂಟವನ್ನು ಹೋಗಿ ಹೊಕ್ಕರು. ಚತುರನಾದ ಕಾಲಸಂವರನು ನಗರದಲ್ಲಿ ''ಗೂಢಗರ್ಭವನ್ನು ಧರಿಸಿದ್ದ ಮಹಾದೇವಿ ಕನಕಮಾಲೆ ಇಂದು ಪುತ್ರನಿಗೆ ಜನ್ಮವಿತ್ತಳು'' ಎಂದು ಘೋಷಣೆ ಹೊರಡಿಸಿದನು. ಆ ಪುತ್ರನ ಜನ್ಮೋತ್ಸವ ಮಾಡಿಸಿದನು. ಆಗ ಖೇಚರೀನೃತ್ಯಗಳಾದುವು. ಮಗುವಿಗೆ ಪ್ರದ್ಯುಮ್ನನೆಂದು ಹೆಸರಿಡಲಾಯಿತು. ನೂರಾರು ಖೇಚರಕುಮಾರರ ಬಳಸಿನಲ್ಲಿ ಪ್ರದ್ಯುಮ್ನನು ದಿನೇ ದಿನೇ ಬೆಳೆಯತೊಡಗಿದನು.

ಇತ್ತ ದ್ವಾರಕೆಯಲ್ಲಿ ರುಕ್ಮಿಣಿಯು ಎಚ್ಚರಗೊಂಡಾಗ ಆವಳಿಗೆ ತನ್ನ ಮಗು ಕಾಣಿಸಲಿಲ್ಲ. ವಯಸ್ಸಾದ ದಾದಿಯರೊಂದಿಗೆ ಅಲ್ಲಲ್ಲಿ ಹುಡುಕಿ ನೋಡಿದರೂ ಕಾಣಿಸದಿರಲು ಗಟ್ಟಿಯಾಗಿ ಅಳತೊಡಗಿದಳು : "ಅಯ್ಯೋ ಪುತ್ರ, ನಿನ್ನನ್ನು ಯಾರು ಕದ್ದೊಯ್ದರು ? ವಿಧಿ ನನ್ನ ಕಣ್ಣಿಗೆ ಹೀಗೆ ನಿಧಿ ತೋರಿಸಿ ಕಿತ್ತುಕೊಂಡನೇಕೆ ? ಹಿಂದಿನ ಜನ್ಮದಲ್ಲಿ ನಾನು ಯಾರೋ ತಾಯಿಮಕ್ಕಳನ್ನು ಅಗಲಿಸಿರಬೇಕು. ಅಲ್ಲದಿದ್ದರೆ ನಿಷ್ಕಾರಣವಾಗಿ ಇಂಥ ಪಾಡು ನನಗೆ ಏಕಾಗುತ್ತಿತ್ತು ?" ಅವಳ ಗೋಳನ್ನು ಕೇಳಿ ಪರಿವಾರದವರೂ ರೋದಿಸಿದರು,

ಆಮೇಲೆ ಎಲ್ಲಾ ವೃತ್ತಾಂತವನ್ನೂ ತಿಳಿದು ಭ್ರಾತೃಬಾಂಧವಸಹಿತನಾಗಿ ಕೃಷ್ಣನು ಅಲ್ಲಿಗೆ ಧಾವಿಸಿಬಂದನು. ರೋದನಧ್ವನಿ ಕೇಳಿ ಬಲದೇವನೂ ಬಂದನು. ಕೃಷ್ಣನು ತನ್ನ ನಂದಕ ಖಡ್ಗವನ್ನು ಹಿಡಿದು ತನ್ನ ಸಾಮರ್ಥ್ಯವನ್ನು ಪ್ರಕಟಿಸುತ್ತ, ತಾನು ಪ್ರಮಾದ ವಶನಾದುದಕ್ಕೆ ಆತ್ಮನಿಂದೆಮಾಡಿಕೊಳ್ಳುತಿದ್ದನು. "ದೈವ ಪೌರುಷಗಳಲ್ಲಿ ದೈವವೇ ಬಲಿಷ್ಠವಾದ್ದು. ಈ ನಿಷ್ಕಾರಣ ಪೌರುಷಕ್ಕೆ ಧಿಕ್ಕಾರವಿರಲಿ. ಹಾಗಲ್ಲವಾದರೆ ವಾಸುದೇವನಾದ ನನ್ನ ಮಗನು ಅನ್ಯರಿಂದ ಅಪಹೃತನಾಗುವುದಾದರೂ ಹೇಗೆ?"ಎಂದು ನುಡಿದು ರುಕ್ಮಿಣಿಯನ್ನು ಕುರಿತು "ಪ್ರಿಯೆ, ಈ ವಿಷಯದಲ್ಲಿ ಹೆಚ್ಚು ಶೋಕಿಸಬೇಡ. ಧೈರ್ಯ ತಂದುಕೋ. ಯಾವ ಪುತ್ರನು ಸ್ವರ್ಗಚ್ಯುತನಾಗಿ ಬಂದು ನಮಗೆ ಮಗನಾದನೋ ಅವ ನೇನೂ ಸಾಮಾನ್ಯನಲ್ಲ. ಅವನು ಈ ಲೋಕದಲ್ಲಿ ತಪ್ಪದೆ ಅನೇಕ ಭೋಗಾನುಭವ ಮಾಡತಕ್ಕವನಿದ್ದಾನೆ. ನಾನು ನಿನ್ನ ಪುತ್ರನನ್ನು ಎಲ್ಲಿದ್ದರೂ ಹುಡುಕಿ ತರುತ್ತೇನೆ." ಎಂದು ಸಂತೈಸಿದನು. ದುಃಖಿಯಾದ ಸತಿಯನ್ನು ಹೀಗೆ ಸಂತೈಸಿ ಮಗನನ್ನು ಹುಡುಕುವ ಉಪಾಯ ಚಿಂತಿಸತೊಡಗಿದನು.

ಆ ಹೊತ್ತಿಗೆ ನಾರದನು ಕೃಷ್ಣನಲ್ಲಿಗೆ ಬಂದನು. ಕೃಷ್ಣನಿಂದ ಎಲ್ಲಾ ಸಂಗತಿಯನ್ನೂ ಕೇಳಿ ಒಂದು ಕ್ಷಣ ಸ್ತಬ್ಧನಾದನು, ಯಾದವರ ಮೊಗಗಳೆಲ್ಲ ಕಳಾಹೀನವಾಗಿದ್ದುದು ಕಂಡನು. ಆಮೇಲೆ ಕೃಷ್ಣನನ್ನು ಕುರಿತು, "ಹೇ ವೀರ, ಶೋಕಿಸಬೇಡ. ನಿನ್ನ ಮಗನ ಸುದ್ದಿ ನಾನು ತರುತ್ತೇನೆ. ಇಲ್ಲಿದ್ದ ಅವಧಿಜ್ಞಾನಿಗಳಾದ ಅತಿಮುಕ್ತಕಮುನಿಗಳು ಕೈವಲ್ಯ ಜ್ಞಾನವನ್ನು ಪಡೆದು ಮೋಕ್ಷಕ್ಕೆ ಸಂದರು. ಇನ್ನು ಜ್ಞಾನತ್ರಯನೇತ್ರರಾದ ನೇಮಿ, ಕುಮಾರರು ಬಲ್ಲರಾದರೂ ಹೇಳರು. ಏತಕ್ಕೆ ಹೇಳರು, ಇದು ನಮಗೆ ತಿಳಿಯದು. ಆದ್ದರಿಂದ ನಾನು ಪೂರ್ವವಿದೇಹ ಕ್ಷೇತ್ರಕ್ಕೆ ಹೋಗಿ ಸೀಮಂಧರಜಿನರನ್ನು ಕಂಡು ಅವರಿಂದ ನಿನ್ನ ಮಗನ ವೃತ್ತಾಂತವನ್ನು ತಿಳಿದು ಬಂದು ನಿನಗೆ ಹೇಳುತ್ತೇನೆ. ಹಾಗೆಂದು ನಾರದನು ಕೃಷ್ಣನಿಂದ ಬೀಳ್ಕೊಂಡು ಅಲ್ಲಿಂದ ರುಕ್ಮಿಣಿಯ ಭವನಕ್ಕೆ ಹೋದನು. ಅಲ್ಲಿ ದುಃಖಮ್ಲಾನೆಯಾಗಿದ್ದ ಆಕೆಯನ್ನು ಕಂಡನು. ಒಳಗೆ ದುಃಖವಾದರೂ ಹೊರಗೆ ತೋರಗೊಡದೆ ಸ್ಥಿರಚಿತ್ತರಾಗಿ ಕಾಣಿಸಿಕೊಂಡನು. ರುಕ್ಮಿಣಿ ಎದ್ದು ಸ್ವಾಗತಿಸಿದಳು. ಅವಳಿಗೆ ಹತ್ತಿರದ ಆಸನದಲ್ಲಿ ನಾರದ ಕುಳಿತನು. ರುಕ್ಮಿಣಿ ಪಿತೃಸಮನಾಗಿ ಆತನನ್ನು ಕಂಡು ಉನ್ಮುಕ್ತಕಂಠೆಯಾಗಿ ಅಳತೊಡಗಿದಳು. ನಾರದನು "ರುಕ್ಮಿಣಿ, ನೀನು ಶೋಕಿಸಬೇಡ.



ನಿನ್ನ ಮಗ ಎಲ್ಲಿಯೋ ಇದ್ದಾನೆ ; ಅವನನ್ನು ಪೂರ್ವಭವ ವೈರಿ ಯಾರಾದರೊಬ್ಬನು ಹೇಗೋ ಕದ್ದು ಒಯ್ದಿರಬೇಕು. ಕೃಷ್ಣನಿಗೆ ನಿನ್ನಲ್ಲಿ ಹುಟ್ಟಿದನೆಂದ ಮೇಲೆ ಅದೇ ಆ ಮಹಾತ್ಮನ ದೀರ್ಘಾಯುಷ್ಯವನ್ನು ಸೂಚಿಸುತ್ತದೆ. ಲೋಕದಲ್ಲಿ ಜೀವಿಗಳಿಗೆ ಸುಖ ದುಃಖಕರಗಳಾದ ಸಂಯೋಗವಿಯೋಗಗಳು ಬರುತ್ತಲೇ ಇರುತ್ತವೆ ಎಂಬುದು ನಿನಗೆ ತಿಳಿಯದೇ ? ಆದರೆ ಅವು ಪುಣ್ಯಶಾಲಿಗಳಾದ ಯಾದವರ ಮೇಲೆ ತಮ್ಮ ಪ್ರಭಾವ ತೋರುವುದು ಶಕ್ಯವಿಲ್ಲ. ನೀನು ಜಿನಶಾಸನ ತತ್ತ್ವಜ್ಞೆ, ಸಂಸಾರದ ಸ್ಥಿತಿಗತಿ ಬಲ್ಲವಳು. ಶೋಕವಶಳಾಗಬೇಡ. ನಾನು ಶೀಘ್ರದಲ್ಲಿಯೇ ನಿನ್ನ ಮಗನ ಸುದ್ದಿ ತರುತ್ತೇನೆ" ಎಂದು ಸಂತೈಸಿದನು.

ಆಗಲೇ ನಾರದನು ನಭಕ್ಕೆ ಹಾರಿ ಸೀಮಂಧರರಲ್ಲಿಗೆ ಹೋದನು. ಪುಷ್ಕಲಾವತೀ ದೇಶದ ಪುಂಡರೀಕಿಣಿಯಲ್ಲಿ ಸೀಮಂಧರಜಿನನನ್ನು ಸಂದರ್ಶಿಸಿದನು. ಸ್ತುತಿಸಿ ವಂದಿಸಿ ರಾಜಸಭೆಯಲ್ಲಿ ಹೋಗಿ ಕುಳಿತನು. ಅಲ್ಲಿ ಅದೇ ವೇಳೆಗೆ ೫೦೦ ಬಿಲ್ಲುಡಿಯನಾದ ಪದ್ಮರಥ ಚಕ್ರವರ್ತಿ ಕುಳಿತಿದ್ದನು. ೧೦ ಬಿಲ್ಲುಡಿಯನಾದ ನಾರದನನ್ನು ಕಂಡು ಕೌತುಕವರನಾಗಿ ತನ್ನ ಕರಕಮಲದಿಂದ ಅವನನ್ನು ಎತ್ತಿಕೊಂಡು ಸೀಮಂಧರನನ್ನು ಕುರಿತು, "ಸ್ವಾಮಿ ಈ ಮನುಷ್ಯಾಕೃತಿಯ ಕೀಟ ಯಾವುದು ? ಇದರ ಹೆಸರೇನು ?" ಎಂದನು. ಜಿನನು ಎಲ್ಲಾ ರಹಸ್ಯ ತಿಳಿಸಿದನು. "ಈತನು ಜಂಬೂದ್ವೀಪದ ಭರತಕ್ಷೇತ್ರದ ೯ನೆಯ ನಾರಾಯಣನ ಹಿತದಲ್ಲಿ ಆಸಕ್ತನಾದ ನಾರದನೆಂಬಾತನು" ಎಂದನು. ಚಕ್ರವರ್ತಿ ಮತ್ತೆ "ಸ್ವಾಮಿ ಈತನು ಇಲ್ಲಿಗೆ ಏಕೆ ಬಂದಿದ್ದಾನೆ ?" ಎಂದು ಪ್ರಶ್ನಿಸಿದನು. ಸೀಮಂಧರನು ಚಕ್ರವರ್ತಿಗಾಗಿ ಆರಂಭದಿಂದ ಹಿಡಿದು ಎಲ್ಲಾ ಸಮಾಚಾರವನ್ನೂ ಅವನಿಗೆ ವಿವರಿಸಿದನು. ಆಗಲೇ ಆ ಬಾಲಕನ ಹೆಸರು ಪ್ರದ್ಯುಮ್ನನೆಂಬುದನ್ನೂ ತಿಳಿಸಿದನು. ಅವನು ೧೬ ವರ್ಷಗಳಿಗೆ ಸರಿಯಾಗಿ ೧೬ ಲಾಭಗಳನ್ನು ಗಳಿಸಿ ತನ್ನ ತಾಯ್ತಂದೆಯರನ್ನು ಮತ್ತೆ ಕೂಡುತ್ತಾನೆ. ಪ್ರಜ್ಞಪ್ತಿವಿದ್ಯೆಯಿಂದ ಅವನ ಪರಾಕ್ರಮ ಉಜ್ವಲಿಸಿ, ಆತನು ಈ ಲೋಕದಲ್ಲಿ ಸಮಸ್ತದೇವತೆಗಳಿಗೆ ಕೂಡ ಅಜೇಯನಾಗುತ್ತಾನೆ"—ಎಂಬುದಾಗಿ ತಿಳಿಸಿದನು. ಆಗ ಚಕ್ರವರ್ತಿ "ಪ್ರಭು, ಪ್ರದ್ಯುಮ್ನನ ಚರಿತೆಯೇನು ? ಅವನು ಏತಕ್ಕಾಗಿ ಅಪಹೃತನಾದನು" ಎಂದನು. ಸೀಮಂಧರನು ನಾರದನ ಸಮಕ್ಷದಲ್ಲಿಯೇ ಪದ್ಮರಥನಿಗೆ ಪ್ರದ್ಯುಮ್ನ ಚರಿತೆಯನ್ನು ಹೀಗೆ ನಿರೂಪಿಸಿದನು :

"ಭರತಕ್ಷೇತ್ರದ ಮಗಧದೇಶದ ಶಾಲಿಗ್ರಾಮದಲ್ಲಿ ಸೋಮದೇವನೆಂಬ ಬ್ರಾಹ್ಮಣನಿದ್ದನು. ಅವನಿಗೆ ಅಗ್ನಿಲಾ ಎಂಬವಳು ಪತ್ನಿ. ಇವರಿಗೆ ಅಗ್ನಿಭೂತಿ ವಾಯುಭೂತಿ ಪುತ್ರರು. ಇವರು ವೇದ ವೇದಾರ್ಥನಿಪುಣರು. ತಮ್ಮ ಪ್ರಭಾವದಿಂದ ಅನ್ಯವಿಪ್ರರನ್ನು ಮೀರಿಸುತ್ತ ಶುಕ್ರ ಬೃಹಸ್ಪತಿಗಳಂತೆ ತೇಜಸ್ವಿಗಳಾಗಿದ್ದರು. ವೇದಾರ್ಥಭಾವನೆಯಿಂದಾದ ಜಾತಿವಾದದಿಂದ ಗರ್ವಿತರಾಗಿ, ವಾಚಾಳಿಗಳಾಗಿ ತಾಯ್ತಂದೆಗಳ ಮುದ್ದು ಅತಿಯಾಗಿ ಇಬ್ಬರೂ ಭೋಗತತ್ಪರರಾಗಿ ಹೋದರು. ೧೬ ವರ್ಷದವರಾಗುತ್ತಲೂ ಸ್ತ್ರೀಯರೇ ಸ್ವರ್ಗವೆಂದುಕೊಳ್ಳುತ್ತ ಪರಲೋಕಕಥೆಯ ಬಗ್ಗೆ ದ್ವೇಷ ತಳೆದರು. ಕೆಲಕಾಲಕ್ಕೆ ನಂದಿ

ವರ್ಧನರೆಂಬ ಗುರುಗಳು ಮಹಾಸಂಘಸಹಿತವಾಗಿ ಬಂದು ಶಾಲಿಗ್ರಾಮದ ಬಾಹ್ಯೋಪವನದಲ್ಲಿ ತಂಗಿದರು. ಚಾತುರ್ವರ್ಣ್ಯರೂ ಅವರ ವಂದನೆಗೆ ಬರತೊಡಗಿದರು. ಅವರನ್ನು ನೋಡಿ ಆ ಬ್ರಾಹ್ಮಣಪುತ್ರರು ಅದರ ಕಾರಣವನ್ನು ಕೇಳಿದರು. ಆಗ ಒಬ್ಬ ಸರಳ ಸ್ವಭಾವದ ವಿಪ್ರನು ಅವರಿಗೆ ಮುನಿಸಂಘವೊಂದು ಬಂದಿದೆಯೆಂದೂ ಅವರ ವಂದನಾರ್ಥವಾಗಿ ಅಲ್ಲಿಗೆ ತಾವೆಲ್ಲ ಹೋಗುತ್ತಿರುವುದಾಗಿಯೂ ಹೇಳಿದನು. ಅದನ್ನು ಕೇಳಿ ಆಯಿಬ್ಬರೂ ''ಲೋಕದಲ್ಲಿ ನಮಗಿಂತ ಪೂಜ್ಯರು ಬೇರೆ ಯಾರುಂಟು ? ನಡೆ. ಆ ಮುನಿಸಂಘದ ಮಾಹಾತ್ಮ್ಯವೇನೆಂದು ನೋಡೋಣ'' ಎಂದು ತಮ್ಮಲ್ಲಿಯೇ ಆಲೋಚಿಸಿಕೊಂಡು ಉಪವನದತ್ತ ನಡೆದರು.

ಆಗ ಅವಧಿಜ್ಞ ನಂದಿವರ್ಧನ ಗುರುಗಳು ಜನಸಾಗರದ ನಡುವೆ ಕುಳಿತು ಧರ್ಮೋಪದೇಶ ಮಾಡುತ್ತಿದ್ದರು. ಇವರು ಅವರ ಬಳಿಗೆ ಹೋಗುತ್ತಲೂ, ಎಮ್ಮೆಗಳ ಹಾಗೆ ಅಡ್ಡಿಯಾಗಿ ಬಂದ ಇವರ ದೆಸೆಯಿಂದ ಸದ್ಧರ್ಮಶ್ರವಣಕ್ಕೆ ಜನರಿಗೆ ಬಾಧೆಯಾಗದಿರಲಿ ಎಂದು ಅವಧಿಜ್ಞನಾದ ಸಾತ್ಯಕಿಮುನಿಯೆಂಬವನು ದೂರದಿಂದಲೇ ಅವರಿಗೆ "ಎಲೈ ಬ್ರಾಹ್ಮಣರೆ, ಇತ್ತ ಕಡೆ ಬನ್ನಿ'' ಎಂದು ಕರೆದನು. ಹಾಗೆಯೇ ಅವರು ಆ ಕಡೆ ಹೋಗಿ ಆ ಮುನಿಯ ಮುಂದೆ ಕುಳಿತರು. ಅದನ್ನು ಕಂಡು ಕುತೂಹಲಿಗಳಾದ ಜನರು ಮೇಲೆಮೇಲೆ ಬಂದು ಆ ಬ್ರಾಹ್ಮಣಪುತ್ರರ ಮುಂದಿನ ಸ್ಥಳ ಆಕ್ರಮಿಸಿ ಆವರಿಸಿಬಿಟ್ಟರು. ಆಮೇಲೆ ಮುನಿ ಆ ವಿಪ್ರರನ್ನು ಕುರಿತು "ಹೇ ಪಂಡಿತರೇ, ನೀವು ಎಲ್ಲಿಂದ ಬಂದಿದ್ದೀರಿ ?" ಎಂದು ಕೇಳಿದನು. ಅದಕ್ಕೆ ಅವರು ''ಇದೇನು ನಿಮಗೆ ತಿಳಿಯದೇ, ನಾವು ಇದೇ ಶಾಲಿಗ್ರಾಮದಿಂದ ಬಂದಿದ್ದೇವೆ'' ಎಂದರು. ಆಗ ಮುನಿ ''ಅಯ್ಯಾ, ಅದು ನಿಜವೇ. ನೀವು ಶಾಲಿಗ್ರಾಮದಿಂದಲೇ ಬಂದಿದ್ದೀರಿ, ಆದರೆ ಈ ಅನಾದ್ಯನುತ ಸಂಸಾರದಲ್ಲಿ ಸುತ್ತಾಡುತ್ತ ಯಾವ ಗತಿಯಿಂದ (ಈ ಜನ್ಮಕ್ಕೆ) ಬಂದಿದ್ದೀರಿ ? ಇದು ಹೇಳಿ'' ಎಂದನು. ವಿಪ್ರರು ''ಈ ಮಾತು ನಮಗಿರಲಿ, ಬೇರೆ ಯಾರಿಗೇ ಆಗಲಿ ದುರ್ಜ್ಞೇಯವಾದ್ದು" ಎಂದರು. ಮುನಿಯು ''ಅಯ್ಯಾ, ಬೇರಾರೂ ಅರಿಯಲಾಗದ್ದು ಎನ್ನುವುದು ಸರಿಯಲ್ಲ. ಇಕೋ, ನಾನು ಅದನ್ನು ಹೇಳುತ್ತೇನೆ ಕೇಳಿ'' ಎಂದನು.

''ನೀವು ಸೋದರರಿಬ್ಬರೂ ಈ ಜನ್ಮಕ್ಕೆ ಮುನ್ನಿನ ಜನ್ಮದಲ್ಲಿ ಇದೇ ಶಾಲಿಗ್ರಾಮದ ಎಲ್ಲೆಕಟ್ಟಿಗೆ ಹತ್ತಿರವಾಗಿ ನಿಮ್ಮ ಕರ್ಮಕಾರಣವಾಗಿ (ಗಂಡು) ನರಿಗಳಾಗಿದ್ದಿರಿ. ಪರಸ್ಪರ ಸ್ನೇಹದಿಂದಿದ್ದಿರಿ. ಇದೇ ಗ್ರಾಮದಲ್ಲಿ ಪ್ರವರಕನೆಂಬ ಒಬ್ಬ ಬ್ರಾಹ್ಮಣ ರೈತನಿದ್ದನು. ಒಂದು ದಿನ ಆತನು ತನ್ನ ಭೂಮಿಯನ್ನುತ್ತು ನೆಮ್ಮದಿಯಿಂದಿರುವಾಗ, ಬಿರುಸಾಗಿ ಮಳೆ ಹೊಡೆದು ಕಗ್ಗತ್ತಲಾಯಿತು. ಅವನಿಗೆ ಇದರಿಂದ ತುಂಬ ಕಷ್ಟವಾಗಿ, ಶರೀರವು ನಡುಗಿ ಹಸಿವಿನಿಂದ ಬಳಲಿ ಹೊಲದ ಬಳಿಯೇ ಆಲದ ಮರದ ಕೆಳಗೆ ತನ್ನ (ಚರ್ಮದ) ಉಪಕರಣವನ್ನು ಬಿಟ್ಟು ಮನೆಗೆ ಹೋದನು. ಮಳೆ ಒಂದೇ ಸಮನೆ ಏಳು ದಿನಗಳು ಹೊಡೆಯಿತು. ಆ ನರಿಗಳೆರಡೂ ಹಸಿವುಗೊಂಡು ಬಳಲಿ ಆ ರೈತನು ಬಿಟ್ಟುಹೋದ ಆರ್ದ್ರೋಪಕರಣವನ್ನು ತಿಂದುಹಾಕಿದುವು. ಸ್ವಲ್ಪಹೊತ್ತಿಗೆ ಹೊಟ್ಟೆಯಲ್ಲಿ



ಮಹಾಶೂಲೆಯುಂಟಾಗಿ ನರಿಗಳು ಅಸಹ್ಯವೇದನೆಯನ್ನು ಸಹಿಸಬೇಕಾಯಿತು. ಅಕಾಮನಿರ್ಜರೆಯಿಂದ ಪ್ರಶಸ್ತ ಆಯುವನ್ನು ಕಟ್ಟಿಕೊಂಡು ಪರಿಣಾಮದಲ್ಲಿ ಅವು ಸತ್ತು ಸೋಮದೇವನ ಮಕ್ಕಳಾದುವು. ಅವರೇ ನೀವು. ಪಾಪಕರ್ಮದಿಂದ ದುರ್ಗತಿ, ಪುಣ್ಯಪಾಕದಿಂದ ಸದ್ಗತಿ. ಆದ್ದರಿಂದ ನಿಮ್ಮ ಜಾತಿಗರ್ವ ವ್ಯರ್ಥ. ಆಮೇಲೆ ಇತ್ತ ಮಳೆ ನಿಂತ ಮೇಲೆ ರೈತನು ಹೊಲಕ್ಕೆ ಹೋಗಿ ಅಲ್ಲಿ ಸತ್ತಿದ್ದ ಶೃಗಾಲಗಳನ್ನು ನೋಡಿ ಎತ್ತಿತಂದು ಅವುಗಳಿಂದ ಕ್ರೋಷ್ಮಾರಗಳನ್ನು ಮಾಡಿಸಿ ಕೃತಕೃತ್ಯನಾದನು. ಅವು ಅವನ ಮನೆಯಲ್ಲಿ ಇವತ್ತಿಗೂ ಇಡಲ್ಪಟ್ಟಿವೆ. ತೀವ್ರಮಾನದಿಂದ ಪ್ರವರಕನೂ ಕೆಲಕಾಲಕ್ಕೆ ಸತ್ತು ತನ್ನ ಮಗನಿಗೇ ಮಗನಾದನು. ಜಾತಿಸ್ಮರನಾದ ಕಾರಣ ಬೇಕೆಂದೇ ಮೂಕನಂತೆ ಇರತೊಡಗಿದನು. ಇಕೋ ನೋಡಿ, ಅವನು ತನ್ನ ಬಂಧುಗಳ ನಡುವೆ ಕುಳಿತು ನನ್ನತ್ತ ಮಿಕಮಿಕ ನೋಡುತ್ತಿದ್ದಾನೆ.''

ಇಷ್ಟುಹೇಳಿ, ಆ ಸಾತ್ಯಕಿಮುನಿ ಆ ಮೂಕನನ್ನು ತನ್ನ ಬಳಿಗೆ ಕರೆದು, ''ನೀನು ಅದೇ ಬ್ರಾಹ್ಮಣರೈತ.ನಿನ್ನ ಪುತ್ರನಿಗೇ ಪುತ್ರನಾಗಿದ್ದೀಯೆ. ಈಗ ನೀನು ಶೋಕ ಮೂಕತೆಗಳನ್ನು ಬಿಟ್ಟು ಮಾತಾಡು. ಸ್ಪಷ್ಟವಾಗಿ ಮಾತುಕತೆಯಾಡಿ ಬಾಂಧವರನ್ನು ನಲಿಸು. ಈ ಲೋಕದಲ್ಲಿ ನಟರಂತೆ ಸ್ವಾಮಿಸೇವಕರು, ತಂದೆಮಕ್ಕಳು ಮುಂತಾಗಿ ಎಲ್ಲರೂ ತಂತಮ್ಮ ಸಂಬಂಧಗಳನ್ನು ಬದಲಿಸಿಕೊಳ್ಳುತ್ತಾರೆ. ಒಂದೇ ಸಮನೆ ತೊಳಲುವ ಜೀವರಾಶಿ ಮೇಲುಕೀಳುಗಳನ್ನು ಪಡೆಯುತ್ತಿರುತ್ತದೆ. ಆದ್ದರಿಂದ ಹೇ ಪುತ್ರ, ಈ ಸಂಸಾರವನ್ನು ನಿಸ್ಸಾರವಾಗಿ ಬಗೆದು ದಯಾಮೂಲವ್ರತವನ್ನು ಗ್ರಹಿಸು"— ಎಂದು ಮುನಿ ನುಡಿಯಲು, ಮೂಕತೆಯ ಕಾರಣವನ್ನು ಎದುರಿನಲ್ಲೇ ಹಾಗೆ ತೋರಿಸಿಕೊಡಲು, ಆತನು ಮೂರು ಬಾರಿ ಬಲವಂದು ಪಾದಗಳಿಗೆ ಬಿದ್ದನು ; ಅಶ್ರುಬಾಷ್ಪನಾದನು. ಅಚ್ಚರಿಯಿಂದ ಎದ್ದುನಿಂತು ಕೈಮುಗಿದು ಗದ್ಗದನಾಗಿ ನುಡಿಯತೊಡಗಿದನು : ''ಭಗವನ್ ತಾವು ಸರ್ವಜ್ಞಕಲ್ಪರು, ಈಶ್ವರರು, ಇದ್ದಲ್ಲಿಯೇ ಸರ್ವವಸ್ತುಗಳ ಯಥಾಸ್ವರೂಪ ಬಲ್ಲವರು. ನನ್ನ ಅಂತಶ್ಚಕ್ಷುವಿನ ಅಜ್ಞಾನದ ಪರೆ ಹರಿಸಿದಿರಿ; ಮೋಹಾಂಧಕಾರದ ಈ ಸಂಸಾರಾರಣ್ಯದಲ್ಲಿ ಸುತ್ತುತ್ತಿದ್ದ ನನಗೆ ಸತ್ಯಮಾರ್ಗ ತೋರಿಸಿದಿರಿ. ಸ್ವಾಮಿ, ನೀವೇ ನನ್ನ ಬಂಧು ಪ್ರಸನ್ನರಾಗಿ. ನನಗೆ ಜಿನದೀಕ್ಷೆ ಕೊಡಿ''—ಎಂದನು. ಸಾತ್ಯಕಿಮುನಿ ಅವನಿಗೆ ಜಿನದೀಕ್ಷೆಯಿತ್ತನು. ಆ ಬ್ರಾಹ್ಮಣನ ಪೂರ್ವೋಕ್ತ ಚರಿತೆಯನ್ನು ಕೇಳಿ ಕಂಡು, ಹಲವರು ಮುನಿದೀಕ್ಷೆಯನ್ನೂ ಶ್ರಾವಕದೀಕ್ಷೆಯನ್ನೂ ಗ್ರಹಿಸಿದರು.

ಅಗ್ನಿಭೂತಿ ವಾಯುಭೂತಿ ತಮ್ಮ ಪೂರ್ವಭವಕಥನವನ್ನು ಕೇಳಿ ಲಜ್ಜಿತರಾದರು. ಜನರೂ ಅವರನ್ನು ಕೆಟ್ಟವರೆಂದರು. ಅವರು ಮಾತಿಲ್ಲದೆ ಮನೆಗೆ ಹೋದರು. ಅಲ್ಲಿಯೂ ತಾಯಿತಂದೆ ಅವರನ್ನು ನಿಂದಿಸಿದರು. ರಾತ್ರಿಯ ವೇಳೆ ಸಾತ್ಯಕಿಮುನಿ ಎಲ್ಲಿಯೋ ಏಕಾಂತದಲ್ಲಿ ಕಾಯೋತ್ಸರ್ಗಮುದ್ರೆಯಿಂದ ಸ್ಥಿತನಾಗಿರುವಾಗ, ಅವನನ್ನು ಅಗ್ನಿಭೂತಿ ವಾಯುಭೂತಿಗಳು ಖಡ್ಗದಿಂದ ಕೊಲ್ಲಲು ಬಯಸಿ ಕೈಯೆತ್ತಿದರು. ಕೂಡಲೇ ಯಕ್ಷನು ಅವರನ್ನು ಸ್ತಂಭಿಸಿಬಿಟ್ಟನು. ಇದರಿಂದ ಎತ್ತಿದ ಖಡ್ಗ ಎತ್ತಿದಂತೆಯೇ ಅವರು ನಿಂತು

ಹೋದರು. ಬೆಳಗಾಗುತ್ತಲೂ, ಜನರು ಮುನಿಯ ಬಳಿ ಸ್ತಂಭನಗೊಂಡು ನಿಂತಿದ್ದ ಆಯಿಬ್ಬರನ್ನೂ ಕಂಡು "ಇವರು ನಿಂದ್ಯಕಾರ್ಯನಿರತರಾದ ಪಾತಕಿಗಳೇ" ಎಂದು ಬಯ್ದರು. ಆಗ ಆ ಸೋದರರು "ಈ ಮುನಿಯದು ಎಂಥ ಮಹತ್ತರ ಪ್ರಭಾವ ! ನಾವು ಹೀಗೆ ಅನಾಯಾಸವಾಗಿ ಸ್ತಂಭಿತರಾಗಿ ಸ್ತಂಭದಂತೆ ನಿಲ್ಲುವ ದೆಸೆ ಬಂತಲ್ಲಾ" ಎಂದು ತಮ್ಮಲ್ಲಿಯೇ ಚಿಂತಿಸಿದರು. "ನಾವು ಹೇಗೋ ಈ ಕಷ್ಟದಿಂದ ಈಗ ಬಿಡುಗಡೆ ಹೊಂದಿದೆವಾದರೆ ಖಂಡಿತವಾಗಿ ಆ ಜಿನಧರ್ಮವನ್ನು ಪರಿಗ್ರಹಿಸುತ್ತೇವೆ; ನಾವು ಅದರ ಸಾಮರ್ಥ್ಯವೇನೆಂದು ಈಗ ಪ್ರತ್ಯಕ್ಷ ಅರಿತದ್ದಾಯಿತು" ಎಂದು ತಮ್ಮಲ್ಲಿಯೇ ಸಂಕಲ್ಪಿಸಿದರು. ಆ ವೇಳೆಗೆ ಅವರ ಕಷ್ಟದ ಸ್ಥಿತಿಯರಿತು ಅವರ ತಾಯಿ ತಂದೆಗಳೂ ಶೀಘ್ರವಾಗಿ ಧಾವಿಸಿಬಂದರು. ಮುನಿಯ ಚರಣಗಳಲ್ಲಿ ಬಿದ್ದು ಅವನನ್ನು ಪ್ರಸನ್ನಮಾಡಲು ಯತ್ನಿಸಿದರು. ದಯಾವಂತನಾದ ಮುನಿ ತನ್ನ ಯೋಗಸಮಾಪ್ತಿಯ ನಂತರ ಎಚ್ಚತ್ತು, ನಡೆದುದೆಲ್ಲ ಕ್ಷೇತ್ರಪಾಲಕೃತವೆಂದರಿತವನಾಗಿ, ವಿನೀತನಾಗಿ ಬಳಿಯಲ್ಲಿದ್ದ ಆತನನ್ನು ಕುರಿತು "ಯಕ್ಷ, ಇವರ ಅನೀತಿಜನ್ಯವಾದ ದೋಷವನ್ನು ಕ್ಷಮಿಸು. ಕರ್ಮವಶರಾಗಿ ನಡೆದ ಇವರ ಮೇಲೆ ದಯೆತೋರು" ಎಂದನು. ಕ್ಷೇತ್ರಪಾಲನು "ನಿಮ್ಮ ಆಜ್ಞೆಯಂತೆಯೇ ಆಗಲಿ" ಎಂದು ನುಡಿದು, ಆ ಸೋದರರನ್ನು ಬಿಟ್ಟುಕೊಟ್ಟನು. ಆಮೇಲೆ ಅಗ್ನಿಭೂತಿ ವಾಯುಭೂತಿಗಳು ಮುನಿಯ ಬಳಿ ಮುನಿಧರ್ಮ ಶ್ರಾವಕಧರ್ಮಗಳನ್ನು ಕೇಳಿ ತಿಳಿದವರಾಗಿ, ಅಣುವ್ರತಗಳನ್ನು ಹಿಡಿದು ಶ್ರಾವಕರಾದರು. ಸಮ್ಯಕ್ತ್ವವನ್ನು ಭಾವಿಸಿ ಬಹುಕಾಲ ಧರ್ಮದಿಂದ ನಡೆಯುತ್ತ, ತೀರಿಕೊಂಡ ಮೇಲೆ ಸೌಧರ್ಮಕಲ್ಪದಲ್ಲಿ ದೇವರಾದರು. ಅವರ ತಾಯ್ತಂದೆಗಳು ಜೈನಧರ್ಮದಲ್ಲಿ ಶ್ರದ್ಧೆಯಿಲ್ಲದವರಾದ್ದರಿಂದ ಮಿಥ್ಯಾತ್ವ ಮೋಹಿತರಾಗಿ ಸತ್ತು ಕುಗತಿಗೆ ಸಂದರು.

ಅಗ್ನಿಭೂತಿ ವಾಯುಭೂತಿಗಳು ಸೌಧರ್ಮಕಲ್ಪದಲ್ಲಿ ಸುಖಾನುಭವಮಾಡಿ ಅಲ್ಲಿಂದ ಚ್ಯುತರಾಗಿ ಬಂದು ಅಯೋಧ್ಯೆಯಲ್ಲಿ ಸಮುದ್ರದತ್ತನೆಂಬ ವೈಶ್ಯನಿಗೆ ಧಾರಿಣಿಯೆಂಬ ಪತ್ನಿಯಲ್ಲಿ ಗಂಡುಮಕ್ಕಳಾಗಿ ಹುಟ್ಟಿದರು. ಪೂರ್ಣಭದ್ರ, ಮಣಿಭದ್ರ ಎಂದು ಹೆಸರಾದವು. ಈ ಜನ್ಮದಲ್ಲಿಯೂ ಸಮ್ಯಕ್ತ್ವವನ್ನು ಅವರು ಬಿಡಲಿಲ್ಲ. ಅನಂತರ ಕಾಲಲಬ್ಧಿ ಒದಗಿದಾಗ ಸಮುದ್ರದತ್ತನು ಅಯೋಧ್ಯೆಯ ಅರಸನೊಂದಿಗೆ, ಇತರ ಭವ್ಯಜೀವರೊಂದಿಗೆ ಕೂಡಿ ಮಹೇಂದ್ರಸೇನರೆಂಬ ಗುರುಗಳಲ್ಲಿ ಧರ್ಮಶ್ರವಣಮಾಡಿ, ಎಲ್ಲರೂ ಜಿನದೀಕ್ಷೆಗೊಂಡರು. ಕೆಲಸಮಯವಾದ ಮೇಲೆ ಪೂರ್ಣಭದ್ರ ಮಣಿಭದ್ರರು ಮುನಿ ಪೂಜೆಗಾಗಿ ನಗರದಿಂದ ರಥಾರೂಢರಾಗಿ ತೆರಳುತ್ತಿದ್ದಾಗ ಮಾರ್ಗಮಧ್ಯದಲ್ಲಿ ಒಬ್ಬ ಚಾಂಡಾಲನನ್ನೂ ಒಂದು ಹೆಣ್ಣುನಾಯನ್ನೂ ಕಂಡು ಸ್ನೇಹಗೊಂಡರು. ಮುನಿಯಲ್ಲಿಗೆ ಬಂದು ವಂದಿಸಿ, ತಮಗೆ ಆ ಹೆಣ್ಣುನಾಯನ್ನೂ ಚಾಂಡಾಲನನ್ನೂ ನೋಡಿ ಸ್ನೇಹವಾದುದೇಕೆಂದು ಪ್ರಶ್ನಿಸಿದರು. ಆಗ ಅವಧಿಜ್ಞಾನಿ ಮುನಿ "ಬ್ರಾಹ್ಮಣಜನ್ಮದಲ್ಲಿ ನಿಮಗೆ ತಾಯಿತಂದೆಗಳಾಗಿದ್ದವರೇ ಈಗ ಹೆಣ್ಣುನಾಯಿ ಮತ್ತು ಚಾಂಡಾಲರಾಗಿದ್ದಾರೆ. ಪೂರ್ವಭವದ ಕಾರಣವಾಗಿ ನಿಮಗೆ ಇವರ ಮೇಲೆ ಸ್ನೇಹವುಂಟಾಯಿತು."—ಎಂದನು. ಈ



ಮಾತು ಕೇಳಿ ಅವರು ಮುನಿಗೆ ವಂದಿಸಿ ಹಿಂದಿರುಗಿ ಹೆಣ್ಣುನಾಯಿ ಮತ್ತು ಚಾಂಡಾಲರ ಬಳಿಗೆ ಮತ್ತೆ ಬಂದರು. ಆಯಿಬ್ಬರಿಗೂ ಧರ್ಮೋಪದೇಶಮಾಡಿ ಪೂರ್ವಭವಕಥನವನ್ನು ಹೇಳಿದರು. ಇದರಿಂದ ಆಯಿಬ್ಬರೂ ಉಪಶಮಗೊಂಡರು. ಚಾಂಡಾಲನು ವೈರಾಗ್ಯಗೊಂಡು ದೈನ್ಯವುಳಿದು ಚತುರಾಹಾರ ಪ್ರತ್ಯಾಖ್ಯಾನ ಮಾಡಿ, ಒಂದು ತಿಂಗಳು ಸಂನ್ಯಸನಗೊಂಡು, ಸತ್ತು ನಂದೀಶ್ವರ ದ್ವೀಪದಲ್ಲಿ ದೇವನಾದನು. ಹೆಣ್ಣುನಾಯಿ ಇದೇ ನಗರದಲ್ಲಿ ಅರಸನಿಗೆ ಮಗಳಾಯಿತು. ಇಲ್ಲಿ ಆ ರಾಜಪುತ್ರಿಗೆ ಸ್ವಯಂವರವೇರ್ಪಟ್ಟಾಗ ಅವಳು ಸ್ವಯಂವರಮಂಟಪದಲ್ಲಿರುವಾಗ್ಗೆ ಪೂರ್ವೋಕ್ತ ನಂದೀಶ್ವರ ದ್ವೀಪದ ದೇವನು ಬಂದು ಅವಳನ್ನು ಪ್ರತಿಬೋಧಿಸಿದನು. ಇದರಿಂದ ಅವಳು ವೈರಾಗ್ಯಗೊಂಡು ಸಮ್ಯಕ್ತ್ವವನ್ನು ಭಾವಿಸಿ ಆರ್ಯಿಕೆಯ ದೀಕ್ಷೆಗೊಂಡಳು.

ಪೂರ್ಣಭದ್ರ ಮಣಿಭದ್ರ ಸೋದರರು ಹಲಗಾಲ ಶ್ರಾವಕವ್ರತದಲ್ಲಿ ನಡೆಯುತ್ತ ಕೊನೆಗೆ ಸಲ್ಲೇಖನದಿಂದ ತೀರಿಕೊಂಡು ಸೌಧರ್ಮಕಲ್ಪದಲ್ಲಿ ಉತ್ತಮದೇವರಾದರು. ಆಮೇಲೆ ಸ್ವರ್ಗಚ್ಯುತರಾಗಿ ಬಂದು ಅಯೋಧ್ಯೆಯಲ್ಲಿ ಹೇಮನಾಭನೆಂಬರಸನಿಗೆ ಧರಾವತಿಯೆಂಬ ಪತ್ನಿಯಲ್ಲಿ ಮಧು ಮತ್ತು ಕೈಟಭ ಎಂಬ ಹೆಸರಿನ ಪುತ್ರರಾದರು. ಆಮೇಲೆ ಒಂದು ದಿನ ಮಧು ಕೈಟಭರನ್ನು ಮಹಾರಾಜ ಯುವರಾಜರಾಗಿ ಮಾಡಿ ಹೇಮನಾಭನು ಜಿನದೀಕ್ಷೆಗೊಂಡನು. ಮಧು ಕೈಟಭರು ಲೋಕದಲ್ಲಿ ಮಹಾಶೂರರೆನಿಸಿದರು ; ಸೂರ್ಯ ಚಂದ್ರರಂತೆ ತೇಜಸ್ವಿಗಳಾದರು. ಹೀಗಿರಲು ಕ್ಷುದ್ರಸಾಮಂತರಿಂದ ವಶಕ್ಕೆ ಬಾರದ ಭೀಮಕನೆಂಬರಸನೊಬ್ಬನು ಗಿರಿದುರ್ಗವನ್ನಾಶ್ರಯಿಸಿ ಮಧುಕೈಟಭರ ವಿರುದ್ಧ ನಿಲ್ಲಲು, ಅವನನ್ನು ಸಾಧಿಸಲು ಸೋದರರಿಬ್ಬರೂ ತೆರಳಿದರು. ಹೀಗೆ ಸಾಗುತ್ತಿರುವಾಗ ವೀರಸೇನನೆಂಬರಸು ಆಳುತ್ತಿದ್ದ ವಟಪುರವೆಂಬ ನಗರವನ್ನು ತಲುಪಿದರು. ವೀರಸೇನನು ಅವರಿಗೆ ಆದರದ ಸ್ವಾಗತ ನೀಡಿ ಸ್ವಾಮಿಭಕ್ತಿಯಿಂದ ಪ್ರೇರಿತನಾಗಿ ಅಂತಃಪುರಸಮೇತನಾಗಿ ಅವರನ್ನು ತುಂಬ ಸನ್ಮಾನಿಸಿದನು. ವೀರಸೇನನಿಗೆ ಚಂದ್ರಾಭ ಎಂಬವಳು ಪತ್ನಿ. ಮಧು ಅವಳಿಗೆ ಮನಸೋತನು. ಶಸ್ತ್ರ ಶಾಸ್ತ್ರಾಭ್ಯಾಸದಿಂದ ದೃಢಬುದ್ಧಿಯುವನಾಗಿಯೂ ಅವಳ ಮೇಲೆ ಅವನ ಮನಸ್ಸು ಆರ್ದ್ರಗೊಂಡಿತು. ಅವಳೊಡನೆ ಅನುಭವಿಸುವ ರಾಜ್ಯಸುಖವೇ ಸುಖದ ಮೂಲವಲ್ಲದೆ ಅವಳಿಲ್ಲದ ರಾಜ್ಯ ವಿಷಪ್ರಾಯವಾದ್ದು ಎಂದು ಬಗೆದನು. ಅವಳನ್ನು ಪರಿಗ್ರಹಿಸುವುದರಿಂದ ತನಗೇನೂ ಕಳಂಕವಾಗಲಿ, ಅಪವಾದವಾಗಲಿ ತಟ್ಟದೆಂದೇ ತಿಳಿದನು. ಹೀಗೆ ಯೋಚಿಸಿ ರಾಗಾಂಧನಾಗಿ ಚಂದ್ರಾಭಳನ್ನು ಅಪಹರಿಸಲು ಮನಸ್ಸು ಮಾಡಿದನು. ಇದಾದ ಮೇಲೆ ಮಧು ಉಚ್ಛೃಂಖಲನಾಗಿದ್ದ ಭೀಮಕನನ್ನು ಸಾಧಿಸಿ ವಶಕ್ಕೆ ತಂದು ಅಯೋಧ್ಯೆಗೆ ಮರಳಿದನು. ಅವನ ಮನಸ್ಸು ಚಂದ್ರಾಭಳ ಕಡೆಗೇ ಇತ್ತು. ಅದರಿಂದ ಒಮ್ಮೆ ಪರಮೋತ್ಸಾಹದಿಂದ ತನ್ನ ಸಮಸ್ತ ಸಾಮಂತರನ್ನೂ ಅವರವರ ಪತ್ನಿಯರೊಂದಿಗೆ ಕರಸಿಕೊಂಡನು. ಅವರನ್ನು ಯಥಾಯೋಗ್ಯವಾಗಿ ವಸ್ತ್ರಭೂಷಣಗಳಿಂದ ಸತ್ಕರಿಸಿ ಬೀಳ್ಕೊಟ್ಟನು. ವಟಪುರದ ಅರಸು ವೀರಸೇನನೂ ಸಪತ್ನೀಕನಾಗಿ ಅಲ್ಲಿಗೆ ಬಂದಿದ್ದನು. ಮಧುವು ಅವನನ್ನು ಅತಿಶಯವಾಗಿ ಸತ್ಕರಿಸಿದ ಮೇಲೆ ವೀರಸೇನ

ನಿಗೆ "ಚಂದ್ರಾಭಳಿಗೆ ಯೋಗ್ಯವಾದ ಶ್ರೇಷ್ಠ ಆಭರಣಗಳು ಈವರೆಗೆ ತಯಾರಾಗಲು ಸಾಧ್ಯವಾಗಿಲ್ಲ ; ಆದ್ದರಿಂದ ತಯಾರಾಗುತ್ತಲೂ (ಆಕೆಯನ್ನು ಸನ್ಮಾನಿಸಿ) ಕಳಿಸಿಕೊಡುತ್ತೇವೆ"—ಎಂದು ನುಡಿದು, ಅವನೊಬ್ಬನನ್ನೇ ಕಳಿಸಿಕೊಟ್ಟನು. ಮುಗ್ಧಸ್ವಭಾವದ ವೀರಸೇನನು ಹೊರಟುಹೋದನು. ಮಧುವು ಚಂದ್ರಾಭಳನ್ನು ನಿಲ್ಲಿಸಿಕೊಂಡು ತನ್ನವಳಾಗಿ ಮಾಡಿಕೊಂಡನು. ಅವಳನ್ನೇ ಪಟ್ಟದ ರಾಣಿಯಾಗಿ ಮಾಡಿ ಎಲ್ಲ ಪತ್ನಿಯರ ಮೇಲಿನ ಅಧಿಕಾರವನ್ನೂ ವಹಿಸಿದನು. ಹೀಗೆ ಅವನು ಅವಳೊಂದಿಗೆ ಇಷ್ಟಬಂದಂತೆ ಸುಖಾನುಭವಮಾಡುತ್ತಿದ್ದನು.

ಇತ್ತ ಚಂದ್ರಾಭಳ ಮೊದಲ ಪತಿ ವೀರಸೇನನು ವಿರಹತಪ್ತನಾಗಿ ಉನ್ಮಾದಗೊಂಡು ಭೂಮಿಯಲ್ಲಿ ಅಲ್ಲಿಯಿಲ್ಲಿ ವ್ಯಗ್ರತೆಯಿಂದ ಸುತ್ತಾಡತೊಡಗಿದನು. ಒಂದು ದಿನ ಅವನು 'ಚಂದ್ರಾಭ, ಚಂದ್ರಾಭ' ಎಂದು ಕೂಗುತ್ತ ಗೋಳಿಡುತ್ತ ಧೂಳಿದೂಸರಿತನಾಗಿ ನಗರದ ಗಲ್ಲಿಗಳಲ್ಲಿ ಸುತ್ತಾಡುತ್ತಿರುವಾಗ, ಸೌಧಾಗ್ರದಲ್ಲಿ ನಿಂತಿದ್ದ ಚಂದ್ರಾಭ ಅವನನ್ನು ನೋಡಿದಳು. ನೋಡುತ್ತಲೇ ಅವಳ ಹೃದಯದಲ್ಲಿ ಕರುಣೆಯುಕ್ಕಿತು. ಅವಳು ಬಳಿಯಲ್ಲಿಯೇ ಕುಳಿತಿದ್ದ ಮಧುರಾಜನೊಂದಿಗೆ "ಹೇ ನಾಥ, ನೋಡು, ಈ ನನ್ನ ಮೊದಲಿನ ಪತಿ ಹೇಗೆ ಪ್ರಲಾಪಮಾಡುತ್ತ ಸುತ್ತಾಡುತ್ತಿದ್ದಾನೆ" ಎಂದಳು.

ಅದೇ ಸಂದರ್ಭದಲ್ಲಿ ಕೆಲವರು ಉಗ್ರರಾದ ಕರ್ಮಚಾರಿಗಳು ಪಾರದಾರಿಕನೊಬ್ಬನನ್ನು ಹಿಡಿದುಕೊಂಡು ಬಂದು ನ್ಯಾಯವೇದಿಯಾದ ಅರಸನಿಗೆ ತೋರಿಸಿ "ದೇವಾ, ಈತನಿಗೆ ಯಾವ ದಂಡ ತಕ್ಕದ್ದು" ಎಂದು ಪ್ರಶ್ನಿಸಿದರು. ಅವನು "ಈ ಅಪರಾಧಿ ಅತ್ಯಂತ ಪಾಪಿ ; ಇವನಿಗೆ ಕೈಕಾಲು ತಲೆಯನ್ನು ಕತ್ತರಿಸಿ ಉಗ್ರಶಾರೀರಿಕದಂಡವನ್ನು ಕೊಡುವುದಾಗಲಿ" ಎಂದು ನುಡಿದನು. ಆಗ ದೇವಿ ಚಂದ್ರಾಭಳು ಆಗಲೇ, "ದೇವಾ, ಏನು ! ಈ ಅಪರಾಧವನ್ನು ನೀವು ತಾನೆ ಮಾಡಲಿಲ್ಲವೇ ? ನೀವೂ ಕೂಡ ಪರಸ್ತ್ರೀಹರಣದ ಅಪರಾಧ ಮಾಡಿದ್ದೀರಿ" ಎಂದು ನುಡಿದಳು. ಆ ಮಾತು ಕೇಳಿ ಅರಸನ ಮುಖ ಹಿಮಹತಪದ್ಮದಂತೆ ಬಾಡಿತು. "ನನ್ನ ಹಿತಾಕಾಂಕ್ಷಿಯಾದ ಇವಳು ಸತ್ಯವನ್ನೇ ನುಡಿಯುತ್ತಿದ್ದಾಳೆ" ಎಂದು ಬಗೆದನು. ದಿಟವಾಗಿ ಪರಸ್ತ್ರೀಹರಣ ದುರ್ಗತಿಗೆ ಹೇತು. ಪತಿಯು ವಿರಾಗಿಯಾಗಿದ್ದು ಕಂಡು ಸತಿಯೂ ವಿರಕ್ತೆಯಾಗಿ "ಪ್ರಭು, ಈ ಪರಸ್ತ್ರೀವಿಷಯಕಭೋಗದಿಂದೇನು ಫಲ ? ಈ ಭೋಗವು ಸದ್ಯಕ್ಕೆ ಸುಖವಿತ್ತರೂ ಕಾಲಾನಂತರದಲ್ಲಿ ಕಿಂಪಾಕಫಲದಂತೆ ದುಃಖದಾಯಕವಾಗುತ್ತದೆ. ಸಜ್ಜನರ ಭೋಗವೆಂಬುದು ಅವರಿಗಾಗಲಿ ಅನ್ಯರಿಗಾಗಲಿ ಸಂತಾಪಕಾರಣವಾಗದಂಥದು. ಅನ್ಯ ವಿಷಯರೂಪಿ ಭೋಗವನ್ನು ಸತ್ಪುರುಷರು ಭೋಗವೆಂದು ಭಾವಿಸರು" ಎಂದಳು. ಚಂದ್ರಾಭಳು ಹೀಗೆ ಅರಿವು ಮಾಡಲು, ಮಧುವಿನ ಮನಸ್ಸು ತಿಳಿಯಾಯಿತು. "ನಿಜ ನಿಜ, ಸಾಧ್ವೀ, ನೀನು ಸರಿಯಾಗಿಯೇ ಹೇಳಿದೆ. ದಿಟವಾಗಿ ಸತ್ಪುರುಷರಿಗೆ ಇಹಪರಗಳಲ್ಲಿ ಅನ್ಯರಿಗೆ ಬಾಧಕವಾದ, ತಮಗೆ ಪಾಪಹೇತುವಾದ, ಕೆಲಸ ತಕ್ಕದ್ದಲ್ಲ. ನನ್ನಂಥ ಪ್ರಬುದ್ಧನೇ ಇಂಥ ಲೋಕನಿಂದ್ಯವಾದ ಕೆಲಸ ಮಾಡುವಾಗ ಸಾಮಾನ್ಯರ ಮಾತೇನು ? ಸ್ವಸ್ತ್ರೀ



ವಿಷಯದಲ್ಲೇ ರಾಗಾಧಿಕ್ಯವು ಕರ್ಮಬಂಧದ ಕಾರಣವೆಂದ ಮೇಲೆ, ಪರಸ್ತ್ರೀ ವಿಷಯಕವಾದ ರಾಗದ ಮಾತು ಹೇಳುವುದೇನು ? ಮನಸ್ಸೆಂಬ ಮದಗಜವನ್ನು ಸನ್ಮಾರ್ಗದಲ್ಲಿ ನಡಸುವುದು ಕಷ್ಟ. ಇಂದ್ರಿಯಗಳನ್ನು ಉಪಶಮಿಸಿ ನಾನು ತಪೋಮಾರ್ಗದಲ್ಲಿ ಪಾಪಕ್ಷಯವನ್ನು ಮಾಡಿಕೊಳ್ಳುತ್ತೇನೆ"—ಹೀಗೆ ನುಡಿದು ತಪಸ್ಸಿಗೆ ಸಂಕಲ್ಪಿಸಿದನು.

ಅದೇ ಸಮಯಕ್ಕೆ ವಿಮಲವಾಹನನೆಂಬ ಮುನಿ ಸಹಸ್ರ ಮುನಿಸಂಘದೊಂದಿಗೆ ಅಯೋಧ್ಯೆಗೆ ಬಂದು ಅಲ್ಲಿಯ ಸಹಸ್ರಾಮ್ರ ವನದಲ್ಲಿ ತಂಗಿದನು. ಆ ಸುದ್ದಿ ಕೇಳಿ ಮಧು ತಮ್ಮನಾದ ಕೈಟಭನನ್ನೂ ಪತ್ನಿಯರನ್ನೂ ಒಳಗೊಂಡು ಮುನಿದರ್ಶನಕ್ಕೆ ಹೋದನು. ಅವರನ್ನು ಪೂಜಿಸಿ ಅವರಲ್ಲಿ ಧರ್ಮಶ್ರವಣ ಮಾಡಿದನು. ರಾಜ್ಯಕೋಶಾದಿಗಳ ಸುಖಭೋಗ ತ್ಯಜಿಸಿ ಕೈಟಭ ಮತ್ತು ಅನ್ಯಕ್ಷತ್ರಿಯರನ್ನು ಕೂಡಿಕೊಂಡು ಜಿನದೀಕ್ಷೆಗೊಂಡನು. ಚಂದ್ರಾಭ ಮೊದಲಾದ ನೂರಾರು ಸಾವಿರಾರು ರಾಣಿಯರೂ ಆರ್ಯಿಕಾದೀಕ್ಷೆಗೊಂಡರು. ಮಧುವಿನ ಮಗ ಕುಲವರ್ಧನನು ರಾಜ್ಯದಲ್ಲಿ ನಿಂತನು.

ಮಧುಕೈಟಭರು ಉಗ್ರತಪವಾಚರಿಸಿದರು. ಆಗಮೋಕ್ತವಿಧಿವಿಧಾನದಂತೆ ವ್ರತ ಗುಪ್ತಿ ಸಮಿತಿ ಮೊದಲಾದವುಗಳನ್ನು ಹಿಡಿದು ನಡೆದರು. ೬-೬ ತಿಂಗಳ ಉಪವಾಸ ಮಾಡುತ್ತಿದ್ದರು. ಕರ್ಮನಿರ್ಜರೆಯನ್ನು ಸಾಧಿಸುತ್ತಿದ್ದರು. ಆಗಾಗ ಉನ್ನತ ಪರ್ವತ ಶಿಖರಗಳಲ್ಲಿ ಆತಪನಯೋಗದಲ್ಲಿ ನಿಲ್ಲುತ್ತಿದ್ದರು. ವರ್ಷರ್ತುವಿನಲ್ಲಿ ಅವರು ವಿಹಾರವನ್ನು ನಿಲ್ಲಿಸಿ ವೃಕ್ಷಗಳ ಕೆಳಗೆ ಇರುತ್ತಿದ್ದರು. ವರ್ಷಾಯೋಗದ ಸಮಯದಲ್ಲಿ ಆ ಮರದಡಿಯಲ್ಲಿದ್ದು ಸುರಿಯುವ ಮಳೆನೀರನ್ನು ಸಹಿಸುತ್ತಿದ್ದರು. ಹೇಮಂತ ಋತುವಿನ ರಾತ್ರಿಗಳಲ್ಲಿ ಪ್ರತಿಮಾಯೋಗದಲ್ಲಿದ್ದು ಹಿಮಾನಿಲವನ್ನು ಸಹಿಸುತ್ತಿದ್ದರು. ಅನುಪ್ರೇಕ್ಷೆಗಳು, ದಶಧರ್ಮಗಳು, ಪರೀಷಹಜಯ ಇವುಗಳನ್ನು ಸಾಧಿಸುತ್ತಿದ್ದರು. ಈ ರೀತಿ ಅನೇಕ ಸಾವಿರವರ್ಷ ತಪವಾಚರಿಸಿ ಕೊನೆಗೆ ಸಮ್ಮೇದಾಚಲವನ್ನೇರಿ ಅಲ್ಲಿ ಒಂದು ತಿಂಗಳು ಪ್ರಾಯೋಪಗಮನ ಸಂನ್ಯಾಸವಾಚರಿಸಿ ಸಮಾಧಿಮರಣವೈದಿದರು. ಕ್ರಮವಾಗಿ ಆರಣ ಅಚ್ಯುತ ಕಲ್ಪಗಳಲ್ಲಿ ಇಂದ್ರನೂ ಸಾಮಾನಿಕದೇವನೂ ಆದರು. ಅಲ್ಲಿ ೨೨ಸಾಗರ ಕಾಲ ಸುಖಪಟ್ಟರು.

ಆಮೇಲೆ ಮಧುವಿನ ಜೀವ ಆರಣಕಲ್ಪದಿಂದ ಬಂದು ಭರತಕ್ಷೇತ್ರದಲ್ಲಿ ಕೃಷ್ಣರುಕ್ಮಿಣಿಯರಿಗೆ ಪ್ರದ್ಯುಮ್ನನಾಯಿತು. ಕೈಟಭನ ಜೀವ ಅಚ್ಯುತಕಲ್ಪದಿಂದ ಬಂದು ಕೃಷ್ಣಜಾಂಬವತಿಯರಿಗೆ ಮುಂದೆ ಶಂಬನೆಂಬ ಮಗನಾಗುವನು (ಪ್ರದ್ಯುಮ್ನನಿಗೆ ತಮ್ಮ). ಪ್ರದ್ಯುಮ್ನ ಶಂಬರು ಧೀರರು, ಚರಮಶರೀರಿಗಳು, ಸುಂದರರು ; ಪೂರ್ವಭವ ಸಂಬಂಧದಿಂದಾಗಿ ಪರಸ್ಪರ ಆಸಕ್ತರೂ ಆಗುತ್ತಾರೆ.

ವಟಪುರದ ವೀರಸೇನ ರಾಜನು ಚಂದ್ರಾಭಳ ವಿರಹಸಂತಾಪದಿಂದ ಆರ್ತಧ್ಯಾನ ತತ್ಪರನಾಗಿ ಸತ್ತು ಹಲಗಾಲ ಸಂಸಾರದಲ್ಲಿ ತೊಳಲಾಡುತ್ತಿದ್ದನು. ಕೊನೆಗೆ ಮನುಷ್ಯ ಜನ್ಮ ಪಡೆದು ಅಜ್ಞಾನಿತಾಪಸನಾಗಿ ಜನಿಸಿದನು. ಆಯುರಂತ್ಯದಲ್ಲಿ ಮಡಿದು ಧೂಮಕೇತುವೆಂಬ ದೇವನಾದನು. ತನಗೆ ಪೂರ್ವಜನ್ಮಸಂಬಂಧವಾದ ವೈರದ ಸ್ಮರಣೆ ಬರು

ತ್ತಲೂ ಬಾಲಕ ಪ್ರದ್ಯುಮ್ನನನ್ನು ತಾಯಿಯಿಂದಗಲಿಸಿ ಕೊಂಡೊಯ್ದನು. ಪೂರ್ವ ಸಂಚಿತ ಪುಣ್ಯದಿಂದಾಗಿ ಪ್ರದ್ಯುಮ್ನನು ಮೃತ್ಯುವಿನ ಅಪಾಯಕ್ಕೆ ಸಿಗಲಿಲ್ಲ.''

ಹೀಗೆ ಸೀಮಂಧರರು ಪ್ರತಿಪಾದಿಸಿದ ಪ್ರದ್ಯುಮ್ನಚರಿತೆಯನ್ನು ಕೇಳಿ ಚಕ್ರವರ್ತಿ ಪದ್ಮರಥನು ಸಂತೋಷವಾಗಿ ಅವನಿಗೆ ವಂದಿಸಿದನು. ಇತ್ತ ನಾರದನು ಸಂತಸಗೊಂಡು ಸೀಮಂಧರನಿಗೆ ವಂದಿಸಿ ನಭೋಮಾರ್ಗಕ್ಕೆ ಹಾರಿ ಮೇಘಕೂಟ ಪರ್ವತವನ್ನು ಸೇರಿದನು. ಅಲ್ಲಿ ಪುತ್ರಲಾಭವನ್ನು ಪಡೆದ ಕಾಲಸಂವರರಾಜನನ್ನೂ ಅವನ ಪತ್ನಿ ಕನಕ ಮಾಲೆಯನ್ನೂ ಅಭಿನಂದಿಸಿದನು. ನೂರಾರು ಕುಮಾರರು ಸೇವಿಸುತ್ತಿದ್ದ ರುಕ್ಮಿಣೀ ಪುತ್ರನನ್ನು ನೋಡಿ ನಲಿದರೂ ನಲಿವನ್ನು ಹೊರಗೆ ತೋರಗೊಡಲಿಲ್ಲ. ಕಾಲಸಂವರಾದಿಗಳು ನಾರದನಿಗೆ ವಂದಿಸಿ ಸತ್ಕರಿಸಿದರು. ನಾರದನು ಅವರನ್ನು ಹರಸಿ ಅಲ್ಲಿಂದ ಬೇಗ ತೆರಳಿ ದ್ವಾರಿಕೆಯನ್ನು ಸೇರಿದನು. ಅಲ್ಲಿಗೆ ಬಂದು ತಾನು ಹೋದದ್ದು, ಕಂಡದ್ದು, ಕೇಳಿದ್ದು ಎಲ್ಲವನ್ನೂ, ನಡದದ್ದು ನಡೆದಂತೆ ಸ್ಪಷ್ಟವಾಗಿ ತಿಳಿಸಿ ಪ್ರದ್ಯುಮ್ನನ ಕಥೆಯಿಂದ ಯಾದವರನ್ನು ನಲಿಸಿದನು.

ಅನಂತರ ನಾರದನು ರುಕ್ಮಿಣಿಗೆ ಸೀಮಂಧರ ಜಿನನು ತನಗೆ ಹೇಳಿದ ಎಲ್ಲಾ ಸಂಗತಿಯನ್ನೂ ಶ್ರುತಪಡಿಸಿದನು: "ಹೇ ರುಕ್ಮಿಣಿ, ನಾನು ವಿದ್ಯಾಧರರಾಜ ಕಾಲಸಂವರನ ಮನೆಯಲ್ಲಿ ಆಡುತ್ತಿದ್ದ ನಿನ್ನ ಮಗನನ್ನು ನೋಡಿದೆ. ಅವನು ದೇವಕುಮಾರರಂತೆ ಅತ್ಯಂತ ರೂಪವಂತನಾಗಿದ್ದಾನೆ. ಷೋಡಶಲಾಭಗಳನ್ನು ಪಡೆದು, ಪ್ರಜ್ಞಪ್ತಿವಿದ್ಯೆಯನ್ನು ಗಳಿಸಿ, ನಿನ್ನ ಮಗನು ೧೬ನೆಯ ವರ್ಷದಲ್ಲಿ ತಪ್ಪದೆ ಮರಳುತ್ತಾನೆ. ಅವನ ಆಗಮನ ಕಾಲದಲ್ಲಿ ಅಕಾಲವಾಗಿಯೂ ನಿನ್ನ ಉದ್ಯಾನದಲ್ಲಿ ಮಯೂರದ ಕೇಕಾಧ್ವನಿಯಾಗುತ್ತದೆ; ಉದ್ಯಾನದಲ್ಲಿ ಶುಷ್ಕಪ್ರಾಯವಾಗಿರುವ ಮಣಿವಾಪಿಕೆ ಕಮಲಸರೋವರವಾಗುತ್ತದೆ; ಅಶೋಕವೃಕ್ಷ ಅಂಕುರ ಪಲ್ಲವಗಳನ್ನು ತಳೆಯುತ್ತದೆ. ನಿನ್ನ ಮನೆಯಲ್ಲಿ ಈಗ ಮೂಕರಾಗಿರುವವರು ಆಗ ಮೂಕತ್ವವನ್ನು ಬಿಡುತ್ತಾರೆ. ಇವುಗಳಿಂದ ನೀನು ಪುತ್ರಾಗಮನ ಸಮಯವನ್ನು ಅರಿಯಬಹುದು. ಸೀಮಂಧರರ ವಚನವನ್ನು ಅನ್ಯಥಾ ಭಾವಿಸಬೇಡ.'' ನಾರದನ ಮಾತು ಕೇಳಿ ರುಕ್ಮಿಣಿಗೆ ಸ್ತನ್ಯವುಕ್ಕಿತು. ನಾರದನಿಗೆ ವಂದಿಸಿ ಅವಳು "ಭಗವಾನ್, ವಾತ್ಸಲ್ಯಮಯರಾದ ತಾವು ಅನ್ಯರಿಗೆ ದುಷ್ಕರವಾದ ಈ ಬಂಧು ಕಾರ್ಯವನ್ನು ನಡಸಿದ್ದೀರಿ. ನಾನು ಪುತ್ರನ ಶೋಕಾಗ್ನಿಯಿಂದ ಒಂದೇ ಸಮನೆ ತಪಿಸುತ್ತಿದ್ದೆ. ನೀವು ನನ್ನನ್ನು ಕೈಗೊಟ್ಟು ಎತ್ತಿದಿರಿ. ಸೀಮಂಧರರ ಮಾತು ಹಾಗೆಯೇ ಸರಿ. ನಾನು ಬದುಕಿದ್ದು ಪುತ್ರದರ್ಶನವಾಗುವುದೆಂಬ ಭರವಸೆ ನನಗಿದೆ. ನಾನು ನನ್ನ ಎದೆಯನ್ನು ಗಟ್ಟಿಮಾಡಿಕೊಂಡು ಜಿನೇಂದ್ರರ ಮಾತಿನಂತೆ ಜೀವಿಸಿರುತ್ತೇನೆ. ಈಗ ತಾವು ತೆರಳಬಹುದು. ಮತ್ತೊಮ್ಮೆ ದರ್ಶನವೀಯಬೇಕು''—ಎಂದು ನಿವೇದಿಸಿಕೊಂಡು ಅವನನ್ನು ಬೀಳ್ಕೊಟ್ಟಳು. ನಾರದನು ಹರಸಿ ಹೋದನು. ಆಮೇಲೆ ರುಕ್ಮಿಣಿ ದುಃಖ ವಳಿದು ಮುನ್ನಿನಂತೆ ಇರತೊಡಗಿದಳು.

ಈ ಸರ್ಗದಲ್ಲಿ ಪ್ರದ್ಯುಮ್ನ ಶಂಬರ ಪೂರ್ವಭವಚರಿತೆ ಬರೆಯಲ್ಪಟ್ಟಿದೆ. ಇದ



ರಲ್ಲಿ ಅವರ ಮನುಷ್ಯತ್ವದಿಂದ ದೇವತ್ವ, ದೇವತ್ವದಿಂದ ಮನುಷ್ಯತ್ವ, ಹೀಗೆ ಭವ ಭವದ ಚರಿತೆ ಹೇಳಿದೆ. ಕೊನೆಗೆ ಈಯಿಬ್ಬರೂ ಮೋಕ್ಷಕ್ಕೆ ಸಲ್ಲುತ್ತಾರೆ. ಆದ್ದರಿಂದ ಜಿನಶಾಸನದ ಶ್ರದ್ಧಾಳುಗಳು ಇದನ್ನು ಓದಲಿ, ಕೇಳಲಿ.

## ೪೪. ಜಾಂಬವತ್ಯಾದಿ ಮಹಾದೇವೀಲಾಭ ವರ್ಣನ

ಸತ್ಯಭಾಮೆಗೆ ಹುಟ್ಟಿದ ಮಗನು ಶ್ರೀಮಂತನೂ ಭಾನುಭಾಮಂಡಲದ್ಯುತಿಯುತನೂ ಆಗಿದ್ದುದರಿಂದ ಭಾನುವೆಂದು ಹೆಸರಿಡಲಾಯಿತು. ಭಾನು ಸೂರ್ಯಸನ್ನಿಭನಾಗಿ ಬೆಳೆಯುತ್ತಿದ್ದಂತೆ ಸತ್ಯಭಾಮೆಯ ಮಾನಶೈಲವೂ ಬೆಳೆಯುತ್ತ ಹೋಯಿತು.

ಹೀಗಿರಲು ಒಮ್ಮೆ ನಾರದನು ಕೃಷ್ಣನ ಸಭೆಗೆ ಬಂದನು. ಕೃಷ್ಣನು "ಸ್ವಾಮಿ, ಈಗ ಎಲ್ಲಿಂದ ಬಂದಿರಿ ? ನಿಮ್ಮ ಮೊಗದಲ್ಲಿ ತುಂಬ ಸಂತೋಷ ಕಾಣುತ್ತಿದೆ'' ಎಂದನು. ನಾರದನು "ವಿಜಯಾರ್ಧದ ದಕ್ಷಿಣಶ್ರೇಣಿಯಲ್ಲಿ ಜಂಬೂಪುರವೆಂಬ ಪುರವುಂಟು. ಅಲ್ಲಿ ಜಾಂಬವನೆಂಬ ವಿದ್ಯಾಧರನಿದ್ದಾನೆ; ಅವನ ಪತ್ನಿ ಶಿವಚಂದ್ರಾ. ಇವರಿಗೆ ವಿಶ್ವಕ್ಸೇನನೆಂಬ ಮಗನೂ ಜಾಂಬವತಿಯೆಂಬ ಮಗಳೂ ಇದ್ದಾರೆ. ಈ ಮಗಳು ಸಾಕ್ಷಾತ್ ಲಕ್ಷ್ಮಿಯೇ ಸರಿ. ಅವಳು ಈಗ ಸಖೀಸಮೇತಳಾಗಿ ಸ್ನಾನಕ್ಕೆಂದು ಗಂಗೆಗೆ ಇಳಿದಿದ್ದಾಳೆ. ಈಗ ಆ ಚೆಲುವೆ ಗಂಗಾದ್ವಾರದಲ್ಲಿದ್ದಾಳೆ. ಅವಳು ಜಾಂಬವ ಪರ್ವತದಿಂದ ಹೊರಡುವ ನದಿಯಂತೆ ಇದ್ದಾಳೆ. ಅನ್ಯರಿಗೆ ಅಲಭ್ಯಳು. ತಂದೆ ಜಾಂಬವನ ಸೇನೆಯಂತೆ ಅನ್ಯರಿಗೆ ಅಶಕ್ಯಳು'' ಎಂದನು. ಹೀಗೆ ಸ್ನೇಹದಿಂದಾಡಿದ ನಾರದನ ಮಾತು ಕೇಳಿ ಕೃಷ್ಣನು ಆಜ್ಯಾಹುತಿಗೆ ಉದ್ದೀಪ್ತವಾಗುವ ಅಗ್ನಿಯಂತೆ ಉತ್ತೇಜಿತನಾದನು. ಅನಾವೃಷ್ಟಿ ಬಲದೇವರನ್ನು ಕರೆದುಕೊಂಡು ಶೀಘ್ರವೇ ಆಯೆಡೆಗೆ ಹೋದನು. ಅಲ್ಲಿ ಸ್ನಾನಕ್ಕೆ ಇಳಿಯಲಿದ್ದ ಜಾಂಬವತಿಯನ್ನು ನೋಡಿದನು. ಆಗಲೇ ಹಠಾತ್ತಾಗಿ ನೈದಿಲೆಯ ಬಣ್ಣದ ಕಾಂತಿಸೂಸುವ ಕೃಷ್ಣನನ್ನು ಜಾಂಬವತಿಯೂ ನೋಡಿದಳು. ಮನ್ಮಥನು ಒಮ್ಮೆಗೇ ಬಾಣಪ್ರಯೋಗ ಮಾಡಿದನು. ಸಮಯ ನೋಡಿ ಕೃಷ್ಣನು ಜಾಂಬವತಿಯನ್ನು ತನ್ನೆರಡೂ ತೋಳುಗಳಲ್ಲಿ ಗಾಢವಾಗಿ ಅಪ್ಪಿದನು. ಪರಸ್ಪರರು ಸ್ಪರ್ಶಸುಖಾನುಭವ ಮಾಡಿದ ಮೇಲೆ ಕೃಷ್ಣನು ಆಕೆಯನ್ನು ಅಪಹರಿಸಿ ತಂದುಬಿಟ್ಟನು. ಕನ್ಯಾಪಹರಣದ ಕಾರಣವಾಗಿ ಸಖಿಯರೆಲ್ಲ ಜೋರಾಗಿ ಪ್ರಲಾಪಮಾಡುವುದು ಸಮೀಪದ ಶಿಬಿರಕ್ಕೆ ಕೇಳಿಸಿತು. ಅದು ಕೇಳಿ ಕನ್ಯಾಪಿತೃ ಜಾಂಬವನು ಕ್ರೋಧಗೊಂಡು ಕೈಯಲ್ಲಿ ಕತ್ತಿ ಗುರಾಣಿ ಹಿಡಿದು ಗಗನಮಾರ್ಗದಿಂದ ಕೂಡಲೇ ಹೊರಟುಬಂದನು. ಅವನು ಬಂದುದು ನೋಡಿ ಗಗನಚಾರಿಯಾದ ಅನಾವೃಷ್ಟಿ ಕೆಲಹೊತ್ತು ಅವನೊಡನೆ ಯುದ್ಧಮಾಡಿದನು. ಆಮೇಲೆ ಆ ಖಡ್ಗಧಾರಿ ಜಾಂಬವನನ್ನು ಬಂಧಿಸಿಬಿಟ್ಟನು. ಅವನನ್ನು ಕೃಷ್ಣನಲ್ಲಿಗೆ ತಂದು ತೋರಿದನು. ಈ ಘಟನೆಯಿಂದ ಜಾಂಬವನು ವೈರಾಗ್ಯಗೊಂಡು ತನ್ನ ಮಗ ವಿಶ್ವಕ್ಸೇನನನ್ನು ಕೃಷ್ಣನಿಗೆ ಅಧೀನಮಾಡಿ ತಾನು ತಪಸ್ಸಿಗೆ ವನಕ್ಕೆ ಹೋದನು. ಜಾಂಬವತಿಯನ್ನು ವಿವಾಹಮಾಡಿಕೊಂಡು ಕೃಷ್ಣನು ವಿಶ್ವಕ್ಸೇನನನ್ನೊಡಗೊಂಡು ದ್ವಾರಕೆಗೆ ಬಂದನು. ಅವಳ ಆಗಮನ

ದಿಂದ ರುಕ್ಮಿಣಿಯೂ ಹರ್ಷಿತಳಾದಳು. ಇದರಿಂದ ರುಕ್ಮಿಣಿಯ ಸೌಧದ ಬಳಿಯೇ ಜಾಂಬವತಿಗೂ ಒಂದು ಸೌಧವನ್ನು ಕೃಷ್ಣನು ಮಾಡಿಸಿದನು. ವಿಶ್ವಕ್ಸೇನನನ್ನು ಉಚಿತವಾಗಿ ಮನ್ನಿಸಿ ಸ್ವಸ್ಥಾನಕ್ಕೆ ಕಳಿಸಿದನು. ತಾನು ಜಾಂಬವತಿಯೊಂದಿಗೆ ಸುಖದಲ್ಲಿದ್ದನು. ರುಕ್ಮಿಣಿ ಜಾಂಬವತಿಯರಲ್ಲಿ ಪರಸ್ಪರ ಪ್ರೀತ್ಯಾದರಗಳು ಬೆಳೆದವು. ಒಬ್ಬರ ಮನೆಗೆ ಒಬ್ಬರು ಬಂದು ಹೋಗುತ್ತಿದ್ದರು.

ಅದೇ ಕಾಲದಲ್ಲಿ ಸಿಂಹಲದ್ವೀಪದಲ್ಲಿ ಶ್ಲಕ್ಷ್ಣರೋಮನೆಂಬ ಅರಸನಿದ್ದನು. ಅವನನ್ನು ವಶಕ್ಕೆ ಕೊಳ್ಳಲು ಕೃಷ್ಣನು ಒಮ್ಮೆ ತನ್ನ ದೂತನನ್ನು ಆತನಲ್ಲಿಗೆ ಕಳಿಸಿದನು. ದೂತನು ಅಲ್ಲಿಗೆ ಹೋದವನು ಬೇಗ ಹಿಂದಿರುಗಿ ಬಂದು ಅವನು ಪ್ರತಿಕೂಲನಾಗಿರುವ ವಿಚಾರ ತಿಳಿಸಿದನು. ಹಾಗೆಯೇ ಆತನಿಗೆ ಲಕ್ಷಣವತಿಯಾದ ಲಕ್ಷ್ಮಣಾ ಎಂಬ ಕನ್ಯೆಯಿರುವುದನ್ನೂ ತಿಳಿಸಿದನು. ಕೂಡಲೇ ಕೃಷ್ಣನು ಬಲದೇವನೊಡಗೂಡಿ ಅಲ್ಲಿಗೆ ಹೋದನು. ಅಲ್ಲಿ ಅವನು ಸ್ನಾನಕ್ಕಾಗಿ ಸಮುದ್ರಕ್ಕೆ ಬಂದಿದ್ದ ಲಕ್ಷ್ಮಣೆಯನ್ನು ನೋಡಿದನು. ಕೃಷ್ಣನು ತನ್ನ ರೂಪದಿಂದ ಅವಳ ಮನಸೆಳೆದು, ಸಮರ್ಥನಾದ ದ್ರುಮಸೇನನೆಂಬ ಸೇನಾಪತಿಯನ್ನು ಯುದ್ಧದಲ್ಲಿ ಕೊಂದುಹಾಕಿ, ಕನ್ಯೆಯನ್ನು ಅಪಹರಿಸಿ ತಂದನು. ದ್ವಾರಕೆಗೆ ಕರೆತಂದು ವಿಧಿವತ್ತಾಗಿ ವರಿಸಿ ಜಾಂಬವತಿಯ ಸೌಧದ ಬಳಿಯಲ್ಲಿಯೇ ಅವಳಿಗೂ ಸೌಧವಿತ್ತು, ಅವಳೊಂದಿಗೆ ಸುಖದಲ್ಲಿದ್ದನು. ಲಕ್ಷ್ಮಣೆಯ ಸೋದರ ಮಹಾಸೇನನು ಕೃಷ್ಣನಲ್ಲಿಗೆ ಬಂದು ವಿನಯವನ್ನೊಪ್ಪಿಸಲು, ಆತನಿಂದ ಸನ್ಮಾನಿತನಾಗಿ ಸಿಂಹಲ ದ್ವೀಪಕ್ಕೆ ಮರಳಿದನು.

ಅದೇ ಸಮಯದಲ್ಲಿ ಸುರಾಷ್ಟ್ರದೇಶದಲ್ಲಿ ರಾಷ್ಟ್ರವರ್ಧನನೆಂಬ ಅರಸಿದ್ದನು. ಅಜಾಖುರೀ ಎಂಬುದು ಅದರ ಪಟ್ಟಣ. ರಾಷ್ಟ್ರವರ್ಧನನ ಪತ್ನಿ ವಿನಯಾ ಎಂಬವಳು. ಇವರಿಗೆ ನಮುಚಿ ಎಂಬ ಮಗನೂ ಸುಸೀಮಾ ಎಂಬ ಮಗಳೂ ಇದ್ದರು. ಯುವರಾಜ ನಮುಚಿಯ ಪರಾಕ್ರಮ ಲೋಕಪ್ರಸಿದ್ಧವಾಗಿತ್ತು. ಅವನು ಅತ್ಯಭಿಮಾನಶಾಲಿಯೂ ಅನ್ಯರಾಜರನ್ನು ಲಕ್ಷಿಸದವನೂ ಆಗಿದ್ದನು. ಒಂದುದಿನ ನಮುಚಿಯೂ ಅವನ ಸೋದರಿ ಸುಸೀಮೆಯೂ ಸ್ನಾನಕ್ಕಾಗಿ ಸಮುದ್ರತಟಕ್ಕೆ ಬಂದರು. ಇತ್ತ ನಾರದನು ಕೃಷ್ಣನಿಗೆ ಅವರಿಬ್ಬರ ಸುದ್ದಿಯನ್ನೂ ತಿಳಿಸಿದನು. ಸುದ್ದಿ ತಿಳಿಯುತ್ತಲೂ ಕೃಷ್ಣನು ಬಲದೇವನೊಂದಿಗೆ ಅಲ್ಲಿಗೆ ಹೋಗಿ ಪ್ರಭಾಸತೀರ್ಥದ ತೀರದಲ್ಲಿ ಸೈನ್ಯದೊಂದಿಗೆ ತಂಗಿದ್ದ ನಮುಚಿಯನ್ನು ಕೊಂದು ಸುಸೀಮೆಯನ್ನು ಅಪಹರಿಸಿಕೊಂಡು ದ್ವಾರಿಕೆಗೆ ಬಂದನು. ಅಲ್ಲಿ ಲಕ್ಷ್ಮಣೆಯ ಭವನದ ಬಳಿಯೆ ಅವಳಿಗೊಂದು ಭವನವಿತ್ತು ಅವಳೊಂದಿಗೆ ಸುಖದಲ್ಲಿದ್ದನು. ಕನ್ಯಾಪಿತೃ ರಾಷ್ಟ್ರವರ್ಧನ ರಾಜನು ಮಗಳಿಗೆ ವಸ್ತ್ರಭೂಷಣವನ್ನೂ ಕೃಷ್ಣನಿಗೆ ರಥ ಹಸ್ತ್ಯಾದಿಗಳನ್ನೂ ಕಾಣಿಕೆಯಾಗಿ ಕಳಿಸಿದನು.

ಅದೇ ಕಾಲದಲ್ಲಿ ಸಿಂಧುದೇಶದ ವೀತಭಯವೆಂಬ ನಗರದಲ್ಲಿ ಇಕ್ಷ್ವಾಕುವಂಶ ಸಂವರ್ಧನನಾದ ಮೇರುವೆಂಬ ಅರಸಿದ್ದನು. ಚಂದ್ರವತಿ ಅವನ ಪತ್ನಿ. ಇವರ ಮಗಳು ಗೌರಿ. ಈ ಕನ್ಯೆ ೯ನೆಯ ನಾರಾಯಣನಾದ ಕೃಷ್ಣನ ಪತ್ನಿಯಾಗುತ್ತಾಳೆ ಎಂದು ನೈಮಿತ್ತಿ



ಕರು ಹೇಳಿದ್ದರು. ಆ ಮಾತುಗಳನ್ನು ನೆನಪಿಟ್ಟುಕೊಂಡಿದ್ದ ಮೇರುವು ಮೊದಲು ಕೃಷ್ಣನಲ್ಲಿಗೆ ತನ್ನ ದೂತನನ್ನು ಕಳಿಸಿಕೊಟ್ಟನು ; ಆಮೇಲೆ ಗೌರಿಯನ್ನೇ ಕಳಿಸಿಕೊಟ್ಟನು. ಆಕೆಯನ್ನು ವರಿಸಿ, ಸುಸೀಮೆಯ ಭವನಕ್ಕೆ ಸಮೀಪದಲ್ಲಿ ಒಂದು ಭವನವನ್ನು ಮಾಡಿಸಿಕೊಟ್ಟನು.

ಅದೇ ಸಮಯದಲ್ಲಿ ಬಲದೇವನ ಮಾವ ಹಿರಣ್ಯನಾಭರಾಜನು ಅರಿಷ್ಟಪುರ ನಗರದಲ್ಲಿ ರಾಜ್ಯವಾಳುತ್ತಿದ್ದನು. ಇವನಿಗೆ ಶ್ರೀಕಾಂತಾ ಎಂಬವಳು ಪತ್ನಿ. ಇವರಿಗೆ ಲಕ್ಷ್ಮಿಗೆ ಸಮಾನಳಾದ ಪದ್ಮಾವತಿ ಎಂಬ ಮಗಳಿದ್ದಳು. ಅವಳ ಸ್ವಯಂವರವಾಗಲಿದೆ ಎಂಬುದನ್ನು ಕೇಳಿ ಅನಾವೃಷ್ಟಿಯನ್ನೊಡಗೊಂಡು ಬಲದೇವ ಕೃಷ್ಣರೂ ಅಲ್ಲಿಗೆ ಹೋದರು. ಇವರಿಬ್ಬರನ್ನೂ ಹಿರಣ್ಯನಾಭನು ತುಂಬ ಪ್ರೀತಿಗೌರವಗಳಿಂದ ನೋಡಿಕೊಂಡನು. ಹಿರಣ್ಯನಾಭನ ಅಣ್ಣ ರೇವತನ, ತಂದೆಯೊಂದಿಗೆ ಮೊದಲೇ ದೀಕ್ಷೆಗೊಂಡು ವನದಲ್ಲಿ ಇರುತ್ತಿದ್ದಾತನ, ನಾಲ್ವರು ಪುತ್ರಿಯರಾದ ರೇವತಿ ಬಂಧುಮತಿ ಸೀತೆ ರಾಜೀವನೇತ್ರೆ ಇವರನ್ನು ಬಲದೇವನಿಗೆ ಮೊದಲೇ ಕೊಡಲಾಯಿತು. ಆ ಮೇಲೆ ಪದ್ಮಾವತಿಯ ಸ್ವಯಂವರವಾಗಲಿದ್ದಾಗ ಕೃಷ್ಣನು ಅವಳನ್ನು ಹಠಾತ್ತನೆ ಅಪಹರಿಸಿ ಒಯ್ದನು. ಯುದ್ಧದಲ್ಲಿ ಶೌರ್ಯದಿಂದ ಇದಿರಾದವರನ್ನು ಬೇಗ ನಷ್ಟಭ್ರಷ್ಟಮಾಡಿದನು. ಆಮೇಲೆ ಪದ್ಮಾವತಿಯನ್ನು ಕೃಷ್ಣನು ವಿವಾಹವಾಗಿ, ತಂತಮ್ಮ ಪತ್ನಿಯರೊಡಗೂಡಿ ಕೃಷ್ಣಬಲದೇವರು ದ್ವಾರಿಕೆಗೆ ಬಂದರು. ಕೃಷ್ಣನು ಗೌರಿಯ ಭವನದ ಬಳಿಯೇ ಪದ್ಮಾವತಿಗೂ ಒಂದು ಭವನವನ್ನು ಮಾಡಿಸಿಕೊಟ್ಟನು.

ಅದೇ ಸಮಯದಲ್ಲಿ ಗಾಂಧಾರದೇಶದ ಪುಷ್ಕಲಾವತೀ ನಗರದಲ್ಲಿ ಇಂದ್ರಗಿರಿಯೆಂಬರಸು ಆಳುತ್ತಿದ್ದನು. ಅವನಿಗೆ ಮೇರುಸತಿ ಎಂಬವಳು ಪತ್ನಿ. ಇವರಿಗೆ ಹಿಮಗಿರಿಯೆಂಬ ಮಗನೂ ಗಾಂಧಾರಿಯೆಂಬ ಮಗಳೂ ಇದ್ದರು. ಧಾವಿಸಿಬಂದ ನಾರದನಿಂದ ಗಾಂಧಾರಿಯ ಸೋದರನು ಆಕೆಯನ್ನು ಹಯಪುರಿಯ ಅರಸು ಸುಮುಖನಿಗೆ ಕೊಡಲಿದ್ದಾನೆ ಎಂದು ಕೃಷ್ಣನಿಗೆ ವೇದ್ಯವಾಗುತ್ತಲೂ, ತಾನು ಕೂಡಲೇ ಹೋಗಿ ರಣಾಂಗಣದಲ್ಲಿ ಪ್ರತಿಕೂಲನಾದ ಹಿಮಗಿರಿಯನ್ನು ಕೊಂದುಹಾಕಿ, ಗಾಂಧಾರಿಯನ್ನು ಅಪಹರಿಸಿ ತಂದು ಅವಳನ್ನು ವರಿಸಿದನು. ಪದ್ಮಾವತಿಯ ಭವನದ ಬಳಿಯಲ್ಲಿ ಆಕೆಗೆ ಭವನವನ್ನು ಮಾಡಿಸಿ ಕೊಟ್ಟನು.

ಹೀಗೆ ಕೃಷ್ಣನು ಅಷ್ಟದಿಕ್ಕುಗಳನ್ನು ಸಾಧಿಸಿದಂತೆ ಅಷ್ಟ ಮಹಾದೇವಿಯರನ್ನು ಒಡಗೂಡಿ ಅವರಿಂದ ಸೇವಿಸಲ್ಪಟ್ಟು, ಸುಖಭೋಗಗಳನ್ನು ಅನುಭವಿಸುತ್ತ, ಜನತಾನಂದಕರನಾಗಿ, ಅಭ್ಯುದಯಶಾಲಿಯಾಗಿ ಇರುತ್ತಿದ್ದನು.

ಗೌತಮಸ್ವಾಮಿಗಳು ಹೇಳುತ್ತಾರೆ : "ಜಿನಧರ್ಮವನ್ನು ಅವಲಂಬಿಸಿದ ಭವ್ಯಜೀವನು ಯುದ್ಧದಲ್ಲಿ ಎದುರಾದ ಶತ್ರುಗಳನ್ನು ಕ್ಷಣಮಾತ್ರದಲ್ಲಿ ತೃಣಸಮಾನವಾಗಿ ಭಾವಿಸಿ ಸಾಧಿಸಿ, ನಿರಾಯಾಸವಾಗಿ ಉತ್ತಮೋತ್ತಮ ಸ್ತ್ರೀರತ್ನಗಳನ್ನು ಗಳಿಸುತ್ತಾನೆ."

## ೪೫. ಕುರುವಂಶೋತ್ಪತ್ತಿ ಪಾಂಡವ ಧಾರ್ತರಾಷ್ಟ್ರಸಮಾಗಮ ಪಾರ್ಥದ್ರೌಪದೀಲಾಭ ವರ್ಣನ

''ಒಂದು ದಿನ ಯಾದವರ ಭಾಗಿನೇಯನಾದ (ಭಾವನಾದ) ಪಾಂಡುರಾಜನ ಪುತ್ರರು, ಯುಧಿಷ್ಠಿರ ಅರ್ಜುನ ಭೀಮಸೇನ ನಕುಲ ಸಹದೇವ ಈ ಪಂಚಪಾಂಡವರು ದ್ವಾರಿಕೆಗೆ ಬಂದರು.''—ಹೀಗೆಂದಾಗ ನಡುವೆ ಶ್ರೇಣಿಕನು ಕೈಮುಗಿದುಕೊಂಡು ಗೌತಮ ಗಣಧರರನ್ನು ''ಸ್ವಾಮಿ, ಪಾಂಡು ಮತ್ತು ಪಾಂಡವರು ಯಾರ ವಂಶದಲ್ಲಿ ಉತ್ಪನ್ನ ರಾದವರು ?'' ಎಂದು ಪ್ರಶ್ನಿಸಿದನು. ಆಗ ಗೌತಮಸ್ವಾಮಿ, "ಪಾಂಡು ಮತ್ತು ಪಾಂಡವರು ಶಾಂತಿ ಕುಂಥು ಅರ ಈ ಮೂವರು ತೀರ್ಥಂಕರರು ಜನಿಸಿದ ಕುರುವಂಶದಲ್ಲಿ ಉತ್ಪನ್ನರಾದವರು ; ಹೇ ಮಗಧೇಶ್ವರ, ಈಗ ನಾನು ಮೊದಲಿಂದ ಹಿಡಿದು ಆ ಕುರು ವಂಶದರಸರ ಕೆಲವು ಹೆಸರುಗಳನ್ನು ಹೇಳುತ್ತೇನೆ, ಕೇಳು''–ಎಂದು ಹೇಳಿ, ಅದನ್ನು ಹೇಳತೊಡಗಿದನು:

''ಕುರುಜಾಂಗಲ ದೇಶದ ಹಸ್ತಿನಾಪುರದಲ್ಲಿ ಶ್ರೇಯಾಂಸ, ಸೋಮಪ್ರಭ ಎಂಬ ಇಬ್ಬರು ಅರಸರು ಕುರುವಂಶತಿಲಕಪ್ರಾಯರಾಗಿದ್ದರು. ಅವರು ವೃಷಭದೇವನಿಗೆ ಸಮಕಾಲೀನರು, ದಾನತೀರ್ಥದ ನಾಯಕರು. ಇವರಲ್ಲಿ ಸೋಮಪ್ರಭನಿಗೆ ಮಗ ಜಯ ಕುಮಾರ. ಈತನೇ ಮುಂದೆ ಭರತಚಕ್ರಿಯಿಂದ ಮೇಘಸ್ವರ ಎಂದು ಕರೆಯಲ್ಪಟ್ಟನು. ಜಯಕುಮಾರನಿಗೆ ಮಗ ಕುರು. ಇವನಿಗೆ ಮಗ ಕುರುಚಂದ್ರ. ಅವನಿಗೆ ಮಗ ಶುಭಂಕರ. ಅವನಿಗೆ ಮಗ ಧೃತಿಕರ. ಆಮೇಲೆ ಕಾಲಕ್ರಮದಲ್ಲಿ ಅನೇಕ ಕೋಟಿ ಅರಸರು, ಅನೇಕ ಸಾಗರ ಪ್ರಮಾಣದ ತೀರ್ಥಂಕರರ ಕಾಲ ಕಳೆದು ಧೃತಿದೇವ ಮುಂತಾಗಿ ನೂರಾರು ಅರಸರಾದರು. ಆಮೇಲೆ ಧೃತಪದ್ಮ ಮುಂತಾದವರಾದರು. ಆ ಬಳಿಕ ಭ್ರಮರ ಘೋಷ ಮುಂತಾದವರು ಆದರು. ಆಮೇಲೆ ವಿಜಯಮಹಾರಾಜ. ಜಯರಾಜರಾದರು. ಹೀಗೆ ಹಲವರಾದ ಮೇಲೆ ಅದೇ ವಂಶದಲ್ಲಿ ಚತುರ್ಥಚಕ್ರವರ್ತಿ ಸನತ್ಕುಮಾರನಾದನು. ಇವನಿಗೆ ಸುಕುಮಾರನು ಮಗ. ಆಮೇಲೆ ವರಕುಮಾರ, ವಿಶ್ವ, ವೈಶ್ವಾನರ, ವಿಶ್ವಕೇತು, ಬೃಹಧ್ವಜ ಎಂಬರಸರಾದರು. ಆಮೇಲೆ ವಿಶ್ವಸೇನರಾಜನಾದನು. ಇವನ ಪತ್ನಿ ಐರಾ. ಇವರಿಗೆ ೫ನೆಯ ಚಕ್ರವರ್ತಿಯೂ ೧೬ನೆಯ ತೀರ್ಥಂಕರನೂ ಆದ ಶಾಂತಿನಾಥನು ಮಗ ನಾದನು. ಇವನಾದ ಮೇಲೆ ನಾರಾಯಣ, ನರಹರಿ, ಪ್ರಶಾಂತಿ, ಶಾಂತಿವರ್ಧನ, ಶಾಂತಿ ಚಂದ್ರ, ಶಶಾಂಕಾಂಕ ಮತ್ತು ಕುರು ಎಂಬ ಅರಸರಾದರು. ಈ ಮೊದಲಾದರಸರು ಕಳೆ ಯುತ್ತಲೂ ಇದೇ ವಂಶದಲ್ಲಿ ಸೂರ್ಯನೆಂಬವನು ಅರಸನಾದನು. ಇವನ ಪತ್ನಿ ಶ್ರೀಮತಿ. ಇವರಿಗೇ ಚಕ್ರವರ್ತಿಯೂ ತೀರ್ಥಂಕರನೂ ಆದ ಕುಂಥುನಾಥ ಜನಿಸಿದ್ದು. ಆ ಮೇಲೆ ಕ್ರಮಕ್ರಮವಾಗಿ ಅನೇಕ ರಾಜರು ಆಗುತ್ತಲೂ ಸುದರ್ಶನ ಅರಸನಾದನು. ಇವನ ಪತ್ನಿ ಮಿತ್ರಾ. ಇವರಿಗೇ ೭ನೆಯ ಚಕ್ರವರ್ತಿಯೂ ೧೮ನೆಯ ತೀರ್ಥಂಕರನೂ ಆದ ಅರ ನಾಥನು ಜನಿಸಿದ್ದು. ಆಮೇಲೆ ಸುಚಾರು, ಚಾರು, ಚಾರುರೂಪ ಮತ್ತು ಚಾರುಪದ್ಮ ರಾದರು. ಆಮೇಲೆ ಅನ್ಯರಾಜರು ಕೆಲವರಾದ ಮೇಲೆ ಇದೇ ವಂಶದಲ್ಲಿ ಪದ್ಮಮಾಲ, ಸುಭೌಮ, ಪದ್ಮರಥ ಇವರು. ಆಮೇಲೆ ಮಹಾಪದ್ಮ ಚಕ್ರವರ್ತಿ. ಈತನಿಗೆ ವಿಷ್ಣು ಮತ್ತು ಪದ್ಮ ಇಬ್ಬರು ಪುತ್ರರು. ಆಮೇಲೆ ಸುಪದ್ಮ, ಪದ್ಮದೇವ, ಕುಲಕೀರ್ತಿ, ಕೀರ್ತಿ. ಸುಕೀರ್ತಿ, ಕೀರ್ತಿ, ವಸುಕೀರ್ತಿ, ವಾಸುಕಿ,ವಾಸವ, ವಸು, ಸುವಸು, ಶ್ರೀವಸು,ವಸುಂಧರ, ವಸುರಥ, ಇಂದ್ರವೀರ್ಯ, ಚಿತ್ರ, ವಿಚಿತ್ರ. ವೀರ್ಯ, ವಿಚಿತ್ರ, ವಿಚಿತ್ರವೀರ್ಯ, ಚಿತ್ರರಥ, ಮಹಾರಥ. ಧೃತರಥ, ವೃಷಾನಂತ, ವೃಷಧ್ವಜ, ಶ್ರೀವ್ರತ, ವ್ರತಧರ್ಮ, ಧೃತ, ಧಾರಣ, ಮಹಾಸರ, ಪ್ರತಿಸರ, ಶರ, ಪರಾಶರ, ಶರದ್ವೀಪ, ದ್ವೀಪ, ದ್ವೀಪಾಯನ, ಸುಶಾಂತಿ, ಶಾಂತಿಭದ್ರ. ಶಾಂತಿಷೇಣ, ರಾಜಪುತ್ರಿ ಯೋಜನಗಂಧೆಯ ಪತಿ ಶಂತನು, ಶಂತನುವಿನ ಮಗ ಧೃತವ್ಯಾಸ. ಆಮೇಲೆ ಧೃತಧರ್ಮ, ಧೃತೋದಯ, ಧೃತತೇಜ, ಧೃತ ಯಶ, ಧೃತಮಾನ್ ಮತ್ತು ಧೃತ.

ಧೃತನಿಗೆ ಧೃತರಾಜನು ಮಗ.ಇವನಿಗೆ ಅಂಬಿಕಾ ಅಂಬಾಲಿಕಾ ಅಂಬಾ ಎಂಬವರು ಪತ್ನಿಯರು. ಇವರು ಉಚ್ಚಕುಲದಲ್ಲಿ ಹುಟ್ಟಿದವರು. ಇವರಲ್ಲಿ ಅಂಬಿಕೆಯಿಂದ ಧೃತ ರಾಷ್ಟ್ರ ; ಅಂಬಾಲಿಕೆಯಿಂದ ಪಾಂಡು; ಅಂಬೆಯಿಂದ ಜ್ಞಾನಶ್ರೇಷ್ಠನಾದ ವಿದುರ ಹೀಗೆ ಪುತ್ರರಾದರು. ಭೀಷ್ಮನೂ ಶಂತನುವಿನ ವಂಶದಲ್ಲೇ ಹುಟ್ಟಿದವನು. ಧೃತರಾಜನ ಸೋದರ ರುಕ್ಮಣನು ಭೀಷ್ಮನ ತಂದೆ. ರಾಜಪುತ್ರಿ ಗಂಗಾ ಭೀಷ್ಮನ ತಾಯಿ. ಧೃತರಾಷ್ಟ್ರ ರಾಜನಿಗೆ ದುರ್ಯೋಧನ ಮೊದಲಾಗಿ ನೂರ್ವರು ಪುತ್ರರು. ಇವರು ನಯಪೌರುಷ ಸಂಪನ್ನರು, ಪರಸ್ಪರ ಹಿತಾಕಾಂಕ್ಷಿಗಳು. ಪಾಂಡುರಾಜನ ಪತ್ನಿ ಕುಂತಿ. ಪಾಂಡುರಾಜನು ಗಾಂಧರ್ವವಿವಾಹಮಾಡಿಕೊಂಡು ಕುಂತಿಯಿಂದ ಆಕೆಯ ಕನ್ಯಾವಸ್ಥೆಯಲ್ಲಿ ಒಡಗೂಡಿ ದ್ದಾಗ ಕರ್ಣನು ಜನಿಸಿದ್ದನು. ಆಮೇಲೆ ಆಕೆಯನ್ನು ಕ್ರಮವಾಗಿ ವಿವಾಹಮಾಡಿಕೊಂಡ ಮೇಲೆ, ಯುಧಿಷ್ಠಿರ ಅರ್ಜುನ ಭೀಮ ಈ ಮೂವರು ಪುತ್ರರಾದರು. ಇದೇ ಪಾಂಡು ವಿಗೆ ಮದ್ರಿ ಇನ್ನೊಬ್ಬ ಪತ್ನಿ. ಇವಳಿಂದ ನಕುಲಸಹದೇವರಾದರು. ಈಯೆಲ್ಲರೂ ಕೂಡಿ ಪಂಚಪಾಂಡವರೆಂದು ಕರೆಯಲ್ಪಡುತ್ತಾರೆ.ಪಾಂಡುವೂ ಮದ್ರಿಯೂ ಜಿನಧರ್ಮದ ಪ್ರಸಾದ ದಿಂದ(ದೀಕ್ಷೆಗೊಂಡು) ಸ್ವರ್ಗವಾಸಿಗಳಾದಮೇಲೆ ಪಾಂಡವರೂ ಧಾರ್ತರಾಷ್ಟ್ರರೂ ರಾಜ್ಯ ವಿಷಯಕ್ಕಾಗಿ ಪರಸ್ಪರ ವಿರೋಧಿಗಳಾದರು. ಇವರ ವಿರೋಧವು ಬೆಳೆಯತೊಡಗಿದಾಗ ಭೀಷ್ಮ. ವಿದುರ, ದ್ರೋಣ, ಮಂತ್ರಿಯಾದ ಶಕುನಿ ಮತ್ತು ದುರ್ಯೋಧನನ ಮಿತ್ರ ಶಶ ರೋಮ ಮೊದಲಾದವರು ಮಧ್ಯಸ್ಥಗಾರರಾಗಿ ಕೌರವರ ರಾಜ್ಯವನ್ನು ಸಮವಾಗಿ ಇಬ್ಭಾಗ ಮಾಡಿದರು. ಒಂದು ಭಾಗ ಯುಧಿಷ್ಠಿರ ಮೊದಲಾದ ಪಂಚಪಾಂಡವರಿಗೆ, ಇನ್ನೊಂದು ಭಾಗ ದುರ್ಯೋಧನ ಮೊದಲಾದ ನೂರ್ವರು ಕೌರವರಿಗೆ ದೊರೆಯಿತು.

ಇತ್ತ ದುರ್ಯೋಧನನಿಗೆ ಕರ್ಣನೊಂದಿಗೆ ಒಳ್ಳೆಯ ಸ್ನೇಹ ಘಟಿಸಿತು. ಜರಾಸಂಧ ನೊಂದಿಗೆ ಸೈಭೃತ್ಯವುಂಟಾಯಿತು. ದ್ರೋಣಾಚಾರ್ಯನು ಧನುರ್ವಿದ್ಯೆಯಲ್ಲಿ ವಿಶಾರದನಾ ಗಿದ್ದನು. ಆತನು ಮಧ್ಯಸ್ಥಭಾವದಿಂದಿದ್ದು ಪಾಂಡವ ಕೌರವರಿಗೆ ಬಿಲ್ಲ ಗುರುವಾಗಿ ಉಪ ದೇಶ ಮಾಡುತಿದ್ದನು,

ನಡುವೆ ಗೌತಮನು ಶ್ರೇಣಿಕನಿಗೆ "ಅಯ್ಯಾ, ದ್ರೋಣಾಚಾರ್ಯನ ಶಿಷ್ಯ ಮತ್ತು

ಆಚಾರ್ಯಪರಂಪರೆ ಪ್ರಸಿದ್ಧವಾದ್ದು. ಆದ್ದರಿಂದ ಅದು ಬಿಟ್ಟು ಭಾರ್ಗವಾಚಾರ್ಯನ ವಂಶ ಪರಂಪರೆಯನ್ನು ವರ್ಣಿಸುತ್ತೇನೆ ಕೇಳು. ಭಾರ್ಗವನ ಮೊದಲ ಶಿಷ್ಯ ಆತ್ರೇಯ. ಅವನ ಶಿಷ್ಯ ಕೌಥುಮಿಪುತ್ರ. ಇವನ ಶಿಷ್ಯ ಅಮರಾವರ್ತ. ಇವನ ಶಿಷ್ಯ ಸಿತ. ಸಿತನಿಗೆ ವಾಮದೇವ, ವಾಮದೇವನಿಗೆ ಕಪಿಷ್ಠಿಲ, ಕಪಿಷ್ಠಲನಿಗೆ ಜಗತ್ಸ್ಥಾಮ, ಜಗತ್ಸ್ಥಾಮನಿಗೆ ನರವರ, ನರವರನಿಗೆ ಶರಾಸನ, ಶರಾಸನನಿಗೆ ರಾವಣ, ರಾವಣನಿಗೆ ವಿದ್ರಾವಣ ಶಿಷ್ಯರು. ವಿದ್ರಾವಣನ ಪುತ್ರ (ಶಿಷ್ಯ) ದ್ರೋಣಾಚಾರ್ಯ. ಇವನು ಸಮಸ್ತಭಾರ್ಗವ ವಂಶೀಯರಿಂದಲೂ ವಂದ್ಯನು.ಇವನಿಗೆ ಅಶ್ವಿನಿಯೆಂಬ ಪತ್ನಿಯಿಂದ ಅಶ್ವತ್ಥಾಮನೆಂಬ ಮಗನಾದನು. ಈತನು ಮಹಾಧನುರ್ಧರನು. ಯುದ್ಧದಲ್ಲಿ ಅರ್ಜುನನೊಬ್ಬನೇ ಅವನಿಗೆ ಪ್ರತಿಸ್ಪರ್ಧಿಯಾಗಬಲ್ಲವನು.

ಆಮೇಲೆ ಅರ್ಜುನನ ಪ್ರತಾಪ ಮತ್ತು ವಿದ್ಯೆಯ ಬಗೆಗೆ ಮತ್ಸರಗೊಂಡ ದುರ್ಯೋಧನ ಮೊದಲಾದ ಕೌರವರು ಸಂಧಿಯಲ್ಲಿ ದೋಷವನ್ನಾರೋಪಿಸಲು ಉದ್ಯತರಾದರು. ಅವರು "ಕುರುವಂಶೀಯರ ರಾಜ್ಯಾರ್ಧವನ್ನು ಹಂಚಿಕೊಳ್ಳುವುದರಲ್ಲಿ ಅರ್ಧರಾಜ್ಯವನ್ನು ಒಂದು ಕಡೆ ಐದೇ ಮಂದಿ ಪಾಂಡವರು ಅನುಭವಿಸುವುದು, ಇನ್ನೊಂದು ಕಡೆ ಉಳಿದರ್ಧರಾಜ್ಯವನ್ನು ನೂರುಮಂದಿ ಸೋದರರೂ ಅನುಭವಿಸುವುದು-ಇದಕ್ಕಿಂತ ದೊಡ್ಡ ಅನ್ಯಾಯ ಏನುಂಟು ?" ಎಂದರು. ದುರ್ಯೋಧನಾದಿಗಳ ಈ ವಿಚಾರವನ್ನು ಪಾಂಡವರೂ ಕೇಳಿದರು. ಯುಧಿಷ್ಠಿರನು ಶಾಂತಿಪ್ರಿಯನಾದ. ವ್ಯಕ್ತಿ ಅವನು ಇದನ್ನು ಅಷ್ಟಾಗಿ ಹಚ್ಚಿಕೊಳ್ಳಲಿಲ್ಲ.ಆದರೆ ಉಳಿದ ನಾಲ್ವರು ಸೋದರರು ಪ್ರಸನ್ನ ಗಂಭೀರವ್ಯಕ್ತಿಗಳೇ ಆಗಿದ್ದರೂ ಈಗ ಬಿರುಗಾಳಿಗೆ ಕ್ಷುಬ್ಧಗೊಂಡ ಚತುಸ್ಸಮುದ್ರದಂತಾದರು. "ನಾನು ಮೇಲೆದ್ದು ಶತ್ರುಪರ್ವತವನ್ನೇ ಬಾಣವರ್ಷದಿಂದ ಈಗಿಂದೀಗ ಆಚ್ಛಾದಿಸಿ ಬಿಡುತ್ತೇನೆ" ಎನ್ನುತ್ತ ಅರ್ಜುನನೆದ್ದನು. ಯುಧಿಷ್ಠಿರನು ಅವನನ್ನು ಸಮಾಧಾನಮಾಡಿದನು. "ನಾನು ಈಗಿಂದೀಗಲೇ ನೂರಕ್ಕೆ ನೂರುಮಂದಿ ಪಾಲುದಾರರನ್ನೂ ನನ್ನ ದೃಷ್ಟಿಯಿಂದ ಭಸ್ಮಮಾಡಿ ಬಿಡುತ್ತೇನೆ" ಎಂದು ಭೀಮನು ನುಡಿದನು. ಯುಧಿಷ್ಠಿರನು ಇವನನ್ನೂ ಸಮಾಧಾನಮಾಡಿದನು. ನಕುಲನು "ಶತ್ರುಕುಲವನ್ನೇ ಕೊನೆಮುಟ್ಟಿಸುತ್ತೇನೆ" ಎಂದು ಉದ್ಯತನಾಗಲು ಅವನನ್ನಪ್ಪಿ ಯುಧಿಷ್ಠಿರನು ಸುಮ್ಮನಾಗಿಸಿದನು. ಸಹದೇವನು "ಶತ್ರುಗಳ ಅರಣ್ಯವನ್ನೇ ಸುಟ್ಟುರುಹುತ್ತೇನೆ" ಎಂದು ಮಸಗಿದನು. ಯುಧಿಷ್ಠಿರನು ಸಂತೈಸಿದನು. ಆಮೇಲೆ ಪಾಂಡವರೆಲ್ಲಾ ಶಾಂತಚಿತ್ತರಾಗಿ ಸುಮ್ಮನಾದರು.

ಕೆಲದಿನಗಳಾದ ಮೇಲೆ ಒಂದು ದಿನ ಪಾಂಡವರು ಗಾಢನಿದ್ರೆಯಲ್ಲಿ ಮಲಗಿದ್ದಾಗ ಕೌರವರು ಅವರ ಮನೆಗೆ ಬೆಂಕಿ ಹಾಕಿಸಿದರು. ಅಕಸ್ಮಾತ್ತಾಗಿ ಅವರು ನಿದ್ದೆ ತಿಳಿದೆಚ್ಚತ್ತು ತಾಯಿಯನ್ನೊಡಗೊಂಡು ಸುರಂಗದಿಂದ ಹೊರಬಿದ್ದು ನಿರ್ಭಯರಾಗಿ ಎಲ್ಲಿಗೋ ಹೋದರು. ಈ ಘಟನೆಯಿಂದ ಜನತೆಗೆ ದುರ್ಯೋಧನನ ಮೇಲೆ ದ್ವೇಷವುಂಟಾಯಿತು. ಆಮೇಲೆ ಕುಟುಂಬದ ಜನ ಪಾಂಡವರು ಆ ಬೆಂಕಿಯಲ್ಲಿ ಸಿಕ್ಕು ದಹಿಸಿ ಹೋದರೆಂದೇ ತಿಳಿದರು. ಅವರಿಗೆ ಅಪರಕ್ರಿಯೆಗಳನ್ನು ನಡಸಿ ನಿಶ್ಚಿಂತರಂತೆ ಇದ್ದುಬಿಟ್ಟರು.



ಇತ್ತ ಬುದ್ಧಿಶಾಲಿಗಳಾದ ಪಾಂಡವರು ಗಂಗಾನದಿಯನ್ನು ದಾಟಿಹೋಗಿ ವೇಷಾಂತರದಲ್ಲಿ ಪೂರ್ವದಿಕ್ಕಿನತ್ತ ನಡೆದರು. ತಾಯಿ ಕುಂತಿ ಮೆಲ್ಲಮೆಲ್ಲಗೆ ನಡೆಯಬೇಕಾಗಿತ್ತಾದ್ದರಿಂದ ತಾವೂ ಅದಕ್ಕನುಸಾರವಾಗಿ ಮೆಲ್ಲಗೆ ಸಾಗಿದರು. ಕೌಶಿಕನಗರ ಸೇರಿದರು. ಅಲ್ಲಿಯ ಅರಸು ವರ್ಣ. ಇವನ ಪತ್ನಿ ಪ್ರಭಾವತಿ. ಇವರಿಗೆ ಕುಸುಮಕೋಮಲೆ ಮಗಳು. ಪಾಂಡವರು ಜನಪ್ರಿಯರಾಗಿದ್ದುದರಿಂದ ಈ ಕನ್ಯೆಯೂ ಅವರ ಹೆಸರು ಕೇಳಿದ್ದಳು ; ಈಗ ಅವರನ್ನು ನೋಡಿದಳು. ಯುಧಿಷ್ಠಿರನನ್ನು ನೋಡಿ ಮನಸೋತಳು. "ಈತನೇ ಈ ಜನ್ಮದಲ್ಲಿ ನನ್ನ ಪತಿಯಾಗಲಿ" ಎಂದು ಸಂಕಲ್ಪಿಸಿದಳು. ಕನ್ನೆಯ ಅಭಿಪ್ರಾಯ ತಿಳಿದು ಯುಧಿಷ್ಠಿರನೂ ಅವಳಲ್ಲಿ ಆಸಕ್ತನಾಗಿ ಆಕೆಯನ್ನು ವಿವಾಹವಾಗುವ ಆಸೆಯನ್ನು ಸಂಕೇತದಿಂದ ಸೂಚಿಸಿ ಮುನ್ನಡೆದನು. ಕುಸುಮಕೋಮಲೆ ಅವನ ಪುನಸ್ಸಮಾಗಮವನ್ನು ನಿರೀಕ್ಷಿಸುತ್ತ ಕನ್ನೆಯರೊಂದಿಗೆ ಉಚಿತವಿನೋದಗಳಲ್ಲಿ ಕಾಲಕ್ಷೇಪಮಾಡುತ್ತಿದ್ದಳು.

ಆಮೇಲೆ ಪಾಂಡವರು ಬ್ರಾಹ್ಮಣವೇಷಧಾರಿಗಳಾಗಿ ಜನರ ಮನಸೆಳೆಯುತ್ತ ಮುನ್ನಡೆದರು. ಅವರೆಲ್ಲ ಪುಣ್ಯವಂತರಾದ್ದರಿಂದ ಹಾಗೆ ಅಜ್ಞಾತರಾಗಿದ್ದೂ ಅವರಿಗೆ ಆಸನ ಶಯನ ಭೋಜನಗಳು ಸುಖವಾಗಿ ಲಭಿಸುತ್ತಿದ್ದುವು. ಅವರು ತಾಪಸವೇಷದಲ್ಲಿ ಶ್ಲೇಷ್ಮಾಂತಕವೆಂಬ ವನವನ್ನು ಸೇರಿದರು. ಅಲ್ಲಿಯ ತಪೋವನದಲ್ಲಿ ವಿಶ್ರಾಂತಿ ಪಡೆದರು. ಅಲ್ಲಿಯ ತಪಸ್ವಿಗಳು ಅವರನ್ನು ಸತ್ಕರಿಸಿದರು. ವಸುಂಧರಪುರದರಸನಾದ ವಿಂಧ್ಯಸೇನನಿಗೆ ನರ್ಮದಾ ಎಂಬ ಪತ್ನಿಯಲ್ಲಿ ಹುಟ್ಟಿದ ವಸಂತ ಸುಂದರಿಯೆಂಬ ಪುತ್ರಿ ಆ ಆಶ್ರಮದಲ್ಲಿರುತ್ತಿದ್ದಳು. ಆಕೆಯ ಹಿರಿಯರು ಆಕೆಯನ್ನು ಯುಧಿಷ್ಠಿರನಿಗೆ ಕೊಡುವುದಾಗಿ ಮೊದಲೇ ಸಂಕಲ್ಪಿಸಿದ್ದರು. ಆದರೆ ಪಾಂಡವರು ಸುಟ್ಟುಹೋದರೆಂಬ ಸುದ್ದಿ ಕೇಳಿದಾಗ ಆಕೆ ತನ್ನ ಪೂರ್ವಕೃತ ಕರ್ಮವನ್ನು ನಿಂದಿಸಿಕೊಂಡು "ಆ ಪ್ರಾಣನಾಥನ ದರ್ಶನ ನನಗೆ ಈ ಜನ್ಮದಲ್ಲಿ ಲಭ್ಯವಾಗದಿದ್ದರೆ ಜನ್ಮಾಂತರದಲ್ಲಾದರೂ ಆಗಲಿ" ಎಂದುಕೊಂಡು ತಪಸ್ವಿಗಳ ಆ ಆಶ್ರಮದಲ್ಲಿ ತಪದಲ್ಲಿರುತ್ತಿದ್ದರು. ಆಕೆ ಸಮಸ್ತ ತಾಪಸದಿಂದಲೂ ಪೂಜ್ಯಳಾಗಿ ತಪಸ್ವಿನಿಯಂತೆ ಅಲ್ಲಿ ಇರುತ್ತಿದ್ದಳು. ಈಗ ಆಕೆ ತಾಪಸಯೋಗ್ಯ ರೀತಿಯಲ್ಲಿ ಪಾಂಡವರಿಗೆ ಅತಿಥಿಸತ್ಕಾರಮಾಡಿ ಅವರ ಕ್ಷುತ್ಪಿಪಾಸೆ ಮಾರ್ಗಾಯಾಸಗಳನ್ನು ಪರಿಹರಿಸಿದಳು.

ಒಂದು ದಿನ ಕುಂತಿ ಅತ್ಯಾದರದಿಂದ ಆಕೆಯನ್ನು ಕುರಿತು "ಕಮಲದಂತೆ ಕೋಮಲೆಯಾಗಿರುವ ಮಗಳೆ, ಈ ಎಳೆಯ ವಯಸ್ಸಿನಲ್ಲಿ ನಿನಗೆ ಏತಕ್ಕಾಗಿ ವೈರಾಗ್ಯವುಂಟಾಯಿತು ? ಈ ಕಠಿನವ್ರತವನ್ನು ಏಕೆ ಹಿಡಿದಿದ್ದೀಯೆ ?" ಎಂದು ಪ್ರಶ್ನಿಸಿದಳು. ಅದಕ್ಕೆ ಆ ಕನ್ಯೆ ಇಂತೆಂದಳು : "ಪೂಜ್ಯೆ, ನೀನು ಕೇಳಿದ್ದು ಸರಿಯೆ ; ನನ್ನ ವೈರಾಗ್ಯದ ಕಾರಣ ಕೇಳು : ಸಜ್ಜನರಲ್ಲಿ ಮನಸ್ಸಿನ ದುಃಖವನ್ನು ಹೇಳಿಕೊಂಡರೆ ಅವರು ಅದನ್ನು ಪರಿಹರಿಸುತ್ತಾರೆ. ನನ್ನ ಹಿರಿಯರು ನನ್ನನ್ನು ಮೊದಲೇ ಸ್ವಭಾವತಃ ಸಜ್ಜನರಾದ ಪಾಂಡವರಲ್ಲಿ ಹಿರಿಯನಾದ ಯುಧಿಷ್ಠಿರನಿಗಿತ್ತರು. ಆದರೆ ನನ್ನ ಪಾಪದ ಪ್ರಭಾವದಿಂದಾಗಿ ತಾಯಿ ತಮ್ಮಂದಿರೊಡನೆ ಆತನ ವಿಷಯವಾಗಿ ನಾನು ಜನರಿಂದ ಕೇಳಿರುವ ಸುದ್ದಿಯನ್ನು ಈಗ

ನಾನು ನೆನೆಯಲೂ ಆರೆ; ನನ್ನ ಪತಿ ದಹನದುಃಖದಿಂದ ಮರಣಿಸಲು ನನಗೂ ಹಾಗೆಯೇ ಮರಣಿಸುವುದು ಯುಕ್ತವಾಗಿತ್ತು. ಆದರೆ ನಾನು ಶಕ್ತಿಹೀನೆಯಾದ್ದರಿಂದ ಹಾಗೆ ಸಾಯಲಾಗದೆ ಈ ರೀತಿ ತಪಸ್ಸಿನಲ್ಲಿರುತ್ತಿದ್ದೇನೆ.'' ಈ ಮಾತು ಕೇಳಿ ಅವಳು ತನ್ನ ಭಾವಿ ಸೊಸೆಯೆಂದು ತಿಳಿದು ಕುಂತಿಯು ಅವಳನ್ನು ಹೀಗೆ ಸಮಾಧಾನಪಡಿಸಿದಳು : ''ಭದ್ರೆ, ನೀನು ಜೀವದಲ್ಲಿದ್ದು ಒಳ್ಳೆಯದೇ ಮಾಡಿದೆ. ಮಿತ್ರಜನರು ಮಿತ್ರಜನರ ವಿಚಾರದಲ್ಲಿ ತಾವೊಂದು ಬಗೆಯುತ್ತಾರೆ ; ವಿಧಿ ತಾನೊಂದು ಬಗೆಯುತ್ತದೆ. ಆದ್ದರಿಂದ ದೀರ್ಘದರ್ಶಿತ್ವ ಬೇಕು. ಜೀವಿಸಿರುವುದು ಕಲ್ಯಾಣಹೇತು. ಆದ್ದರಿಂದ ನನ್ನ ಮಾತು ಕೇಳು. ನೀನು ತಪಸ್ಸಿನಲ್ಲಿದ್ದೇ ಜೀವವನ್ನು ಹಿಡಿದಿರು ; ಜೀವದಿಂದಿದ್ದೆಯಾದರೆ ತಪ್ಪದೆ ಶುಭವನ್ನು ಕಾಣುತ್ತೀಯೆ.'' ಯುಧಿಷ್ಠಿರನು ತಾಯಿಯ ಮಾತನ್ನು ಅನುಮೋದಿಸಿ ಆಕೆಗೆ ಅಣುವ್ರತ ಶೀಲವ್ರತ ಗುಣವ್ರತಗಳಿಂದ ಕೂಡಿದ ಧರ್ಮವನ್ನುಉಪದೇಶಿಸಿದನು. ಅಗ ಅವರಿಬ್ಬರ ನಡುವೆ ಮನಃಪ್ರೀತಿಕರವಾಗಿ ನಡೆದ ಮಾತುಕತೆಯಿಂದ ಆ ಕನ್ಯೆ ''ರಾಜ ಲಕ್ಷಣಯುತನಾದ ಆ ಯುಧಿಷ್ಠಿರನು ಈತನೇ ಏನು ? ದಯಾವಂತನಾಗಿ ತಾಯಿ ಯೊಂದಿಗೆ ಹೀಗೆ ನನಗೆ ಉಪದೇಶಿಸುತ್ತಿದ್ದಾನೆ. ಈತನು ನನ್ನ ಪುಣ್ಯ ಅಥವಾ ತಪಸ್ಸಿನ ಫಲವಾಗಿಯೇ ಇಲ್ಲಿ ಕಾಣಿಸಿಕೊಂಡಿರಬೇಕು. ಈ ದೃಢಪ್ರತಿಜ್ಞನಿಗೆ, ಉದ್ಯಮ ಪ್ರಿಯನಿಗೆ, ಇಲ್ಲಿ ಯಾವ ಆಘಾತವೂ ಆಗದೆ ಈತನು ಬಹುಕಾಲ ಬದುಕಿರಲಿ'' ಎಂದು ಕೊಂಡಳು. ಪಾಂಡವರು ಅಲ್ಲಿಂದ ಹೊರಡಲು, ಆ ಕನ್ಯೆಯು ''ನಿಮ್ಮ ದರ್ಶನ ಪುನಃ ಪ್ರಾಪ್ತವಾಗಲಿ'' ಎಂದು ನುಡಿದು ಸತ್ಕರಿಸಿ ಬೀಳ್ಕೊಟ್ಟಳು. ಯುಧಿಷ್ಠಿರನ ಪ್ರಾಪ್ತಿಯ ಆಸೆಯಿಂದ ತಾನು ಅದೇ ತಪೋವನದಲ್ಲಿ ಇರುತ್ತಿದ್ದಳು.

ಇತ್ತ ಸಮುದ್ರವಿಜಯನು ತನ್ನ ತಂಗಿ ಮತ್ತು ತಂಗಿಯ ಮಕ್ಕಳನ್ನು ದುರ್ಯೋಧನನು ಸುಟ್ಟು ಕೊಂದುಹಾಕಿದನೆಂದು ಸುದ್ದಿ ತಿಳಿಯುತ್ತಲೂ ಕ್ರುದ್ಧನಾಗಿ ಕೌರವರನ್ನು ತಾನು ಕೊಂದಿಕ್ಕಲು ಹೊರಟುಬಂದನು. ಆಗ ಜರಾಸಂಧನು ತಾನೇ ಬಂದು ಯಾದವರಿಗೂ ಕೌರವರಿಗೂ ಸಂಧಿಮಾಡಿಸಿದನು. ಸಂಧಿಮಾಡಿಸಿ ತನ್ನ ರಾಜಧಾನಿಗೆ ಹೋದನು.

ಇತ್ತ ಪಾಂಡವರು ತಾಪಸವೇಷವನ್ನು ಬಿಟ್ಟು ಸಾಮಾನ್ಯ ಬ್ರಾಹ್ಮಣವೇಷದಲ್ಲಿ ಮುಂದೆ ಸಾಗಿದರು. ಈಹಾಪುರವನ್ನು ತಲುಪಿದರು. ಅಲ್ಲಿ ಭೃಂಗರಾಕ್ಷಸನೆಂಬ ನರ ಭಕ್ಷಕ ರಾಕ್ಷಸನೊಬ್ಬನು ಮನುಷ್ಯರಿಗೆ ಪೀಡೆಕೊಡುತ್ತಿದ್ದನು. ಭೀಮನು ಅವನನ್ನು ನಾಶಮಾಡಿ ಅಲ್ಲಿಯ ನಿವಾಸಿಗಳ ಭಯವನ್ನು ದೂರಮಾಡಿದನು. ಅವರು ಪಾಂಡವರನ್ನೂ ಕುಂತಿಯನ್ನೂ ವಿಶೇಷವಾಗಿ ಸತ್ಕರಿಸಿದರು.

ಅಲ್ಲಿಂದ ಮುಂದೆ ಸಾಗಿ ತ್ರಿಶೃಂಗನಗರವನ್ನು ಸೇರಿದರು. ಅಲ್ಲಿ ಪ್ರಚಂಡವಾಹನನೆಂಬವನು ಅರಸು. ಇವನ ಪತ್ನಿ ವಿಮಲಪ್ರಭೆ. ಇವರಿಗೆ ಗುಣಪ್ರಭಾ ಮೊದಲಾಗಿ ಹತ್ತುಮಂದಿ ಪುತ್ರಿಯರು. ಇವರು ರೂಪವತಿಯರು, ಕಲಾವತಿಯರು. ಇವರನ್ನು ಮೊದಲೇ ಯುಧಿಷ್ಠಿರನಿಗೆ ಪ್ರದಾನಮಾಡಲಾಗಿತ್ತು. ಆದರೆ ಆತನ ಬಗ್ಗೆ ಮುಂದೆ ಅನ್ಯಥಾ ಸಮಾಚಾರ ಬಂದದ್ದರಿಂದ, ಅವರೆಲ್ಲ ಅಣುವ್ರತ ಧರಿಸಿ ಶ್ರಾವಕಿಯರಾಗಿದ್ದರು.



ಅದೇ ತ್ರಿಶೃಂಗಪುರದಲ್ಲಿ ಪ್ರಿಯಮಿತ್ರನೆಂಬ ಶ್ರೀಮಂತ ವೈಶ್ಯನಿದ್ದನು. ಅವನು ಪಾಂಡವರನ್ನು ವಿಶೇಷವ್ಯಕ್ತಿಗಳೆಂದು ಭಾವಿಸಿ ಸತ್ಕರಿಸಿದನು. ಪ್ರಿಯಮಿತ್ರನಿಗೆ ಸೋಮಿನಿಯೆಂಬ ಪತ್ನಿಯಲ್ಲಿ ನಯನಸುಂದರಿಯೆಂಬ ಮಗಳಿದ್ದಳು. ಇವಳನ್ನು ಯುಧಿಷ್ಠಿರನಿಗೆ ಮೊದಲೇ ಕೊಡಲಾಗಿತ್ತು. ಆದ್ದರಿಂದ ಈಕೆಯೂ ಆ ರಾಜಪುತ್ರಿಯರಂತೆ ಅಣುವ್ರತಧರಿಸಿ ಇರುತ್ತಿದ್ದಳು. ಪ್ರಚಂಡವಾಹನನೂ ಸಪತ್ನೀಕನಾದ ಪ್ರಿಯಮಿತ್ರಶ್ರೇಷ್ಠಿಯೂ ಬ್ರಾಹ್ಮಣವೇಷದ ಪಾಂಡವರನ್ನು ಮಹಾಪುರುಷರೆಂದು ತಿಳಿದು ಮೆಚ್ಚಿ, ಅವರಲ್ಲಿ ಜ್ಯೇಷ್ಠಪುತ್ರನಾದ ಯುಧಿಷ್ಠಿರನಿಗೆ ತಮ್ಮೆಲ್ಲಾ ಕನ್ಯೆಯರನ್ನೂ ಕೊಡಲಿಚ್ಛಿಸಿದರು. ಆದರೆ ಕನ್ಯೆಯರು ತಮ್ಮ ಮನಸ್ಸಿನಲ್ಲಿಯೇ ''ಆ ಯುಧಿಷ್ಠಿರನು ಪರಲೋಕಗತನಾಗಿದ್ದರೂ ಸರಿಯೆ, ಈ ಭವದಲ್ಲಿ ಅವನೇ ನನ್ನ ಪತಿ. ಬೇರೆಯವರಲ್ಲ'' ಎಂದು ದೃಢನಿರ್ಧಾರ ಮಾಡಿಕೊಂಡಿದ್ದ ಕಾರಣ ಬ್ರಾಹ್ಮಣವೇಷಧಾರಿ ಯುಧಿಷ್ಠಿರನನ್ನು ಅನ್ಯಪುರುಷನೆಂದೇ ಭಾವಿಸಿ ಸ್ವೀಕರಿಸಲು ಒಪ್ಪಲಿಲ್ಲ.

ಪಾಂಡವರು ಮುಂದೆ ತೆರಳಿ ಕರ್ಣನೆಂಬರಸು ಆಳುತ್ತಿದ್ದ ಚಂಪಾಪುರಿಯನ್ನು ಸೇರಿದರು. ಒಂದು ಮದೋದ್ಧತ ಮಹಾಗಜವು ನಗರದಲ್ಲಿ ಉಪದ್ರವ ಮಾಡುತ್ತಿರಲು, ಭೀಮನು ಅದರೊಂದಿಗೆ ಕ್ರೀಡಿಸಿ, ಅದನ್ನು ಮದರಹಿತವಾಗಿ ಮಾಡಿದನು. ಈ ಶೌರ್ಯ ನೋಡಿ ಕರ್ಣನಿಗೆ ಗಾಬರಿಯಾಯಿತು.

ಮುಂದೆ ಪಾಂಡವರು ವೈದಿಶಪುರ ತಲುಪಿದರು. ಅಲ್ಲಿಯ ಅರಸು ವೃಷಧ್ವಜ ; ಯುವರಾಜ ದೃಢಾಯುಧ. ವೃಷಧ್ವಜನ ಪತ್ನಿ ದಿಶಾವಲಿ; ಇವರ ಮಗಳು ದಿಶಾನಂದೆ. ಒಂದು ದಿನ ರೂಪವಂತನಾದ ಭೀಮನು ಭಿಕ್ಷಾರ್ಥಿಯಾಗಿ ರಾಜಮಂದಿರಕ್ಕೆ ಹೋದನು. ಅಲ್ಲಿ ದೊರೆ ಇವನನ್ನು ನೋಡಿ, ಇವನಾರೋ ಮಹಾಪುರುಷನೆಂದು ತಿಳಿದನು. ತನ್ನ ಮಗಳನ್ನೂ ಅಂತಃಪುರದವರನ್ನೂ ಕರೆದುಕೊಂಡು ಭೀಮನೆದುರಿಗೆ ಬಂದು ವಿನಯದಿಂದ ''ಹೇ ಶ್ರೀಮಾನ್, ಈ ಕನ್ಯೆಯೇ ನಿಮಗೆ ಅನುರೂಪವಾದ ಭಿಕ್ಷೆ ; ಆದ್ದರಿಂದ ಇವಳನ್ನು ಸ್ವೀಕರಿಸಿ ; ಪಾಣಿಗ್ರಹಣಕ್ಕೆ ಕೈನೀಡಿ'' ಎಂದನು. ಅದಕ್ಕೆ ಭೀಮನು ''ಸರಿಯೆ ; ಈ ಭಿಕ್ಷೆ ಅಪೂರ್ವವಾದ್ದೇ ಇರಬಹುದಾದರೂ ಈ ಸಮಯದಲ್ಲಿ ಇಂಥ ಭಿಕ್ಷೆಯನ್ನು ಸ್ವೀಕರಿಸಲು ನಾನು ಸ್ವತಂತ್ರನಲ್ಲ''—ಎಂದು ಉತ್ತರವಿತ್ತು ಸ್ವಸ್ಥಾನಕ್ಕೆ ಹಿಂದಿರುಗಿ ಯುಧಿಷ್ಠಿರಾದಿಗಳಿಗೆ ಈ ವಿಷಯ ತಿಳಿಸಿದನು. ಅವರೆಲ್ಲ ಆ ನಗರದಲ್ಲಿ ಒಂದೂವರೆ ತಿಂಗಳ ಕಾಲವಿದ್ದು ಮುಂದೆ ನರ್ಮದೆಯನ್ನು ದಾಟಿ ವಿಂಧ್ಯಾಚಲವನ್ನು ಸೇರಿದರು.

ಆ ವಿಂಧ್ಯಾಚಲದ ನಡುವೆ ಒಂದು ಅಂತರದ್ವೀಪವಿತ್ತು. ಅದರ ಸಂಧ್ಯಾಕಾರವೆಂಬ ನಗರದಲ್ಲಿ ಹಿಡಂಬ ವಂಶೋತ್ಪನ್ನನಾದ ಸಿಂಹಘೋಷನೆಂಬರಸು ಇರುತ್ತಿದ್ದನು. ಅವನ ಪತ್ನಿ ಸುದರ್ಶನಾ. ಇವರ ಮಗಳು ಹೃದಯಸುಂದರಿ. ತ್ರಿಕೂಟಾಚಲದ ಒಡೆಯ ಮೇಘವೇಗನು ಆಕೆಯನ್ನು ಬಯಸಿ ಸಿಂಹಘೋಷನಿಗೆ ತನ್ನ ಬೇಡಿಕೆಯನ್ನು ಸಲ್ಲಿಸಿದನಾದರೂ ಅವಳನ್ನು ಪಡೆಯಲಾಗಿರಲಿಲ್ಲ. ಹೃದಯಸುಂದರಿಯ ವಿಷಯದಲ್ಲಿ ನೈಮಿತ್ತಿ

ಕರು “ವಿಂಧ್ಯಾಚಲದ ಮೇಲೆ ಗದಾವಿದ್ಯೆಯನ್ನು ಸಿದ್ಧಿಮಾಡಿಕೊಳ್ಳುವ ವಿದ್ಯಾಧರನನ್ನು ಯಾವಾತನು ಕೊಲ್ಲುತ್ತಾನೋ, ಆತನೇ ಈಕೆಗೆ ಪತಿಯಾಗತಕ್ಕವನು'' ಎಂದು ಹೇಳಿದ್ದರು. ಭೀಮನು ವಿಂಧ್ಯಾಚಲದ ಮೇಲೆ ಹೋಗಿ ನೋಡಲಾಗಿ ಒಬ್ಬ ವಿದ್ಯಾಧರನು ಒಂದು ವೃಕ್ಷಕೋಟರದಲ್ಲಿ ಕುಳಿತು ಗದೆಯನ್ನು ಸಿದ್ಧಿಸಿಕೊಳ್ಳುತ್ತಿರುವುದು ಕಂಡಿತು. ನೋಡುತ್ತಿದ್ದ ಹಾಗೆಯೇ ಭೀಮನು ಆ ಗದೆಯನ್ನು ಕೈಗೆ ತೆಗೆದುಕೊಂಡನು. ಅದರ ಪ್ರಹಾರದಿಂದ ಆ ಮರವನ್ನು ಒಂದೇ ಬಾರಿಗೆ ಉರುಳಿಸಿಬಿಟ್ಟನು. ಆಮೇಲೆ ಭೀಮನಿಗೆ ಹೃದಯಸುಂದರಿಯೊಡನೆ ಸಮಾಗಮವಾಯಿತು. ಹಿಡಂಬವಂಶೀಯನಾದ ಸಿಂಹಘೋಷ ರಾಜನೊಡನೆ ಪಾಂಡವರ ಈ ಸಂಬಂಧ ತುಂಬ ಹರ್ಷಪ್ರದವಾಯಿತು.

ಆಮೇಲೆ ಪಾಂಡವರು ದಕ್ಷಿಣದ ನಾನಾದೇಶಗಳಲ್ಲಿ ವಿಹರಿಸಿ ಹಸ್ತಿನಾಪುರಕ್ಕೆ ಹೋಗಲು ಉದ್ಯತರಾದರು. ದಾರಿ ನಡೆಯುತ್ತಿರುವಾಗ ಮಾಕಂದೀನಗರ ಸೇರಿದರು. ಅಲ್ಲಿಗೆ ಅವರು ಸೇರುವಾಗ ದೇವತೆಗಳ ವಿಭ್ರಮವನ್ನು ತಳೆದು ಶೋಭಿಸುತ್ತಿದ್ದರು. ಆ ನಗರದ ಅರಸು ದ್ರುಪದ. ಅವನ ಪತ್ನಿ ಭೋಗವತಿ. ಇವರಿಗೆ ಧೃಷ್ಟದ್ಯುಮ್ನ ಮೊದಲಾಗಿ ಅನೇಕ ಪುತ್ರರಿದ್ದರು. ಇವರು ಒಬ್ಬರಿಗಿಂತ ಒಬ್ಬರು ಬಲಿಷ್ಠರು. ಅದೇ ದಂಪತಿಗಳಿಗೆ ದ್ರೌಪದಿಯೆಂಬ ರೂಪವತಿಯೂ ಕಲಾವತಿಯೂ ಆದ ಪುತ್ರಿಯಿದ್ದಳು. ಎಲ್ಲಾ ರಾಜಪುತ್ರರೂ ಆಕೆಗೆ ಮರುಳುಗೊಂಡವರಾಗಿ ಕಾಣಿಕೆ ಸಹಿತವಾಗಿ ಬಂದು ಆಕೆಯನ್ನು ತಮಗಾಗಿ ಬೇಡುತ್ತಿದ್ದರು. ಆಗ ದ್ರುಪದನು “ಎಷ್ಟು ಮಂದಿಯೊಡನೆ ವಿರೋಧ ಕಟ್ಟಿಕೊಳ್ಳಲಾದೀತು'' ಎಂದು ಆಲೋಚಿಸಿ, ದಾಕ್ಷಿಣ್ಯ ಕೆಡುವುದೆಂಬ ಭಯದಿಂದ, ಕನ್ಯಾಪೇಕ್ಷಿಗಳಾದ ರಾಜಪುತ್ರರಿಗೆ ಚಂದ್ರಕಯಂತ್ರಭೇದನ(ಚಂದ್ರಕವೇಧ)ಕ್ಕಾಗಿ ಆಹ್ವಾನಿಸಿದನು. ದ್ರೌಪದಿಯ ಆಸೆಯಿಂದ ಕರ್ಣ ದುರ್ಯೋಧನ ಮೊದಲಾದರಸರೆಲ್ಲ ಮಾಕಂದೀನಗರದಲ್ಲಿ ಬಂದು ಸಂದಣಿಸಿದರು. ಆಗಲೇ ಸುರೇಂದ್ರವರ್ಧನನೆಂಬ ವಿದ್ಯಾಧರರಾಜನೊಬ್ಬನು ಕೂಡ ತನ್ನ ಮಗಳಿಗೆ ಯೋಗ್ಯವರನನ್ನು ಹುಡುಕಲು ಅಲ್ಲಿಗೆ ಬಂದನು. ದ್ರುಪದನ ಆಜ್ಞೆಯಂತೆ ವರಪರೀಕ್ಷೆಯ ಸಾಧನವಾಗಿ ಗಾಂಡೀವವೆಂಬ ಧನುಸ್ಸನ್ನು ನಿಶ್ಚಯಪಡಿಸಿದನು. “ಯಾವಾತನು ಚಂಡಗಾಂಡೀವ ಕೋದಂಡವನ್ನು ಬಗ್ಗಿಸುವುದರಲ್ಲಿ ಸಮರ್ಥನಾಗುವನೋ, ಆತನೇ ದ್ರೌಪದಿಗೆ ಪತಿಯಾಗುತ್ತಾನೆ'' ಎಂದು ಘೋಷಿಸಲಾಯಿತು. ಈ ಘೋಷಣೆ ಕೇಳಿ ದ್ರೋಣ ಕರ್ಣ ಮುಂತಾದರಸರು ಆ ಧನುವನ್ನು ಸುತ್ತಿಮುತ್ತಿಕೊಂಡರು. ಆ ದೇವತಾಧಿಷ್ಠಿತ ಚಾಪಯಷ್ಟಿಯನ್ನು ನೋಡುವುದೇ ಅವರಿಗೆ ಅಶಕ್ಯವಾಗಿತ್ತು, ಎಂದ ಮೇಲೆ ಮುಟ್ಟುವುದು, ಸೆಳೆಯುವುದರ ಮಾತೇನು ? ಹೀಗೆ ಎಲ್ಲರೂ ಆ ಪ್ರಯತ್ನದಲ್ಲಿ ಸೋತುಹೋಗಲು, ಅರ್ಜುನನು ಬಂದು ಅದನ್ನು ನೋಡಿ ಹಿಡಿದೆತ್ತಿ ಸೆಳೆದು ಬಗ್ಗಿಸಿ ಹೆದೆಯೇರಿಸಿ ಠಂಕಾರ ಮಾಡಿದನು. ಆ ಪ್ರಚಂಡಶಬ್ದಕ್ಕೆ ಕರ್ಣಾದ್ಯರಸರ ಕಣ್ಣುಗಳು ತಿರುಗಿ, ಕಿವಿ ಕಿವುಡಾಯಿತು. ಆತನನ್ನು ನೋಡಿ ಕರ್ಣಾದಿಗಳ ಮನಸ್ಸಿನಲ್ಲಿ, “ಅರ್ಜುನನು ತನ್ನ ಸೋದರರೊಡಗೂಡಿ ಆಗ ಸತ್ತವನು ಈಗ ಮತ್ತೇನಾದರೂ ಹುಟ್ಟಿಬಂದಿರುವನೇನು ?'' ಎನ್ನಿಸಿತು. ಅರ್ಜುನನಲ್ಲದೆ ಅನ್ಯ



ಸಾಮಾನ್ಯ ಬಿಲ್ಗಾರನಿಗೆ ಹಾಗೆ ನಿಲ್ಲಲಾದರೂ ಆದೀತೆ ? ಅರಸರು ಅವನ ದೃಷ್ಟಿಮುಷ್ಟಿ ಕೌಶಲಗಳನ್ನು ಮೆಚ್ಚಿಕೊಳ್ಳುತ್ತಿದ್ದರು. ಇತ್ತ ಅರ್ಜುನನು ಗಾಂಡೀವದ ಹೆದೆಗೆ ಬಾಣಹೂಡಿ ಚಲಿಸುವ ಚಕ್ರದ ಮೇಲೆ ತಟ್ಟೆಂದು ಏರಿ, ರಾಜರು ನೋಡು ನೋಡುತ್ತಿದ್ದಂತೆಯೇ, ಶೀಘ್ರದಲ್ಲಿ ಚಂದ್ರಕವೇಧವೆಂಬ ಲಕ್ಷ್ಯವನ್ನು ಭೇದಿಸಿಬಿಟ್ಟನು. ದ್ರೌಪದಿ ಆಗಲೇ ಬಂದು ಅವನಿಗೆ ವರಣಮಾಲೆ ಹಾಕಿದಳು. ಬೀಸುವ ಗಾಳಿಯ ಬಿರುಸಿಗೆ ಹಾರವು ಕಿತ್ತು ಸೂಸಿ ಅವನೊಂದಿಗೆ ಬಳಿಯೇ ನಿಂತಿದ್ದ ಪಂಚಪಾಂಡವರ ಮೇಲೂ ಹೋಗಿ ಬಿತ್ತು. ಅದನ್ನು ಕಂಡು ಅವಿವೇಕಿಗಳಾದ ಮನುಷ್ಯರು ಅವಳು ಆ ಐವರನ್ನೂ ವರಿಸಿದಳು ಎಂದು ಕೂಗಿ ಹೇಳಲು ಮೊದಲಿಟ್ಟರು. ಅರ್ಜುನನ ಬಳಿಯಲ್ಲಿ ದ್ರೌಪದಿ ವೃಕ್ಷದ ಬಳಿಯ ಲತೆಯಂತೆ ಶೋಭಿಸಿದಳು. ಆಮೇಲೆ ಆತನು ಆಕೆಯನ್ನು ರಾಜರ ಸಮಕ್ಷದಲ್ಲಿಯೇ ತನ್ನ ತಾಯೆಡೆಗೆ ಕರೆದೊಯ್ದನು. ಆ ಸಮಯದಲ್ಲಿ ಯುದ್ಧೋತ್ಸುಕರಾದ ಅರಸರನ್ನು ನೀತಿಚತುರನಾದ ದ್ರುಪದನು ತಡೆದನು. ಆದರೂ ಎಷ್ಟೋ ಅರಸರು ಕೇಳದೆ ದರ್ಪದಿಂದ ಅರ್ಜುನನನ್ನು ಇದಿರಿಸಿದರು. ಆಗ ಅರ್ಜುನ ಭೀಮ ಧೃಷ್ಟದ್ಯುಮ್ನ ಈ ಮೂವರು ಧನುರ್ಧರರೂ ಅವರನ್ನು ದೂರದಿಂದಲೇ ತಡೆದರು. ಹಿಂದಕ್ಕಾಗಲಿ ಮುಂದಕ್ಕಾಗಲಿ ಒಂದೇ ಒಂದುಹೆಜ್ಜೆ ಇಡಲಾಗದಂತೆ ತಡೆದುಬಿಟ್ಟರು. ಆಮೇಲೆ ಧೃಷ್ಟದ್ಯುಮ್ನನ ರಥದಲ್ಲಿ ಕುಳಿತು ಅರ್ಜುನನು ಸ್ವನಾಮಾಂಕಿತ ಹಾಗೂ ಸರ್ವಸಂಬಂಧ ಸೂಚಕವಾದ ಬಾಣವೊಂದನ್ನು ದ್ರೋಣಾಚಾರ್ಯರ ಮಡಿಲಿಗೆಸೆದನು. ದ್ರೋಣ ಅಶ್ವತ್ಥಾಮ ಭೀಷ್ಮ ವಿದುರರು ಅದನ್ನೋದಿನೋಡಿದಾಗ ಪರಮಹರ್ಷಿತರಾದರು. ಪಾಂಡವರ ಸಮಾಗಮವಾಗುತ್ತಲೂ ದ್ರುಪದ ರಾಜನಿಗೂ ಕುಟುಂಬದವರಿಗೂ ದ್ರೋಣಾದಿಗಳಿಗೂ ಆನಂದವಾಯಿತು. ಶಂಖಾದಿಗಳ ಧ್ವನಿಗಳಾದುವು. ದುರ್ಯೋಧನಾದಿಗಳು ಮೇಲೆಮೇಲೆ ಸ್ನೇಹವನ್ನು ತೋರಿಸಿ ಪಾಂಡವರನ್ನು ಅಭಿನಂದಿಸಿದರು. ಅರ್ಜುನನು ದ್ರೌಪದಿಯ ಪಾಣಿಗ್ರಹಣ ಮಾಡಿದನು. ಅರಸರೆಲ್ಲ ಅರ್ಜುನ ದ್ರೌಪದಿಯರ ವಿವಾಹ ಮಂಗಲವನ್ನು ನೋಡಿಕೊಂಡು ತಂತಮ್ಮೆಡೆಗಳಿಗೆ ಹೋದರು. ದುರ್ಯೋಧನನೂ ಪಾಂಡವರನ್ನೊಡಗೊಂಡು ಹಸ್ತಿನಾಪುರಕ್ಕೆ ಹೋದನು. ದುರ್ಯೋಧನಾದಿ ನೂರ್ವರು ಸೋದರರೂ ಪಾಂಡವರೂ ಅರ್ಧ-ಅರ್ಧ ರಾಜ್ಯವನ್ನು ಹಂಚಿಕೊಂಡು ಮತ್ತೆ ಮುನ್ನಿನಂತೆಯೇ ಇರತೊಡಗಿದರು. ಉಜ್ವಲಚರಿತ್ರರಾದ ಯುಧಿಷ್ಠಿರ ಭೀಮಸೇನರು ಮೊದಲು ತಮ್ಮ ಅಜ್ಞಾತವಾಸ ಸಮಯದಲ್ಲಿ ತಮತಮಗೆ ಯೋಗ್ಯರಾದ ಯಾವ ಕನ್ಯೆಯರನ್ನು ಸ್ವೀಕರಿಸಲು ಆಶ್ವಾಸನವಿತ್ತಿದ್ದರೋ ಅವರನ್ನು ಕರೆಸಿಕೊಂಡು ವಿವಾಹವಾಗಿ ಅವರನ್ನು ಸಂತಸಗೊಳಿಸಿದರು.

ದ್ರೌಪದಿ ಅರ್ಜುನನ ಪತ್ನಿಯಾಗಿದ್ದು, ಅವಳ ಮೇಲೆ ಯುಧಿಷ್ಠಿರ ಭೀಮಸೇನರಿಗೆ ಸೊಸೆಯೆಂಬ ಭಾವವಿತ್ತು ; ಸಹದೇವ ನಕುಲರಾದರೋ ಆಕೆಯನ್ನು ತಾಯಿಗೆ ಸಮಾನಳಾಗಿ ತಿಳಿಯುತ್ತಿದ್ದರು. ದ್ರೌಪದಿಗೂ ಯುಧಿಷ್ಠಿರ ಭೀಮರ ಮೇಲೆ ಪಾಂಡುವಿನ ಸಮಾನವಾಗಿ ಮಾವಂದಿರೆಂಬ ಭಾವನೆಯಿತ್ತು. ಸಹದೇವ ನಕುಲರ ಮೇಲೆ ಮೈದುಂದಿ

ರೆಂಬ ಅಕ್ಕರೆಯಿತ್ತು. ಮಹಾಪುರುಷರಾದ ಪಾಂಡವರಲ್ಲಿ ಹೀಗಲ್ಲದೆ ಮಿಥ್ಯಾರೋಪ
ಕಥನವನ್ನು ಮಾಡುವ ದುಷ್ಟರ ನಾಲಗೆ ಶತಖಂಡವಾಗದೆ ಬಿಡುವುದೇ ?

## ೪೬. ಕೀಚಕನಿರ್ವಾಣಗಮನ

ಆಮೇಲೆ ಶೂರ ಪಾಂಡವರು ಹಸ್ತಿನಾಪುರದಲ್ಲಿ ಸುಖವಾಗಿ ಕೆಲಕಾಲ ಕಳೆದರು
ಅವರು ದಿನದಿನಕ್ಕೆ ಏಳಿಗೆ ಹೊಂದುತ್ತಿರುವುದನ್ನು ಕಂಡು ಕೌರವರಿಗೆ ಮೊದಲಿನಂತೆಯೇ
ಸಹಿಸದಾಯಿತು. ಒಮ್ಮೆ ಶಕುನಿಯ ಉಪದೇಶದಿಂದ ದುರ್ಯೋಧನನು ಯುಧಿಷ್ಠಿರನನ್ನು
ದ್ಯೂತದಲ್ಲಿ ಬೇಗ ಗೆದ್ದುಬಿಟ್ಟನು. ಗೆದ್ದಮೇಲೆ ತನ್ನ ತಮ್ಮಂದಿರೊಡನೆ ಸೇರಿಕೊಂಡು
ಭೀಮಾದಿ ತಮ್ಮಂದಿರೊಡನಿದ್ದ ಯುಧಿಷ್ಠಿರನಿಗೆ, "ಎಲೈ ಯುಧಿಷ್ಠಿರ, ನೀನಾದರೋ
ಸತ್ಯವಾದಿ. ನೀನು ಮಾಡಿದ ಪ್ರತಿಜ್ಞೆ ಎಂದಿಗೂ ಸುಳ್ಳಾಗದು. ಆದ್ದರಿಂದ ನೀನು ನಿನ್ನ
ಪ್ರತಿಜ್ಞೆಯಂತೆ ಇಲ್ಲಿಂದ ಹೊರಟುಹೋಗಬೇಕು. ಅಲ್ಲದೆ ತಲೆಮರೆಸಿಕೊಂಡು ನಿನ್ನ
ಹೆಸರು ಕೂಡ ಕೇಳಿಬರದಂಥ ಕಡೆ ಇದ್ದುಕೊಳ್ಳಬೇಕು" ಎಂದನು. ಇದನ್ನು ಕೇಳಿ
ಭೀಮಸೇನಾದಿಗಳು ಮುನಿಗಿದರು. ಆದರೆ ಯುಧಿಷ್ಠಿರನು ಅವರನ್ನು ಶಾಂತಗೊಳಿಸಿದನು.
೧೨ ವರ್ಷಗಳ ದೀರ್ಘಾವಧಿಗಾಗಿ ಎಲ್ಲ ರಾಜ್ಯಕೋಶವನ್ನೂ ಬಿಟ್ಟು ಹಸ್ತಿನಾಪುರದಿಂದ
ಹೊರಟನು. ಅರ್ಜುನನನ್ನು ದ್ರೌಪದಿ ಸಂತೋಷದಿಂದ ಅನುಸರಿಸಿದಳು.

ಆಮೇಲೆ ಪಾಂಡವರು ಕಾಲಾಂಜಲಾ ಎಂಬ ಅರಣ್ಯವನ್ನು ಸೇರಿದರು.ಆ ಸಮಯ
ದಲ್ಲಿ ಅಲ್ಲಿ ಪ್ರಕೀರ್ಣಕಾಸುರಿಯ ಮಗನಾದ ಸುತಾರನೆಂಬ ವಿದ್ಯಾಧರನು ಅಸುರೋದ್ಗೀತ
ನಗರದಿಂದ ಬಂದು ಕ್ರೀಡಿಸುತಿದ್ದನು. ಅವನು ಶಾಬರವಿದ್ಯೆ ಬಲ್ಲವನು. ಆದ್ದರಿಂದ
ಕಿರಾತವೇಷದಲ್ಲಿ ತನ್ನ ಕುಸುಮಾವಲಿಯೆಂಬ ಪತ್ನಿಯೊಡನೆ ಕ್ರೀಡಿಸುತ್ತಿದ್ದನು.
ಅವಳೂ ಕಿರಾತೆಯ ವೇಷದಲ್ಲಿರುತ್ತಿದ್ದಳು. ಧನುರ್ಧರನಾದ ಅರ್ಜುನನು ಆ ಧನುರ್ಧರ
ನಾದ ವಿದ್ಯಾಧರನನ್ನು ನೋಡಿದನು. ಅವರು ಅಕಸ್ಮಾತ್ ಪರಸ್ಪರರನ್ನು ನೋಡು
ತ್ತಲೂ, ಅವರಿಗೆ ಉಗ್ರಯುದ್ಧವೇ ಘಟಿಸಿತು. ದಿಕ್ಕುಗಳು ದಿವ್ಯಬಾಣಗಳಿಂದ ಕವಿದುವು.
ಅವರ ನಡುವೆ ಆಮೇಲೆ ಬಾಹುಯುದ್ಧವಾಯಿತು. ಬಲಿಷ್ಠನಾದ ಅರ್ಜುನನು ದೃಢ
ಮುಷ್ಟಿಯಿಂದ ಆ ಬಲಿಷ್ಠ ವಿದ್ಯಾಧರನ ಎದೆಯ ಮೇಲೆ ಬಲವಾಗಿ ಹೊಡೆದನು. ಇದ
ರಿಂದ ಗಾಬರಿಗೊಂಡ ಕುಸುಮಾವಲಿ ಅರ್ಜುನನಲ್ಲಿ ಪತಿಭಿಕ್ಷೆ ಬೇಡಿದಳು. ಅರ್ಜುನನು
ಅವನನ್ನು ಬಿಟ್ಟುಬಿಟ್ಟನು. ಆ ವಿದ್ಯಾಧರನು ವಂದಿಸಿ ವಿಜಯಾರ್ಧದ ದಕ್ಷಿಣಶ್ರೇಣಿಗೆ
ಹೋದನು.

ಆಮೇಲೆ ಪಾಂಡವರು ಸಿಂಹನೆಂಬರಸು ಆಳುತ್ತಿದ್ದ ಮೇಘದಲನಗರವನ್ನು ಸೇರಿ
ದರು. ಸಿಂಹನ ಪತ್ನಿ ಕನಕಮೇಖಲೆ. ಇವರಿಗೆ ಮಗಳು ಕನಕಾವರ್ತೆ. ಅದೇ ನಗರದಲ್ಲಿ
ಮೇಘನೆಂಬ ವೈಶ್ಯನಿಗೆ ಅಲಕಾ ಎಂಬ ಪತ್ನಿಯಲ್ಲಿ ಚಾರುಲಕ್ಷ್ಮಿಯೆಂಬ ಮಗಳಿದ್ದಳು.
ನೈಮಿತ್ತಿಕರ ಆದೇಶಾನುಸಾರವಾಗಿ, ಭಿಕ್ಷಾರ್ಥಿಯಾಗಿ ಹೋದ ಭೀಮಸೇನನು ಆ ಕನ್ಯೆ
ಯರನ್ನು ಪ್ರಾಪ್ತಮಾಡಿಕೊಂಡನು. ಪಾಂಡವರು ಅಲ್ಲಿ ಕೆಲಕಾಲ ವಿಶ್ರಮಿಸಿಕೊಂಡರು.



ಆಮೇಲೆ ಸಾಗಿ ಕೌಶಲದೇಶ ಸೇರಿದರು. ಅಲ್ಲಿಯೂ ಕೆಲವು ತಿಂಗಳ ಕಾಲ
ತಂಗಿದ್ದು, ಆಮೇಲೆ ರಾಮಲಕ್ಷ್ಮಣರಿಂದ ಸೇವ್ಯವಾದ ರಾಮಗಿರಿಯನ್ನು ಸೇರಿದರು. ಆ
ಪರ್ವತದ ಮೇಲೆ ರಾಮಚಂದ್ರಕೃತವಾದ ನೂರಾರು ಜಿನಮಂದಿರಗಳಿದ್ದುವು. ಪಾಂಡ
ವರು ಅಲ್ಲಿಯ ಜಿನಪ್ರತಿಮೆಗಳಿಗೆ ವಂದಿಸಿದರು. ಆ ಗಿರಿಯ ಸುಂದರ ಲತಾಗೃಹಗಳಲ್ಲಿ
ಅರ್ಜುನದ್ರೌಪದಿಯರು ಕ್ರೀಡಿಸಿದರು. ಭಾಗ್ಯವಂತರಾದ ಪಾಂಡವರು ಆ ಗಿರಿಯ ಮೇಲೆ
೧೧ ವರ್ಷ ಕಾಲ ಕಳೆದರು.

ಮುಂದೆ ಅಲ್ಲಿಂದ ಸಾಗಿ ವಿರಾಟನಗರವನ್ನು ಸೇರಿದರು. ಅಲ್ಲಿಯ ಅರಸು ವಿರಾಟ
ನೆಂಬವನು. ಅವನ ಪತ್ನಿ ಸುದರ್ಶನಾ. ಪಾಂಡವರೂ ದ್ರೌಪದಿಯೂ ಅವ್ಯಕ್ತರೀತಿ
ಯಿಂದ ಅಲ್ಲಿ ಇದ್ದುಕೊಂಡು, ವಿರಾಟನಿಂದ ಸತ್ಕೃತರಾದರು. ಹೀಗೆ ವಿನೋದದಿಂದ
ಅಲ್ಲಿರುತ್ತ ಪ್ರಮಾದರಹಿತರಾದ ಪಾಂಡವರು ಸುಖದಲ್ಲಿ ಕಾಲಕಳೆಯುತ್ತಿರಲು, ಅವರ
ಸಂಬಂಧವಾದೊಂದು ಘಟನೆ ನಡೆಯಿತು :

ಚೂಲಿಕಾ ನಗರದಲ್ಲಿ ಚೂಲಿಕನೆಂಬವನು ಅರಸು. ಇವನ ಪತ್ನಿ ವಿಕಚಾ. ಇವಳು
ನೂರು ಮಕ್ಕಳ ತಾಯಿ. ಇವರಲ್ಲಿ ಸರ್ವಜ್ಯೇಷ್ಠನ ಹೆಸರು ಕೀಚಕ. ಇವನು ಚಂಡ
ಕರ್ಮಿಗಳ ಅಗ್ರಣಿ ; ರೂಪಯೌವನಾದಿಗಳಿಂದ ಮದಿಸಿದವನು. ಒಮ್ಮೆ ಈತನು ತನ್ನ
ಸೋದರಿ ಸುದರ್ಶನೆಯನ್ನು ನೋಡುವ ಸಲುವಾಗಿ ವಿರಾಟನಗರಕ್ಕೆ ಬಂದನು. ಅಲ್ಲಿ
ಅವನು ದ್ರೌಪದಿಯನ್ನು ನೋಡಿದನು. ಆಗ ದ್ರೌಪದಿ ಗಂಧಯುಕ್ತಿವಿಶೇಷದಿಂದ ದಿಕ್ಕು
ಗಳನ್ನು ಸುಗಂಧೀಕೃತ ಮಾಡಿದ್ದಳು. ಆಕೆ ರೂಪ ಲಾವಣ್ಯ ಸೌಭಾಗ್ಯ ಗುಣಸಂಪನ್ನೆ.
ಕೀಚಕನು ಮಾನಿಷ್ಠನಾಗಿಯೂ ದ್ರೌಪದಿಯ ದರ್ಶನಮಾತ್ರದಿಂದ ಆಕೆಯ ವಿಷಯ
ದಲ್ಲಿ ಈಗ ದೀನನಾದನು. ಅವನು ಅಲ್ಲಿಂದ ಬೇರೆಡೆಗೆ ಹೋದರೂ ಮನಸ್ಸು ದ್ರೌಪದಿ
ಯತ್ತಲೇ ಇರುತ್ತಿತ್ತು. ಆದ್ದರಿಂದ ಅವನು ಅನೇಕ ಉಪಾಯಗಳಿಂದ ಅವಳನ್ನು ತಾನೆ
ಲುಬ್ಧಗೊಳಿಸಿದನು. ಅನ್ಯರ ಮೂಲಕ ಪ್ರಲೋಭನ ಉಂಟುಮಾಡಿದನು. ಆದರೆ ಅವ
ಳನ್ನು ಒಲಿಸಲಾಗಲಿಲ್ಲ. ಅವಳು ಅವನ್ನೆಲ್ಲ ತೃಣದಂತೆ ತುಚ್ಛವಾಗಿ ಭಾವಿಸಿ ನಿಷೇಧಿಸಿ
ಬಿಟ್ಟಿದ್ದಳು. ಹಾಗಾದರೂ ಕೀಚಕ ತನ್ನ ಧಾರ್ಷ್ಟ್ಯವನ್ನು ಬಿಡಲಿಲ್ಲ. ಇದರಿಂದ ಬೇಸತ್ತು
ಶೈಲಂಧ್ರಿ ವೇಷದ ದ್ರೌಪದಿ ಒಂದುದಿನ ಅವನ ಈ ಕೆಟ್ಟಹಟದ ದೂರನ್ನು ಭೀಮಸೇನ
ನಿಗೆ ಮುಟ್ಟಿಸಿದಳು. ಸರಿ ಕೇಳುವುದೇನು ! ಭೀಮಸೇನನ ಹೃದಯ ಕ್ರೋಧದಿಂದ ಕುದಿ
ಯಿತು. ಅವನು ದ್ರೌಪದಿಯ ಮೂಲಕ ಕೀಚಕನಿಗೆ ಸಂಕೇತಮಾಡಿಸಿ, ತಾನು ಅವನನ್ನು
ಸಾಯಂಕಾಲ ಏಕಾಂತಸ್ಥಾನದಲ್ಲಿ ಭೇಟಿಯಾಗಲು ಅವಕಾಶ ಕಲ್ಪಿಸಿಕೊಂಡನು. ಶೈಲಂ
ಧ್ರಿಯ ವೇಷದಲ್ಲಿ ತಾನು ಆ ಸ್ಥಳವನ್ನು ಸೇರಿದನು.ಭೀಮನಾದರೋ ಮಹಾಬಲಿಷ್ಠನು.
ಕಾಮಾತುರನಾದ ಕೀಚಕನು ಸಂಕೇತಸ್ಥಾನಕ್ಕೆ ಬಂದನು. ಸ್ಪರ್ಶಸುಖದ ಅತಿರೇಕದಿಂದ
ನಿಮೀಲಿತನೇತ್ರನಾದ ಆ ಕೀಚಕನ ಕುತ್ತಿಗೆಯನ್ನು ದ್ರೌಪದಿಯ ವೇಷದ ಭೀಮಸೇನನು
ತನ್ನೆರಡೂ ತೋಳುಗಳಿಂದಪ್ಪಿ,ಅವನನ್ನು ನೆಲಕ್ಕೆ ಕೆಡವಿಕೊಂಡು, ಅವನ ಎದೆಯ ಮೇಲೆ
ಹತ್ತಿನಿಂತನು. ಮುಷ್ಟಿಘಾತಗಳಿಂದ ಅವನನ್ನು ಹಣ್ಣುಗಾಯಿನೀರುಗಾಯಿ ಮಾಡಿದನು.

ಹೀಗೆ ಅವನ ಪರಸ್ತ್ರೀವಿಷಯಾಕಾಂಕ್ಷೆಯನ್ನು ಪೂರೈಸಿ ಭೀಮನು ಆಮೇಲೆ ದಯೆಯಿಂದ "ಛೀ ಪಾಪಿ! ತೊಲಗು" ಎಂದುಹೇಳಿ ಬಿಟ್ಟುಬಿಟ್ಟನು.

ಆ ವಿಷಯಾಕಾಂಕ್ಷೆಯ ಪರಿಣಾಮದಿಂದ ಕೀಚಕನು ಅತ್ಯಂತ ವೈರಾಗ್ಯಗೊಂಡು ರತಿವರ್ಧನರೆಂಬ ಮುನಿಗಳಲ್ಲಿಗೆ ಹೋಗಿ ದೀಕ್ಷಾಗ್ರಹಣ ಮಾಡಿದನು. ಕೀಚಕಮುನಿ ಅನುಪ್ರೇಕ್ಷೆಗಳ ಮೂಲಕ ಆತ್ಮಭಾವನೆಯನ್ನು ಮಾಡುತ್ತ, ಶಾಸ್ತ್ರಾಭ್ಯಾಸ ಮಾಡುತ್ತ ಭಾವಶುದ್ಧಿಯ ಮೂಲಕ ರತ್ನತ್ರಯಗಳ ಶುದ್ಧಿಗೆ ಉದ್ಯುಕ್ತನಾದನು.

ಕೀಚಕನ ನೂರುಮಂದಿ ಸೋದರರು ಕೀಚಕನನ್ನು ಕಾಣದೆ ಗಾಬರಿಗೊಂಡರು. ಎಲ್ಲೆಲ್ಲಿ ಹುಡುಕಿದರೂ ಎಲ್ಲಿಯೂ ಕಾಣಿಸಲಿಲ್ಲ. ಒಂದು ಕಡೆ ಒಂದು ಉರಿಯುತ್ತಿದ್ದ ಚಿತೆಯ ಅಗ್ನಿಯನ್ನು ನೋಡಿದರು. ಅದು ಕೀಚಕನದೇ ಚಿತೆಯೆಂದು ಯಾರೋ ಹೇಳಿದರು. ಇದನ್ನು ಕೇಳಿ ಅವರು ತುಂಬ ಕ್ರುದ್ಧರಾದರು. ಕೀಚಕನ ಈ ಸ್ಥಿತಿಗೆ ಈ ಶೈಲಂಧ್ರಿಯೇ ಕಾರಣಳೆಂದು ಅವರು ಚಿಂತಿಸಿ, ಕೆರಳಿ, ಆ ಶೈಲಂಧ್ರಿಯನ್ನು ಅದೇ ಚಿತೆಯಲ್ಲಿ ಹಾಕಿಬಿಡಲು ಇಚ್ಛಿಸಿದರು. ಆದರೆ ಭೀಮಸೇನನು ತಾನೇ ಅವರೊಬ್ಬೊಬ್ಬರನ್ನೂ ಎತ್ತಿ ಉರಿಯುವ ಚಿತೆಗೆ ಹಾಕಿದನು. ಅವರೆಲ್ಲ ಸುಟ್ಟು ಬೂದಿಯಾದರು. ಹೀಗೆ ಭೀಮನೊಬ್ಬನೇ ಮದೋದ್ಧತರಾದ ಹಲವರನ್ನು ನಾಮಾವಶೇಷಮಾಡಿದನು.

ಆಮೇಲೆ ಎಂದೋ ಒಂದು ದಿನ ಕೀಚಕಮುನಿ ಉಪವನಮಧ್ಯದಲ್ಲಿ ಒಬ್ಬನೇ ಕುಳಿತಿದ್ದನು. ಅವನು ಪದ್ಮಾಸನ ಮಾಡಿಕೊಂಡು ಯೋಗಾರೂಢನಾಗಿ ಚಲಿಸದೆ ಕುಳಿತಿರುವಾಗ, ಒಬ್ಬ ಯಕ್ಷನು ನೋಡಿದನು. ಅವನ ಮನಸ್ಸನ್ನು ಪರೀಕ್ಷಿಸಲೆಂದು ಅರ್ಧರಾತ್ರಿಯ ವೇಳೆ ದ್ರೌಪದಿಯ ರೂಪದಲ್ಲಿ ಅವನೆಡೆಗೆ ಬಂದು ಮದನಾಲಸವಾದ ರೂಪು ತೋರಿದನು. ಆದರೆ ಕೀಚಕಮುನಿ ಆ ದ್ರೌಪದಿಯ ಮಧುರಾಲಾಪವನ್ನು ಕೇಳುವುದರಲ್ಲಿ ಬಧಿರನಂತಾದನು; ಮನೋಹರಾಕೃತಿಯನ್ನು ನೋಡುವುದರಲ್ಲಿ ಕುರುಡನಂತಾದನು. ಆ ಸಂಯಮಿಯೂ ಶುದ್ಧಚೇತಸನೂ ಆದ ಮುನಿಗೆ ಆಗಲೇ ಅವಧಿಜ್ಞಾನ ಉಂಟಾಯಿತು. ಧ್ಯಾನಸಮಾಪ್ತಿಯ ಅನಂತರ ಯಕ್ಷನು ಅವರಿಗೆ ವಂದಿಸಿ "ಹೇ ಸ್ವಾಮಿ' ನನ್ನನ್ನು ಕ್ಷಮಿಸಿ" ಎಂದು ಸಲಸಲಕ್ಕೆ ಹೇಳಿ ಕ್ಷಮೆ ಬೇಡಿದನು. ಆಮೇಲೆ ಯಕ್ಷನು ಮುನಿಯನ್ನು ದ್ರೌಪದಿಯ ಮೇಲೆ ಆತನಿಗೆ ಮೋಹ ಉತ್ಪನ್ನವಾಗಲು ಕಾರಣವೇನೆಂದು ಪ್ರಶ್ನಿಸಿದನು. ಏಕೆಂದರೆ ನಿಷ್ಕಾರಣವಾಗಿ ಅಂಥ ಮೋಹವುಂಟಾಗುವುದು ಶಕ್ಯವಲ್ಲ· ಕೀಚಕನು ಯಕ್ಷನಿಗೆ ದ್ರೌಪದಿಯ ಕೆಲವು ಪೂರ್ವಜನ್ಮಗಳನ್ನು ಹೀಗೆ ವಿವರಿಸಿದನು:

"ಹಿಂದೆ ಒಂದು ಬಾರಿ ನಾನು ತರಂಗಿಣೀನದಿಯ ತಟದ ಮೇಲೆ ವೇಗವತಿಯ ಸಂಗಮಸ್ಥಾನದಡೆಯಲ್ಲಿ ಕ್ಷುದ್ರನೆಂಬ ಮ್ಲೇಚ್ಛನಾಗಿದ್ದೆ. ಆಗ ರೌದ್ರಪರಿಣಾಮದವನಾಗಿದ್ದೆ. ಒಮ್ಮೆ ಆಕಸ್ಮಿಕವಾಗಿ ಮುನಿದರ್ಶನವಾಗಿ ಉಪಶಮಗೊಂಡೆನು; ವೈಶ್ಯಕುಲದಲ್ಲಿ ಮನುಷ್ಯಜನ್ಮ ಪಡೆದೆನು. ಆಗ ನನ್ನ ತಂದೆ ಧನದೇವ, ತಾಯಿ ಸುಕುಮಾರಿಕೆ. ನನ್ನ ಹೆಸರು ಕುಮಾರದೇವ. ಒಮ್ಮೆ ನಮ್ಮ ತಾಯಿ ವಿಷಮಿಶ್ರಿತ ಆಹಾರವಿತ್ತು ಸುವ್ರತನೆಂಬ ಮುನಿಯನ್ನು ಕೊಂದಳು. ಪರಿಣಾಮವಾಗಿ ಆ ಪಾಪಿ ನರಕಕ್ಕೆ ಇಳಿದಳು.



ಆಮೇಲೆ ಹೀಗೆಯೇ ಅವಳು ತಿರ್ಯಗ್ನಾರಕ ಗತಿಗಳಲ್ಲಿ ತೊಳಲುತ್ತಿದ್ದಳು. ನಾನು ಕೂಡ ಸಂಯಮರಹಿತನಾಗಿದ್ದು ಸಂಸಾರದಲ್ಲಿ ತೊಳಲಾಡುತ್ತ, ನಮ್ಮ ತಾಯಿಜೀವಕ್ಕೆ ನಾಯಾಗಿ ಹುಟ್ಟಿದೆ. ಆಮೇಲೆ ತಪಸ್ವಿಗಳ ಯಾವುದೋ ತಪೋವನದಲ್ಲಿ ಸಿತನೆಂಬ ತಪಸ್ವಿಗೆ, ಆತನ ಸತಿ ಮೃಗಶೃಂಗಿಣಿಗೆ ಮಧುವೆಂಬ ಮಗನಾದೆನು. ಆ ತಪೋವನದಲ್ಲೇ ಬೆಳೆದೆನು. ಒಂದು ದಿನ ಯಾವನೋ ಶ್ರಾವಕನು ವಿನಯದತ್ತನೆಂಬ ಮುನಿಗೆ ಆಹಾರದಾನ ಮಾಡಿದನು. ಅದರ ಮಾಹಾತ್ಮ್ಯ ಕಂಡು ನಾನು ದೀಕ್ಷೆಯನ್ನು ಗ್ರಹಿಸಿದೆ. ಫಲವಾಗಿ ಸ್ವರ್ಗದಲ್ಲಿ ಜನಿಸಿ ಆಮೇಲೆ ಅಲ್ಲಿಂದ ಚ್ಯುತನಾಗಿ ಬಂದು ಕೀಚಕನಾದೆ. ತಾಯಿ ಸುಕುಮಾರಿಕೆ ಹಲಗಾಲ ತೊಳಲಾಡುತ್ತ ಸಂಸಾರಕ್ಲೇಶಗಳನ್ನು ಅನುಭವಿಸುತ್ತಿದ್ದು ಕೊನೆಗೆ ದೌರ್ಭಾಗ್ಯಯುತವೂ ದುಃಖದಾಯಕವೂ ಆದ ಒಂದು ಹೆಣ್ಣುಜನ್ಮ ಪಡೆದಳು. ಆಗ ಅವಳ ಹೆಸರು ಅನುಮತಿಕಾ ಎಂದಾಗಿತ್ತು. ಕೊನೆಗೆ ನಿದಾನಗೊಂಡು ತಪವಾಚರಿಸಿ ದ್ರೌಪದಿಯಾದಳು. ಈ ಕಾರಣವೇ ಅವಳಲ್ಲಿ ನನಗೆ ಮೋಹವುಂಟಾದದ್ದು.

ಹೀಗೆ ತಾಯಿಯೇ ಸೋದರಿಯಾಗುತ್ತಾಳೆ, ಮಗಳೇ ಹೆಂಡತಿಯಾಗುತ್ತಾಳೆ. ಹೆಂಡತಿ ತಾಯಿಯರು ಸೋದರಿ ಪುತ್ರಿಯಾಗುತ್ತಾರೆ. ಅಚ್ಚರಿಯ ಮಾತೆಂದರೆ ಸಂಸಾರ ಚಕ್ರದಲ್ಲಿ ತೊಳಲಾಡುವ ಜೀವರಲ್ಲಿ ಸಂಕರ ವ್ಯತಿಕರಗಳು ನಿಯಮಪೂರ್ವಕವಾಗಿ ಆಗುತ್ತಲೇ ಇರುತ್ತವೆ. ಆದ್ದರಿಂದ ಎಲೈ ಭವ್ಯಜೀವರೇ, ಸಂಸಾರದ ವೈಚಿತ್ರ್ಯವನ್ನು ಚೆನ್ನಾಗಿ ಪರಿಭಾವಿಸಿ, ವೈಷಯಿಕಸುಖದಿಂದ ವೈರಾಗ್ಯಗೊಂಡು ಸದಾಚಾರದಿಂದ ನಡೆದು ತಪಸ್ಸಿನ ಮೂಲಕವಾಗಿ ಮೋಕ್ಷದ ಯತ್ನ ಮಾಡಿ."

ಈ ರೀತಿ ಈ ಕೀಚಕಮುನಿ ಹೇಳಿದ್ದನ್ನು ಕೇಳಿ ಯಕ್ಷನು ತನ್ನ ದೇವಿಯರ ಸಂಗಡ ಸಮ್ಯಕ್ತ್ವವನ್ನು ಗ್ರಹಿಸಿದನು. ಆಮೇಲೆ ಮುನಿಗೆ ವಂದಿಸಿ, ಅಲ್ಲಿಂದ ತೆರಳಿ, ವನದಲ್ಲಿ ಅಂತರ್ಹಿತನಾದನು.

## ೪೭. ಕುರುವಂಶ ಪ್ರದ್ಯುಮ್ನಮಾತೃಪಿತೃಸಮಾಗಮ ವರ್ಣನ

ಕೀಚಕನ ತಮ್ಮಂದಿರ ವೃತ್ತಾಂತವಾಯಿತು. ಅದಾದ ಮೇಲೆ ಭೀಮಾರ್ಜುನರ ಕೋಪಾಗ್ನಿಗೆ ಭಸ್ಮವಾದ ಶತ್ರುವನಾಂತರದ ಗೋಗ್ರಹಣ ವೃತ್ತಾಂತವಾಯಿತು. ಆಗಲೂ ಪಾಂಡವರು ನಿಜಮರ್ಯಾದೆ ಬಿಟ್ಟುಕೊಡದೆ ಒಕ್ಕಟ್ಟಾಗಿ ತಮ್ಮ ತಂದೆ ಪಾಂಡುವಿನ ಭವನದಲ್ಲಿ ಸೇರಿದರು. ಆ ವೇಳೆಗೆ ಅವರ ಪ್ರತಿಜ್ಞೆಯ ಅವಧಿಯು ತೀರಿತ್ತು. ಧರ್ಮರಾಜನಾದ ಯುಧಿಷ್ಠಿರನ ಆಜ್ಞೆಯಂತೆ ಭೀಮಾದಿಗಳು ಯುದ್ಧದಲ್ಲಿ ದುರ್ಯೋಧನನೊಂದಿಗೆ ಹೋಗಿ ನಿಂತರು. ಎಲ್ಲರ ಇಷ್ಟವ್ಯಕ್ತಿಗಳಾದರು. ಸರ್ವರ ಮನೋರಥವನ್ನೂ ಪೂರೈಸುವ, ಸಿರಿಸಂಪದದಿಂದ ತಣಿಸುವ ಪಾಂಡವರು ಅತ್ಯಂತ ಉಚ್ಚಪದವನ್ನು ಪಡೆದರು. ದಾಯಾದ್ಯರಾದ ದುರ್ಯೋಧನಾದಿಗಳು ಮೇಲೆಮೇಲೆ ಅವರನ್ನು ಸಂತೋಷವಾಗಿರುವಂತೆ ನೋಡಿಕೊಳ್ಳುತ್ತಿದ್ದರೂ, ಕೆಲವು ದಿವಸಗಳಿಗೆ ಮತ್ತೆ ಮನಸ್ಸಿನಲ್ಲಿಯೇ ಕ್ಷುಬ್ಧರಾದರು. ಮುನ್ನಿನಂತೆ ಸಂಧಿಯಲ್ಲಿ ದೋಷವನ್ನೆತ್ತಲು ಆರಂಭಿಸಿದರು. ಭೀಮಾರ್ಜು